# ಕರ್ನಾಟಕ ಲೋಚನ

ಸಂಪುಟ ೪ ಡಿಸೆಂಬರ್ ೧೯೯೧ ಸಂಚಿಕೆ ೨

## ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

Annual Subn : Rs. 10-00 ವಾರ್ಷಿಕ ಚಂದಾ : ರೂ. ೧೦-೦೦

Subn for life : 100-00 ಅಜೀವ : ೧೦೦-೦೦

# ‘ಕರ್ನಾಟಕ ಲೋಚನ’



**ಲೇಖನಗಳು–ಟಿಪ್ಪಣಿಗಳು**

ಸಂಶೋಧನಾತ್ಮಕ ಪಾಂಡಿತ್ಯಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು–ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ ಇವುಗಳಿಗೆ ಸಂಬಂಧಿಸಿದ ಟೀಕೆ ಟಿಪ್ಪಣಿಗಳು–ಇವುಗಳಿಗೆ ‘ಲೋಚನ’ ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

**ಲೇಖನಗಳಿಗೆ ಆಹ್ವಾನ**

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾದ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿ ಕೊಡಬೇಕೆಂದು ವಿನಂತಿ. ‘ಲೋಚನ’ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

(74ನೇ ಪುಟದಲ್ಲಿ ಮುಂದುವರಿದಿದೆ)

# ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
54, 3ನೇ ಕ್ರಾಸ್, ಗವಿಪುರ ವಿಸ್ತರಣ, ಬೆಂಗಳೂರು-19

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ
ಸಹ ಸಂಪಾದಕರು : ಎಸ್. ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ ೪ ಡಿಸೆಂಬರ್ ೧೯೮೧ ಸಂಚಿಕೆ ೨


## ಪರಿವಿಡಿ


1. ಮಾಸ್ತಿಯವರ ಕತೆಗಳಲ್ಲಿ ಭಾಷೆ
—ಡಾ|| ಕೃಷ್ಣಪರಮೇಶ್ವರ ಭಟ್ಟ 1

2. ಅಪ್ರಕಟಿತ ನಾಲ್ಕು ವೃತ್ತಗಳು
—(ಸಂ) ಎಸ್. ಶಿವಣ್ಣ 12ಎ

3. ಕಾವ್ಯದಲ್ಲಿ ರಸವು ಸರ್ವ ಪ್ರಯೋಜನವೆ ಮೌಲೀಭೂತವಲ್ಲ
—ಸಿ. ಓಂಕಾರಪ್ಪ 13

4. ಶೀಲಾಂಕನ 'ಚಉಪ್ಪನ್ನ ಮಹಾಪುರಿನ ಚರಿಯಂ'
—ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರೀ 40

5. ವೇದ-ಪುರಾಣ-ಮಹಾಕಾವ್ಯ
—ಡಾ|| ಶಂಕರ ಮೊಕಾಶಿ ಪುಣೇಕರ 46

ಟೀಕೆ-ಟಿಪ್ಪಣಿ

6. ಕನಕದಾಸರ ಮೂರು ಅಪ್ರಕಟಿತ ಕೀರ್ತನೆಗಳು
—ಎಚ್. ಜಿ. ಶ್ರೀಧರ 52

7. ಶುಂಭಿನೀ : ಒಂದು ಟಿಪ್ಪಣಿ
—ಯು. ಕೃಷ್ಣಶರ್ಮಾ 57

8. ಗ್ರಂಥ ವಿಮರ್ಶೆ : ಕವಿರಾಜಮಾರ್ಗದ ಅಲಂಕಾರಾರ್ಥ ಭಾವವಾದ
—ಪಿ. ವಿ ಜೋಶಿ 60

9. ವಸ್ತು ಸಂಗ್ರಹ 66

10. ಪ್ರತಿಷ್ಠಾನ ವಾರ್ತೆ 68

# Karnataka Lochana

Half-Yearly Journal, Published by B. M. Sri Memorial Foundation,
54, 3rd Cross, Gavipuram Extn. Bangalore-560 019.



Vol IV — December 19 1 — No : 2

## Contents

1. Language in the Stories of Masti
   —Dr. Krishna Paramashwar Bhat ... 1
2. From unpablished Quatrains —S. Shivanna ... 12A
3. Rasa in Poem is not the Main Point
   —C. Omkarappa ... 13
4. Chauppanna Mahapurisa Chariyem of Sheelanka
   —Dr. T. V. Vankatachala Shastry ... 40
5. Veda-Purna Great Poem
   —Dr. Shankara Mokashi Punekar ... 46

**Notes and Gloss**

6. Three unpublished Songs of Kanakadasa
   —H. G. Sridhar ... 52
7. Kumbhini : A gloss —Ya. Krishna Sharma ... 57
8. Book-Review ... 60
9. Miscellaneous Notes ... 66

# ಮಾಸ್ತಿಯವರ ಕತೆಗಳ ಭಾಷೆ*

—ಕೃಷ್ಣ ಪರಮೇಶ್ವರ ಭಟ್ಟ

1

ಮಾಸ್ತಿಯವರ ಸಣ್ಣಕತೆಗಳನ್ನು ಗಮನದಲ್ಲಿಟ್ಟುಕೊಂಡು ಅವರು ಬಳಸಿದ ಭಾಷೆ, ತಂತ್ರಗಳನ್ನು ಕುರಿತು ಕೆಲವು ಅಭಿಪ್ರಾಯಗಳು ಈಗಾಗಲೇ ಪ್ರಕಟವಾಗಿವೆ. ಅವುಗಳಲ್ಲಿ ಕೆಲವನ್ನು ಪ್ರಾತಿನಿಧಿಕವಾಗಿ ಇಲ್ಲಿ ಗಮನಿಸಬಹುದು: "ಅವರು ಹೇಳುವ ಕ್ರಮ ನೇರವಾಗಿ, ಮಧುರವಾಗಿ ನಯವಾದ ಮಾತು ಮತ್ತು ಸಣ್ಣ ಸಣ್ಣ ವಾಕ್ಯಗಳು; ವಾಕ್ಯಗಳ ಜೊತೆಯಲ್ಲಿ ಸೇರಿಕೊಂಡು ಇರುವ ಸಾಮ್ಯಗಳು...." (ಗೊರೂರು, 1972): ನಿರುದ್ವಿಗ್ನವಾದ ನಿರೂಪಣಾ ವಿಧಾನ ಇವರ ಬರವಣಿಗೆಯ ಮುಖ್ಯ ಲಕ್ಷಣ. (ಎಂ. ಜಿ. ಕೃಷ್ಣಮೂರ್ತಿ, ಕತೆ ಮತ್ತು ನೈಜ ಅನುಭವಗಳಿಗೆ ದೂರ ಏರ್ಪಡುವುದಕ್ಕಾಗಿ ಮಾಸ್ತಿಯವರು ಕೆಲವು ತಂತ್ರಗಳನ್ನು ಉಪಯೋಗಿಸುತ್ತಾರೆ. ಮುಖ್ಯವಾದವು: 1 ಕತೆ ನಡೆದ ಕಾಲ ಮತ್ತು ಹೇಳುವ ಕಾಲಗಳನ್ನು ದೂರ ಇಡುವುದು, 2 ಕತೆ ಹೇಳುವ ಪಾತ್ರ ಹಾಗೂ ಕತೆಗಳಲ್ಲಿ ಮುಖ್ಯ ಪಾತ್ರವಹಿಸುವ ಪಾತ್ರಗಳ ಜಾತಿ, ವರ್ಗ, ವಯಸ್ಸುಗಳ ವ್ಯತ್ಯಾಸಗಳನ್ನು ಓದುಗರ ಗಮನಕ್ಕೆ ತರುವುದು,... ( ಎಂ. ಜಿ. ಕೃಷ್ಣಮೂರ್ತಿ,1972 ); ಮಾಸ್ತಿಯವರು ನಮ್ಮರಿಗೆ ಸಹಜವಾದ. ಕೇಂದ್ರಕ್ಕೆ ಬದ್ಧವಾದ ದೃಷ್ಟಿಕೋನವನ್ನು ಹೊಂದದೆ, ಸರ್ವಸಾಕ್ಷಿತ್ವದ ನಿರೂಪಣಾ ತಂತ್ರವನ್ನು ಬಳಸುವುದರಿಂದ ಅವರ ಬರವಣಿಗೆ ಹೆಚ್ಚು ವ್ಯಾಪಕವಾಗುತ್ತದೆ (ಕೆ.ಪಿ. ವಾಸುದೇವನ್, 1981). ಮಾಸ್ತಿಯವರು ಸಾಮಾಜಿಕ ವಸ್ತುವನ್ನುಳ್ಳ ತಮ್ಮ ಕತೆಗಳಲ್ಲಿ ನಿರೂಪಕನೊಬ್ಬನನ್ನು ಅಥವಾ ಕೆಲವೊಮ್ಮೆ ನಿರೂಪಕರ ಒಂದು ಬಳಿಯನ್ನೇ ತರುತ್ತಾರೆ, ಇದು ರಾಮಾಯಣ, ಮಹಾಭಾರತ ಅಥವಾ ಜನಪದ ಕತೆಗಳಲ್ಲಿ ಕಾಣುವಂತಹ ತಂತ್ರವೇ. ಕತೆ ಹಳೆಯದು ಎಂದು ತೋರಿಸುವುದರ ಮೂಲಕ ಅದರ ಬಗೆಗೆ ವಿಶ್ವಾಸ ಹುಟ್ಟಿಸಲು ಇದರಿಂದ ಸಾಧ್ಯವಾಗುತ್ತದೆ (ಗಿರಡ್ಡಿ ಗೋವಿಂದರಾಜ, 1986), ಈ ಮೇಲಿನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಮಾಸ್ತಿ ಅವರ ಕತೆಗಳ ಭಾಷೆಯನ್ನು ಗಮನಿಸಿ ಕೆಲವು ಮಾತುಗಳನ್ನು ಹೇಳಲು ಇಲ್ಲಿ ಪ್ರಯತ್ನಿಸಲಾಗಿದೆ.

*29-11-90ರಂದು ನಡೆದ ಜಿ.ಪಿ. ರಾಜರತ್ನಂ ಹಾಗೂ ವೆಂಕಟರಂಗಪ್ಪ ಸ್ಮಾರಕ ದತ್ತಿ ಉಪನ್ಯಾಸ.

ಕತೆಯ ಭಾಷೆಯ ಬಂಧವನ್ನು ಮುಖ್ಯವಾಗಿ ಎರಡು ಅಂಗಗಳಿಂದ ಕೂಡಿದ ಘಟಕವೆಂದಾಗಿ ಪರಿಗಣಿಸಬಹುದೆಂದು ತೋರುತ್ತದೆ. ಒಂದು, ಕತೆಯ ನಿರೂಪಕನಿಂದ ಬಂದ ಮಾತುಗಳು; ಎರಡು, ಕತೆಯಲ್ಲಿಯ ಪಾತ್ರಗಳು ನಡೆಸುವ ಸಂಭಾಷಣೆಗಳು. (ಕೇವಲ ನಿರೂಪಕನ ಮಾತುಗಳಿಂದಲೇ ಕೂಡಿದ ಅಥವಾ ಕೇವಲ ಸಂಭಾಷಣೆಗಳ ಮೂಲಕವೇ ರಚಿತವಾದ ಕತೆಗಳಿರಬಹುದಾದರೂ ಅವುಗಳ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ.) ನಿರೂಪಕನ ಭಾಷೆ ಬಹುಮಟ್ಟಿಗೆ ಒಂದೇ ಮಾದರಿಯದ್ದಾಗಿರಬಹುದು ಇಲ್ಲವೇ ಬೇರೆಯದಾಗಿರಬಹುದು. ಮಾಸ್ತಿಯವರ ಕತೆಗಳ ವಿಷಯದಲ್ಲಿ ಇವೆರಡೂ ಬೇರೆ ಬೇರೆಯಾಗಿಯೇ ಇವೆ. ಆದ್ದರಿಂದ ಮಾಸ್ತಿಯವರ ಕತೆಗಳನ್ನು ಒಟ್ಟಾಗಿ ಗಮನಿಸಿ ಅವುಗಳ ಭಾಷೆಯಲ್ಲಿ ಸಾಮಾನ್ಯವಾಗಿ ತೋರುವ ಲಕ್ಷಣಗಳನ್ನು ಹೇಳುವಾಗ ನಿರೂಪಕನ ಭಾಷೆಯನ್ನೇ ಗಮನದಲ್ಲಿರಿಸಿಕೊಳ್ಳಲಾಗಿದೆ.

ಶಾಬ್ದಿಕಸ್ತರದಲ್ಲಿ ಮಾಸ್ತಿಯವರು ಬಹುಮಟ್ಟಿಗೆ ಆಡುಭಾಷೆಗೆ ಸಮೀಪವಾದ ರೂಪಗಳನ್ನೇ ಬಳಸುವರಾದರೂ ಕೆಲವೊಮ್ಮೆ ಕೆಲವು ಕನ್ನಡ ಶಬ್ದಗಳಿಗೆ ಪರ್ಯಾಯವಾಗಿ ಸಂಸ್ಕೃತ ಶಬ್ದಗಳನ್ನೂ ಕೇವಲ ಗ್ರಾಂಥಿಕ ರೂಪವೆನ್ನಿಸುವ ಪದಪುಂಜಗಳನ್ನೂ ಬಳಸುತ್ತಾರೆ. ಉದಾಹರಣೆಗೆ, ಒಂದೇ ಕತೆಯಲ್ಲಿ ನಾರಿ-ಹೆಂಗಸು, ಯಜ್ಞೇಶ್ವರ–ಬೆಂಕಿ, ಗೃಹ–ಮನೆ ಎಂಬ ಸಮಾನಾರ್ಥಕ ಶಬ್ದಗಳು (ಹಿನ್ನೆಲೆಯ ಸಂದರ್ಭ ವ್ಯತ್ಯಾಸವಿಲ್ಲದೆ) ಪರ್ಯಾಯರೂಪಗಳಾಗಿ ಬಳಕೆಯಾಗುತ್ತವೆ. ಸಂತೋಷವನ್ನು ಪ್ರಕಟಮಾಡಿದನು, ವ್ಯಾಕುಲಚಿತ್ತನಾದನು, ಸುಖವನ್ನು ಅನುಭವ ಮಾಡಿದನು – ಇತ್ಯಾದಿಯಾದ ರೂಪಗಳು ಕೇವಲ ಗ್ರಾಂಥಿಕವೆನ್ನಿಸಬಹುದಾದಂಥವು. ಈ ರೀತಿಯ ಬಳಕೆ ಮಾಸ್ತಿಯವರ ಮೊದಮೊದಲಿನ ಕತೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ ಎಂಬುದು ಗಮನಿಸಬೇಕಾದದ್ದು. ಅದು ಕನ್ನಡದ ಪ್ರಾರಂಭಿಕ ಕಥೆ-ಕಾದಂಬರಿಗಾರರನೇಕರ ಬರವಣಿಗೆಯಲ್ಲಿಯೂ ಕಾಣುವುದರಿಂದ ಮಾಸ್ತಿಯವರ ವೈಯಕ್ತಿಕ ಲಕ್ಷಣವಾಗಿರದೇ ಆ ಕಾಲದ ಕಥಾಸಾಹಿತ್ಯದ ಭಾಷೆಯೊಂದು ರೂಪುಗೊಳ್ಳುತ್ತಿದ್ದಾಗ ಕಾಣಿಸಿಕೊಂಡ ಲಕ್ಷಣವಾಗಿದೆ, ಅಂತೆಯೇ ವಾಚಕರನ್ನು ಕುರಿತು 'ಪ್ರಿಯ ವಾಚಕರೇ' 'ಪ್ರಿಯ ಪಾಠಕರೇ' ಎಂಬ ಸಂಬೋಧನೆಯ ಬಳಕೆಯೂ ಇಂತಹ ಇನ್ನೊಂದು ಲಕ್ಷಣ. ಇದೂ ಮಾಸ್ತಿಯವರ ಮೊದಮೊದಲ ಕತೆಗಳಲ್ಲಿಯೇ ಕಾಣಿಸಿಕೊಳ್ಳುತ್ತದೆ.

ಮಾಸ್ತಿಯವರ ಕತೆಗಳಲ್ಲಿ, ಅದರಲ್ಲಿಯೂ ನಿರೂಪಕನ ಭಾಷೆಯಲ್ಲಿ ಭಾವ ಸೂಚಕ ಪದಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಈ ಸಂಗತಿಯನ್ನು ವಿಮರ್ಶಕರು ಈಗಾಗಲೇ ಕಂಡುಕೊಂಡಿದ್ದಾರೆ. "ನಿರುದ್ವಿಗ್ನದಾದ ಬರವಣಿಗೆ" ಎಂಬ ಎಂ.ಜಿ. ಕೃಷ್ಣಮೂರ್ತಿಯವರ ಮಾತು ಪರೋಕ್ಷವಾಗಿ ಇದನ್ನೇ ಹೇಳುತ್ತದೆ. ವಾಕ್ಯರಚನೆಯ ವಿಷಯದಲ್ಲಿಯೂ ಮಾಸ್ತಿಯವರ ಭಾಷೆ ಆಡುಮಾತಿಗಿಂತ

ದೂರವಿಲ್ಲ. ಸಾಮಾನ್ಯವಾಗಿ ಎರಡು, ಮೂರಕ್ಕಿಂತ ಹೆಚ್ಚಿನ ಒಳ ವಾಕ್ಯವನ್ನೊಳಗೊಳ್ಳದ ವಾಕ್ಯಗಳು: ದೀರ್ಘವಾಕ್ಯಗಳಲ್ಲಿ ಸಾಮಾನ್ಯವಾಗಿ, ಮೂಲವಾಕ್ಯದ ಕೊನೆಯ ಕ್ರಿಯಾಪದ ಕೃದ್‌ರೂಪವಾಗಿ ಬದಲಾಗಿ ಮುಂದಿನ ಇನ್ನೊಂದು ಮೂಲ ವಾಕ್ಯದೊಂದಿಗೆ ಸೇರುತ್ತದೆ. ಈ ಕ್ರಮದಿಂದಾದ ದೀರ್ಘವಾಕ್ಯಗಳು ಅರ್ಥ ಸಂವಹನದ ದೃಷ್ಟಿಯಿಂದ ಮೂಲದ ಸರಳವಾಕ್ಯಗಳಿಗಿಂತ ಹೆಚ್ಚಿನ ತೊಡಕನ್ನು ಒಡ್ಡುವುದಿಲ್ಲ. (ಉದಾ: "ನಾನು ಕೆಲವು ವರ್ಷಗಳ ಹಿಂದೆ ದಿನವೂ ಬೆಳಗಾಗ ನಮ್ಮ ವಾಸದ ವಿಸ್ತರಣದ ಹತ್ತಿರದ ಹಳ್ಳಿಗಳನ್ನು ದಾಟಿ ಹತ್ತಿರ ಹತ್ತಿರ ಒಂದೂವರೆ ಗಂಟೆ ಗುಡ್ಡ ಬಯಲಿನ ದಾರಿ ನಡೆದು ಮನೆಗೆ ಹಿಂದಿರುಗುವ ವಾಡಿಕೆ ಇಟ್ಟುಕೊಂಡಿದ್ದೆ." 'ಗುಡ್ಡದ ದೇವರು') ಹೆಚ್ಚಿನ ಸಂದರ್ಭಗಳಲ್ಲಿ ಸರಳವಾಕ್ಯಗಳನ್ನು ಸೇರಿಕೆಯ ಪದಗಳನ್ನು ಬಳಸಿ ದೀರ್ಘವಾಗಿಸಲಾಗುತ್ತದೆ. ಇನ್ನಿತರ ಕೆಲವು ವಿಧಾನಗಳೂ ಆಡುಭಾಷೆಯಲ್ಲಿ ಕಾಣಸಿಕೊಳ್ಳುವಂಥವೇ. ಈ ಬಗೆಗೆ ಹೆಚ್ಚಿನ ವಿವರಗಳನ್ನಿಲ್ಲಿ ಕೊಡಲು ಉದ್ದೇಶಿಸಿಲ್ಲ, – ಆದರೆ ಮಾಸ್ತಿಯವರು ಕ್ರಿಯಾಪದಗಳನ್ನು ಭೂತಕೃತ್‌ನಾಮವಾಗಿ (cleft forms–ಹೇಳಿದ್ದು, ಮಾಡಿದ್ದು ಇತ್ಯಾದಿ) ಪರಿವರ್ತಿಸಿ ಸ್ಥಳಾಂತರಗೊಳಿಸಿ ಬಳಸಿದ ಉದಾಹರಣೆಗಳು ಬಹು ಕಡಿಮೆ ಎಂಬುದು ಗಮನಿಸಬೇಕಾದದ್ದು. (ಈ ಮಾತನ್ನು ಹೇಳುವಾಗ ಆಗಲೀ ಮುಂದೆ ಮತ್ತೆ ಕೆಲವು ರೂಪಗಳ ಬಳಕೆಯನ್ನು ಕುರಿತು ಹೇಳುವಾಗ ಆಗಲೀ ಇದಕ್ಕೆ ಆಧಾರವಾಗಿ ಖಚಿತವಾದ ಅಂಕೆ ಸಂಖ್ಯೆಗಳನ್ನು ನೀಡದೆ ಒಟ್ಟಿನ ಓದಿನಿಂದ ರೂಪಿತವಾದ ಅಭಿಪ್ರಾಯದಿಂದ ಹೇಳುತ್ತಿದ್ದೇನೆ.) ಮಾಸ್ತಿಯವರ ವಾಕ್ಯಗಳು ಅರ್ಥಗ್ರಹಿಕೆಗೆ ಹೇಗೆ ಸುಲಭವಾಗಿ ಒದಗುತ್ತವೆ ಎಂಬುದನ್ನು–ಕೇವಲ ಕುತೂಹಲಕ್ಕಾಗಿ–ಯಶವಂತ ಚಿತ್ತಾಲರ ಕತೆಗಳ ಒಂದೆರಡು ವಾಕ್ಯಗಳ ಹಿನ್ನೆಲೆಯಲ್ಲಿಟ್ಟು ನೋಡಬಹುದು.

1. "ಮಧ್ಯಾಹ್ನದ ನಿದ್ದೆ ಮುಗಿಸಿ ಚಹ ಕುಡಿಯುತ್ತ ಬಾಲ್ಕನಿಯಲ್ಲಿ ಕೂತಿರುವ ಹೊತ್ತಿಗೆ ಕದದ ಕರೆಗಂಟೆ ಸದ್ದು ಮಾಡಿದ್ದು ಕೇಳಿಸಿ ಯಾರಿರಬಹುದೆಂದು ತಿಳಿಯಲು ಆತುರನಾಗಿರುವಾಗ ಕದ ತೆರೆದ ಅವನ ಹೆಂಡತಿಯ ಹಿಂದೆಯೇ ಒಳಬಂದ ಎಳೆಯ ಪ್ರಾಯದ ಹುಡುಗಿ ಬಾಲ್ಕನಿಯಲ್ಲಿ ಕೂತ ಅವನೆದುರು ನಿಂತು, ನಮಸ್ಕಾರ ಮಾಡುತ್ತಾ, "ಮಾಮಾ, ನಾನು ನಿಮ್ಮ ದಾಸಣ್ಣನ ಮಗಳು – ರೇಖಾ" ಎಂದಾಗ ಕಣ್ಣು ಕಿವಿಗಳನ್ನು ನಂಬದಾದ."
('ಮಾತಿನಲ್ಲಿ ಬರಲು ಒಪ್ಪದ ದಾಸಣ್ಣ' ಪು 1)

2. "ತೆರೆಗಳು ಒಡೆಯುವ ಕ್ಷಣದಲ್ಲೇ ಪರಿಶುಭ್ರ ನೊರೆಯಾಗುತ್ತ ಬಿಸಿಲಲ್ಲಿ ಹೊಳೆಯುವ ಬಗೆ ನಿತ್ಯ ಪರಿಚಯದ್ದಾಗಿಯೂ ಅದರ ಅಲೌಕಿಕ ಘನತೆ ಕಣ್ಣು ತುಂಬಿರುವ ಹೊತ್ತಿಗೆ ಸುಂದರವಾದ ಹಲ್ಲುಗಳ ಸಾಲುಗಳನ್ನು ತೋರಿಸಿ ನಗುತ್ತ

ಉಲ್ಲಾಸ ವ್ಯಕ್ತಪಡಿಸಿದ ಹುಡುಗಿಯ ಆರೋಗ್ಯಪೂರ್ಣ ಲಾವಣ್ಯಕ್ಕೆ ಖುಷಿಯಾಯಿತು." (ಅದೇ. ಪು. 1–2)

ಮೇಲೆ, ಮೊದಲ ಉದಾಹರಣ ವಾಕ್ಯದಲ್ಲಿ ಕೊನೆಯ ಪಕ್ಷ ಮೂರು ಸ್ಥಾನಗಳಲ್ಲಿ 'ಅವನು' ಎಂಬ ಕರ್ತೃಪದವನ್ನು ಅಧ್ಯಾಹಾರಗೊಳಿಸಲಾಗಿದೆ. (ಕ್ರಮವಾಗಿ ವಾಕ್ಯದ ಪ್ರಾರಂಭದಲ್ಲಿ;'ಆತುರನಾಗಿರುವಾಗ' ಎಂಬ ಪದಕ್ಕೆ ಮೊದಲು ಹಾಗು 'ಕಣ್ಣು ಕಿವಿಗಳನ್ನು' ಎಂಬುದಕ್ಕೆ ಮೊದಲು) ಈ ರೀತಿ ಅಧ್ಯಾಹಾರಗೊಳಿಸುವುದು ಸಾಮಾನ್ಯ ಭಾಷೆಯಲ್ಲಾಗಲೀ ಮಾಸ್ತಿಯವರ ವಾಕ್ಯಗಳಲ್ಲಾಗಲೀ ಅಸಮಾನ್ಯವೇನಲ್ಲ ಆದರೆ ಈ ವಾಕ್ಯದಲ್ಲಾದಂತೆ ಮೊದಮೊದಲು (ಒಳವಾಕ್ಯಗಳಲ್ಲಿ) ಅಧ್ಯಾಹಾರಗೊಳಿಸಿ ಮುಂದೆ ಅದನ್ನು ಬಳಸುವುದು ಅಪರೂಪದ ಸಂಗತಿ, ಹಾಗು ಇದು ಕರ್ತೃವಿನ ಕುರಿತಾದ ನಿರೀಕ್ಷೆಯನ್ನು ತಡೆಯುವುದರಿಂದಾಗಿ ಅರ್ಥಗ್ರಹಿಕೆಯಲ್ಲಿ ವಿಳಂಬಕ್ಕೆ ಕಾರಣವಾಗುತ್ತದೆ ಎಂದು ಹೇಳಬಹುದು. ಜೊತೆಗೆ ಮೇಲಿನ ವಾಕ್ಯದಲ್ಲಿ ಅಡಗಿರುವ ಒಳವಾಕ್ಯಗಳ ಕರ್ತೃ ಉದ್ದಕ್ಕೂ ಪರಸ್ಪರ ಬದಲಾಗುವುದನ್ನು ಗಮನಿಸಬಹುದು: "ಮಧ್ಯಾಹ್ನದ....ಹೊತ್ತಿಗೆ" ಎಂಬ ಭಾಗದ ಕರ್ತೃ 'ಅವನು' ; ಮುಂದೆ "ಕದದ.. ಮಾಡಿದ್ದು" ಭಾಗಕ್ಕೆ ಕರ್ತೃ 'ಯಾರೋ' ಅಥವಾ 'ಕರೆಗಂಟೆ' ; ಮತ್ತೆ "ಯಾರಿರಬಹುದು" ಎಂಬಲ್ಲಿ 'ಯಾರು';"ತಿಳಿಯಲು ಆತುರನಾಗಿರುವಾಗ" ಎಂಬುದಕ್ಕೆ ಕರ್ತೃ 'ಅವನು' ; "ಕದತೆರೆದು....ಹುಡುಗಿ"; ಎಂಬಲ್ಲಿ 'ಹುಡುಗಿ'"ಬಾಲ್ಕನಿಯಲ್ಲಿ ಕೂತ ಅವನೆದುರು" ಎಂಬಲ್ಲಿ 'ಅವನು' ; ಮುಂದೆ "ನಾನು... ರೇಖಾ" ಎಂಬ ಭಾಗಕ್ಕೆ 'ಹುಡುಗಿ' ಕರ್ತೃ:ಪುನಃ "ಕಣ್ಣು...ನಂಬದಾದ" ಎಂಬುದಕ್ಕೆ ಕರ್ತೃ 'ಅವನು', ಹೀಗೆ ಈ ವಾಕ್ಯದ ಒಳಗೆ 'ಅವನು' ಹಾಗೂ 'ಯಾರೋ!ಹುಡುಗಿ' ಅನೇಕ ಬಾರಿ ಕರ್ತೃಗಳಾಗಿ ಪರಸ್ಪರ ಬದಲಾಗಿವೆ. ಈ ರೀತಿ ವಿಭಿನ್ನ ಕರ್ತೃಗಳಿರುವ ಅನೇಕ ವಾಕ್ಯಗಳನ್ನು ವಾಕ್ಯಭಾಗವನ್ನಾಗಿ ರೂಪಾಂತರಿಸಿ ಒಂದೇ ವಾಕ್ಯದೊಳಗೆ ತೂರಿಸುವ ವಿಧಾನ ಮಾಸ್ತಿಯವರಲ್ಲಿ ಇಲ್ಲವೆನ್ನಬಹುದು. (ಮೇಲೆ ಉದಾಹರಿಸಿದ ಚಿತ್ತಾಲರ ಇನ್ನೊಂದು ವಾಕ್ಯವೂ ಅಂತರ್ಯದಲ್ಲಿ ಅನೇಕ ಕರ್ತೃಗಳನ್ನೊಳಗೊಂಡಿದ್ದೇ.) ಮೇಲಿನ ವಾಕ್ಯಗಳು ಅರ್ಥಗ್ರಹಿಕೆಯನ್ನು ವಿಲಂಬಗೊಳಿಸಲು ಈ ರೀತಿಯ ಅಡಕರಚನೆಯೂ ಒಂದು ಮುಖ್ಯಕಾರಣ. (ಚಿತ್ತಾಲರ ವಾಕ್ಯಗಳು ಅರ್ಥಗ್ರಹಿಕೆಯ ವಿಷಯದಲ್ಲಿ ಬಹುಷಃ ಇನ್ನೊಂದು ಅತಿಗೆ ವಾಲುವ ಮಾದರಿಯವೆಂದು ಕಾಣುತ್ತವೆ.) ಜೊತೆಗೆ ಎರಡನೇ ಉದಾಹರಣ ವಾಕ್ಯದಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯಿಕ ಭಾಷೆಗೆ ವಿಶೇಷವೆನಿಸುವ ನಿತ್ಯ ಪರಿಚಯ, ಆರೋಗ್ಯಪೂರ್ಣ ಲಾವಣ್ಯ, ಅಲೌಕಿಕ ಘನತೆ ಕಣ್ಣುತುಂಬಿರುವ ಎಂಬ ಸಮಾಸ, ವಾಕ್ಯರಚನೆಗಳು, ಈ ವಿಲಂಬವನ್ನು ಅನುಕೂಲಿಸುತ್ತವೆ. ಮಾಸ್ತಿಯವರ ವಾಕ್ಯಗಳು ಶಬ್ದಕೋಶದ ವಿಷಯದಲ್ಲಾಗಲೀ, ವಾಕ್ಯದೊಳಗೆ ಅಡಕಿಸಿದ ಒಳವಾಕ್ಯಗಳ ಸಂಖ್ಯೆಯ ವಿಷಯದಲ್ಲಾಗಲೀ, ಅವು ಒಳಗೊಳ್ಳುವ ಕರ್ತೃಗಳು ಮತ್ತೆ

ಮತ್ತೆ ಬದಲಾಗುವ ವಿಷಯುದಲ್ಲಾಗಲೀ ದೈನಂದಿನ ಭಾಷೆಗಿಂತ ಬಹಳ ಬೇರೆಯಾಗಿರುವುದಿಲ್ಲ ಎಂಬುದಕ್ಕೆ ಹಿನ್ನೆಲೆಯಾಗಿ ಮೇಲಿನ ವಾಕ್ಯಗಳನ್ನು ಕೊಡಲಾಗಿದೆಯಷ್ಟೇ

3

ಬಿಡಿವಾಕ್ಯರಚನೆಯ ಸ್ತರದಲ್ಲಿ ಮಾಸ್ತಿಯವರ ಭಾಷೆ "ಸುಲಭಗ್ರಾಹ್ಯತೆ"ಯನ್ನು ವ್ಯಕ್ತಪಡಿಸುತ್ತದೆ ಎಂಬುದನ್ನು ನೋಡಿದ್ದೇವೆ. ಈಗ ಪರಿಚ್ಛೇದದ(paragraph) ಅಥವಾ ಇಡೀ ಕಥೆಯ ರಚನೆಯ ಹಂತದಲ್ಲಿ ಭಾಷೆಯ ಮೂಲಕ ವ್ಯಕ್ತವಾಗುವ ಕೆಲವು ಸಂಗತಿಗಳನ್ನು ಗಮನಿಸೋಣ. ಮಾಸ್ತಿಯವರ ಕಥೆಗಳಿಗೆ ಸಂಬಂಧಿಸಿದ ಕೆಲವು ವಿಶೇಷ ಲಕ್ಷಣಗಳು ವ್ಯಕ್ತವಾಗುವುದು ಈ ಹಂತದಲ್ಲಿಯೇ. ಇವು: 1. ಹೆಚ್ಚಿನ ಸಾಮಾಜಿಕ ಕತೆಗಳೆಲ್ಲ ಒಬ್ಬನಿಗಿಂತ ಹೆಚ್ಚಿನ ನಿರೂಪಕರನ್ನು ದಾಟಿ ಬಂದವುಗಳು, 2. ಹಲವಾರು ಸಾಮಾಜಿಕ/ಪೌರಾಣಿಕ ವಸ್ತುಗಳನ್ನುಳ್ಳ ಕತೆಗಳಲ್ಲಿ ಆಲೋಚನೆ/ಅನುಭವಗಳು ಕತೆಯ ಪಾತ್ರವೊಂದಕ್ಕೆ ಸೀಮಿತವಾದಂತೆ ಭಾಷೆ ಬಳಕೆಯಾಗಿರುವುದು, 3. ಭೂತ ಮತ್ತು ವರ್ತಮಾನಗಳ ಅಂತರವನ್ನು ಸೂಚಿಸುವ ರೀತಿಯಲ್ಲಿ ಪದಗಳನ್ನು ಪೂರ್ವಸೂಚಕಗಳಾಗಿ(anaphorically) ಬಳಸಿರುವುದು 4. ಮೇಲಿಂದಮೇಲೆ ಅದರಲ್ಲಿಯೂ ಪರಿಚ್ಛೇದಗಳ ಪ್ರಾರಂಭದಲ್ಲಿ ಕಾಲವಾಚಕ ಪದಪುಂಜಗಳನ್ನು ಬಳಸಿರುವುದು. 5: ಕತೆಯಲ್ಲಿಯ ಘಟನೆಗಳ ಕಾಲ ಅಥವಾ ಕಾಲದ ಗಡುವನ್ನು ಹೇಳುವ ಪದಗಳ ಬಳಕೆ, 6. ಕತೆಯಲ್ಲಿಯ ಘಟನೆಗಳನ್ನು ವ್ಯಕ್ತಿ / ಪರಿಸರಗಳಿಗೆ ಅನ್ವಯಿಸುವಂತೆ ಸಾಮಾನ್ಯೀಕರಣಗೊಳಿಸುವಂತಹ ವಾಕ್ಯಗಳ ಬಳಕೆ. ಈ ಲಕ್ಷಣಗಳನ್ನು ಒಂದೊಂದಾಗಿ ಸ್ವಲ್ಪ ವಿವರದಲ್ಲಿ ಈಗ ಪರಿಶೀಲಿಸೋಣ.

ಮಾಸ್ತಿಯವರ ಕತೆಗಳಲ್ಲಿ ಕೆಲವದರಲ್ಲಿ ಮಾಸ್ತಿಯವರೇ ನೇರವಾಗಿ, ನಿರೂಪಕರಾಗಿ ಹೇಳಿದಂತಿದ್ದರೆ ಇನ್ನು ಕೆಲವದರಲ್ಲಿ ಬೇರೆಯವರಿಂದ ಕೇಳಿದ ಕತೆಗಳನ್ನು ಎರಡನೆಯ ಅಥವಾ ಮೂರನೆಯ ಹಂತದ ನಿರೂಪಕರಾಗಿ ಹೇಳುತ್ತಾರೆಂದೂ ಅವರ ಬಹುಪಾಲು ಸಾಮಾಜಿಕ ಕತೆಗಳು ಎರಡನೆಯ ರೀತಿಯವೆಂದೂ ಈಗಾಗಲೇ ವಿಮರ್ಶಕರು ಗಮನಿಸಿದ್ದಾರೆ (ನೋಡಿ: ಗಿರಡ್ಡಿ ಗೋವಿಂದರಾಜ, 1986) 'ರಂಗನ ಮದುವೆ', 'ರಂಗಪ್ಪನ ದೀಪಾವಳಿ', 'ಬೈಚೇಗೌಡ', "ಚೆನ್ನಮ್ಮ" 'ನಳಿನಿಯ ತಂದೆ' ಮೊದಲಾದವು ಮೊದಲನೆಯ ಜಾತಿಗೆ ಸೇರಿದ್ದರೆ 'ಚಿಕ್ಕವ್ವ', 'ವೆಂಕಟಶಾಮಿಯ ಪ್ರಣಯ', "ಮಲೆನಾಡಿನ ಒಂದು ಪಿಶಾಚ" ಮೊದಲಾದವು ಎರಡನೆಯ ಜಾತಿಗೆ ಸೇರಿದ್ದು, ಬೇರೆಯವರು ಹೇಳಿದ ಕತೆಗಳನ್ನು ಮಾಸ್ತಿಯವರು ಎರಡನೆಯ ಅಥವಾ ಮೂರನೆಯ ನಿರೂಪಕರಾಗಿ ಹೇಳಿದಂತಿದೆ. ಇದು ಮಾಸ್ತಿಯವರು ಅನುಸರಿಸಿದ ತಂತ್ರಗಳಲ್ಲಿ ಒಂದೆಂದೂ ಕತೆಯ ದೂರವನ್ನು ಹೆಚ್ಚಿಸಿ ಅದರ ಬಗೆಗೆ ವಿಶ್ವಾಸ ಹುಟ್ಟಿಸುವುದು ಇದರ ಉದ್ದೇಶವೆಂದೂ ವಿಮರ್ಶಕರ ಅಭಿಪ್ರಾಯವಿದೆ. (ತಂತ್ರವೆಂಬುದು

ಕತೆಯು ಶಿಲ್ಪಕ್ಕಿಂತ ಬೇರೆಯಾದ, ಕತೆಯ ಸಂವಹನಕ್ಕಾಗಿ ಬಳಸಲಾದ ಅಥವಾ ನಿರ್ದಿಷ್ಟ ಪರಿಣಾಮವನ್ನು ಉದ್ದೇಶಿಸಿ ಬಳಸಲಾದ (ಶಿಲ್ಪಕ್ಕೆ ತೊಡಿಸಲಾದ) ಒಂದು ಹೊರಕವಚ (super structure) ಹಾಗೂ ಒಂದು ಉದ್ದೇಶಪೂರ್ವಕ ಆಯ್ಕೆ ಎಂಬ ಗ್ರಹಿಕೆ ಸಾಮಾನ್ಯವಾಗಿ ವಿಮರ್ಶೆಯ ವಲಯದಲ್ಲಿದೆ. ಶಿಲ್ಪ ಹಾಗೂ ತಂತ್ರಗಳ ಪ್ರತ್ಯೇಕತೆ ಚರ್ಚಾಸ್ಪದವಾದ ವಿಷಯುವೇ. ಈ 'ತಂತ್ರ' ಭಾಷಾಬಳಕೆಯ ವಿಶಿಷ್ಟತೆಯಿಂದಾಗಿರಬಹುದು ಅಥವಾ ಭಾಷೆಯ ಮೂಲಕ ಸಾಧಿಸಲಾದ ಪ್ರತಿಮೆ, ಸಂಕೇತ, ಪ್ರಾಸ ಮುಂತಾದ 'ಭಾಷೇತರ ಸಂಗತಿ'ಗಳಿಂದಾಗಿರಬಹುದು. ಪ್ರಸ್ತುತ ಲೇಖನದಲ್ಲಿ 'ನಾನು' ಎಂಬ ನಿರೂಪಕನ ಬಳಕೆಯನ್ನು ತಂತ್ರವೆಂದಾಗಿ ಪರಿಗಣಿಸದೇ ಭಾಷೆಯ ಬಳಕೆಯ ಒಂದು ಸಾಧ್ಯತೆಯನ್ನಾಗಿ ಮಾತ್ರ ಪರಿಗಣಿಸಲಾಗಿದೆ. ಒಬ್ಬನಿಗಿಂತ ಹೆಚ್ಚು ನಿರೂಪಕರನ್ನು ದಾಟಿಬಂದ ಕತೆ ದೂರವನ್ನು ಹೆಚ್ಚಿಸಿಕೊಳ್ಳುವುದೇನೋ ನಿಜವೇ. (ಇದರ ಉದ್ದೇಶ ವಿಶ್ವಾಸವನ್ನು ಹುಟ್ಟಿಸುವುದು ಎಂಬುದು ಒಂದು ವ್ಯಾಖ್ಯಾನ ಸಾಧ್ಯತೆ.) ಆದರೆ ಇದರ ಪರಿಣಾಮ ಕತೆಯ ಶಿಲ್ಪ–ಭಾಷೆಗಳ ಮೇಲೆ ವಿಶಿಷ್ಟವಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಮೇಲೆ ಪಟ್ಟಿಮಾಡಿದ ಇತರ ಲಕ್ಷಣಗಳೆಲ್ಲ ಈ ಕಾರಣದಿಂದಲೇ ಉಂಟಾದವೆಂದು ತರ್ಕಿಸಲು ಸಾಧ್ಯ. ನಿರೂಪಕನೂ ಒಂದು ಪಾತ್ರವಾಗಿ ಇರುವ ಎಲ್ಲ ಕತೆಗಳಲ್ಲೂ ಅವನು(ಳು) ಕತೆಯ ಆಗುವಿಕೆಯಲ್ಲಿ ಸಕ್ರಿಯವಾಗಿ ತೊಡಗಿರದ ಆದರೆ ಮಾಹಿತಿಯನ್ನು ದೊರಕಿಸುವ ರೀತಿಯಲ್ಲಿ ಪ್ರಶ್ನೆಕೇಳುವ ಅಥವಾ ಘಟನೆಗಳನ್ನು ನೆನಪಿಸಿಕೊಳ್ಳುವ, (ಹೆಚ್ಚೆಂದರೆ ಅನುಭವಿಸುವ) ಅಥವಾ / ಹಾಗೂ ವ್ಯಾಖ್ಯಾನಿಸುವ ಒಂದು ಗೌಣಪಾತ್ರವಾಗಿರುತ್ತಾನೆ(ಳೆ) ಬೌದ್ಧಿಕನೆಲೆಯ ಪಾತ್ರವಾಗಿರುತ್ತಾನೆ(ಳೆ). ಇದಕ್ಕೆ ನಿದರ್ಶನವಾಗಿ ಕೆಲವು ಉದಾಹರಣೆಗಳನ್ನು ನೋಡಬಹುದು:

1 "ಇದೆಲ್ಲ ಏನವ್ವ? ಹುಡುಗ ಬೆಳೆಯೋ ತಂಕಾನೇ, ಬೆಳೆದ ಮೇಲೆ ಯಾವಳೋ ಬರ್ತಾಳೆ. ಈಗ ಅಮ್ಮ. ಅಮ್ಮ ಅಂತ ಇರೋ ಮಗ ಆಗ ಅಮ್ಮನ್ನ ನೀನು ಇದ್ದೀಯಾ ಸತ್ಯಾ ಅಂತಾ ಕೇಳೋಲ್ಲ" ಅಂದಳು. ನಾನು 'ಯಾಕೆ ಮಂಗಮ್ಮ ಏನಾಯಿತು, ಮಗ ನೀ ಹೇಳಿದ ಮಾತು ಕೇಳಲಿಲ್ಲವೇ' ಎಂದೆ,('ಮೊಸರಿನ ಮಂಗಮ್ಮ')

2 ಇದನ್ನೆಲ್ಲ ಕೇಳಿ ನನಗೆ ಬಹಳ ವ್ಯಸನವಾಯಿತು (ಅದೇ.)

3 ಶಾಸ್ತ್ರಿಗಳು ಮನೆಗೆ ಹೋದಮೇಲೆ ಕೃಷ್ಣಮೂರ್ತಿಯ ಕತೆಯನ್ನೆಲ್ಲ ನೆನೆದುಕೊಂಡೆನು. ('ಕೃಷ್ಣಮೂರ್ತಿಯ ಹೆಂಡತಿ')

4 ಆಕೆ "ನಾನು ಇನ್ನು ಯಾವಾಗಲೂ ಬರುವುದು ಸರಿಹೋಗುವುದಿಲ್ಲ. ಒಂದು ಮಾತಿದೆ. ಅದನ್ನು ಹೇಳಿ ಹೊರಟುಹೋಗುತ್ತೇನೆ" ಎಂದರು....

ನಾನು 'ಅವಶ್ಯವಾಗಿ ಹೇಳಿ ತಾಯಿ, ಬನ್ನಿ' ಎಂದು ಒಳಗೆ ಬಂದು ಒಂದು ನಾಗಾಲಿಗೆಯನ್ನು ಹಾಕಿದೆನು. (ಅದೇ)

ಈ ಉದಾಹರಣೆಗಳಲ್ಲಿ ನಿರೂಪಕ(ಕಿ) ಕತೆಯ ಘಟನೆ ನಡೆದ ಕಾಲಕ್ಕೇ ಇತರ ಪಾತ್ರಗಳೊಂದಿಗೇ ಇದ್ದರೂ ಮೇಲೆ ಹೇಳಿದಂತೆ ಸಕ್ರಿಯವಾಗಿ ಕಾಣಿಸಿಕೊಳ್ಳದ ಪಾತ್ರ, ಕತೆಯ ಕಾಲ, ಸ್ಥಳಗಳಿಂದ ದೂರವಾಗಿ ಹೇಳುತ್ತಿರುವ 'ವೆಂಕಟಿಗನ ಹೆಂಡತಿ' ಯ ಶ್ರೀರಾಮ್, "ಸುಬೇದಾರರಿಗೆ ಪ್ಯಾದೇಮಾತಿ"ನ ರಾಮಣ್ಣ ಅಂತಹ ನಿರೂಪಕರು ಅನಿವಾರ್ಯವಾಗಿಯೇ ಕೇವಲ ವರದಿಗಾರರಾಗುತ್ತಾರೆ. ಹೀಗೆ ಲೇಖನಲ್ಲದ ನಿರೂಪಕ ವರದಿಗಾರ, ನಿರೀಕ್ಷಕ ಹಾಗೂ ವ್ಯಾಖ್ಯಾನಕಾರನಾಗಿದ್ದಾನೆ.

ಮಾಸ್ತಿಯವರ ಅನೇಕ ಕತೆಗಳಲ್ಲಿ ಯಾವುದೋ ಒಂದು ಪಾತ್ರದ ಮಾನಸಿಕ ವರ್ತನೆಗಳನ್ನು ದಾಖಲಿಸುವಂತೆ ಕ್ರಿಯಾಪದಗಳು (ಯೋಚಿಸು. ಭಯಪಡು. ನೆನೆ, ಮನಸೋಲು, ಆಶ್ಚರ್ಯಪಡು, ಎಂದುಕೊಳ್ಳು ಇತ್ಯಾದಿ) ಬಳಕೆಯಾಗಿವೆ. "ಒಂದು ಹಳೆಯ ಕತೆ"ಯ ಸನ್ಯಾಸಿ, "ಕೃಷ್ಣಮೂರ್ತಿಯ ಹೆಂಡತಿ"ಯ ಕೃಷ್ಣಮೂರ್ತಿ, "ಹೇಮಕೂಟದಿಂದ ಬಂದಮೇಲೆ"ಯ ಶಕುಂತಲೆ. "ರಂಗಸಾಮಿಯ ಅವಿವೇಕ"ದಲ್ಲಿಯ ರಂಗಸಾಮಿ ಮುಂತಾದ ಪಾತ್ರಗಳು ಈ ಬಗೆಯವು. ಈ ಕತೆಗಳಲ್ಲಿಯ ಉಳಿದ ಪಾತ್ರಗಳ ವಿಷಯದಲ್ಲಿ ಬಹುಮಟ್ಟಿಗೆ ಬಾಹ್ಯವರ್ತನೆಗಳನ್ನು (ಹೋಗು, ಬಾ, ಕೇಳು ಮಲಗು ಇತ್ಯಾದಿ) ಮಾತ್ರ ಹೇಳಲಾಗಿದೆ. ಇಂತಹ ಕತೆಗಳಲ್ಲಿ ಸನ್ಯಾಸಿ ಶಕುಂತಲೆ ಮೊದಲಾದ ಕೇಂದ್ರ ಪಾತ್ರಗಳ ಮಾನಸಿಕ ಸ್ಥಿತ್ಯಂತರಗಳನ್ನೆ ಮುಖ್ಯವಾಗಿ ಚಿತ್ರಿಸಲಾಗಿದೆ. ಹೀಗಾಗಿ ಇಂತಹ ಕಥೆಗಳು (ಸಂಖ್ಯೆಯಲ್ಲಿ ಇವು ಕಡಿಮೆ)ಕೇಂದ್ರಪಾತ್ರಗಳ ದೃಷ್ಟಿಕೋನವನ್ನು ಅಭಿವ್ಯಕ್ತಿಸುವವೆಂದು ಹೇಳಬಹುದು. ಹೀಗೆ ಹೇಳಬಹುದಾದರೆ ಮಾಸ್ತಿಯವರು "ಕೇಂದ್ರಪಾತ್ರಕ್ಕೆ ಬದ್ಧವಾದ ದೃಷ್ಟಿಕೋನವನ್ನು ಹೊಂದದೆ. ಸರ್ವಸಾಕ್ಷಿತ್ವದ ನಿರೂಪಣಾ ತಂತ್ರವನ್ನು ಬಳಸು"ತ್ತಾರೆಂಬ, (ಈ ಲೇಖನದ ಪ್ರಾರಂಭದಲ್ಲಿ ಉದ್ಧರಿಸಿದ) ವಾಸುದೇವನ್ ಅವರ ಹೇಳಿಕೆ ಪೂರ್ಣ ಸತ್ಯವಲ್ಲ.

ಭೂತ ಮತ್ತು ವರ್ತಮಾನದ ಸನ್ನಿವೇಶಗಳ ಅಂತರವನ್ನು ಸೂಚಿಸುವಂತಹ ವಾಕ್ಯಗಳನ್ನು ಮಾಸ್ತಿಯವರ ಸಾಕಷ್ಟು (ಸ್ವದೇಶಕ್ಕೆ ಸಂಬಂಧಿಸಿದ) ಕತೆಗಳಲ್ಲಿ ಕಾಣಬಹುದು, ಇದಕ್ಕೆ ನಿದರ್ಶನವಾಗಿ ಅಂತಹ ಕೆಲವು ವಾಕ್ಯಗಳನ್ನು ಕೊಟ್ಟಿದೆ.

1 ಈ ರೀತಿಯಾದ ಅಮೂಲ್ಯವಾದ ಇಂಗ್ಲೀಷು ಭಾಷೆ ಆಗ ನಮ್ಮೂರಿನಲ್ಲಿ ಪ್ರಚುರವಾಗಿರಲಿಲ್ಲ. ("ರಂಗನ ಮದುವೆ")

2 ಈಗಿನವರಿಗೆ "ಅವಳು" ಎನ್ನುವವರು ಹೆಚ್ಚಾಗಿರಬಹುದು: ಹಿಂದಿನ

ಕಾಲದವರಿಗೆ "ಅವಳು" ಒಬ್ಬಳೇ. ( "ನಮ್ಮ ಮೇಷ್ಟರು" )

3 ಈಚೆಗೆ ಅದೆಲ್ಲಾ ಕಡಿಮೆಯಾಗಿದೆ, ... ಹಿಂದೆ ನಮಗೆ ಇಂಥ ಸಂಕೋಚ ಕಾರ್ಪಣ್ಯಗಳು ಇರಲಿಲ್ಲ. ( "ಕಾಮನಹಬ್ಬದ ಒಂದು ಕತೆ" )

4 ಇದು ಆ ಕಾಲದಲ್ಲಿ ರಾಣಿಯರಿಗೆ ಸಾಮಾನ್ಯವಾದ ಅನುಭವ. ( "ಹೇಮಕೂಟದಿಂದ ಬಂದ ಮೇಲೆ" )

5 ಈಗ ಆ ಹಬ್ಬ ನಡೆಯುತ್ತಿಲ್ಲ, ಊರು ಪಾಳೆಯಗಾರನನ್ನು ಮರೆತಿದೆ. ಆದರೆ ನಿಜಗಲ್ಲಿಗೆ ಹೋದವರಿಗೆ ಊರಜನ ಅಲ್ಲಿಯ ರಾಣಿಯ ಈ ಕತೆಯನ್ನು ಹೇಳುವರು. ( "ನಿಜಗಲ್ಲಿನ ರಾಣಿ" )

ಇಂತಹ ಉದಾಹರಣೆಗಳನ್ನು ಗಮನಿಸಿದರೆ ಕತೆಗಾರ ಕತೆಯ ನಿರೂಪಣೆಯ ಉದ್ದಕ್ಕೂ ಭೂತ–ವರ್ತಮಾನಗಳ ಅಂತರವನ್ನು ಸದಾ ನೆನಪಿನಲ್ಲಿರಿಸಿಕೊಂಡಿರುತ್ತಾನೆಂದು – ಇದನ್ನು ಸಾಮಾನ್ಯಗೊಳಿಸಿ ಹೇಳಬಹುದಾದರೆ- ಕಾಲದ ಸಾಕಷ್ಟು ವಿಸ್ತಾರವಾದ ಪರಧಿನಲ್ಲಿ ಕತೆಯನ್ನು ಪ್ರಸ್ತುತಗೊಳಿಸುತ್ತಾನೆಂದು – ಹೇಳಬಹುದೆಂದು ತೋರುತ್ತದೆ.

ಈ ಮೇಲಿನ ಹೇಳಿಕೆಗೆ ಪೂರಕವೆಂಬಂತಿರುವ ಮತ್ತೂ ಒಂದೆರಡು ಅಂಶಗಳು ಮಾಸ್ತಿಯವರ ಕತೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕಾಲಸೂಚಕ ಪದಪುಂಜಗಳ ಬಳಕೆ, ಅದೂ ಪರಿಚ್ಛೇದಗಳ ಪ್ರಾರಂಭದಲ್ಲಿಯೇ ಹೆಚ್ಚಾಗಿ ಬಳಕೆಯಾಗುವುದು ಇವುಗಳಲ್ಲಿ ಒಂದು. ಅಂತಹ ಕೆಲವು ಉದಾಹರಣೆಗಳನ್ನಿಲ್ಲಿ ಗಮನಿಸಬಹುದು:

1 ಸ್ವಲ್ಪ ಕಾಲ ಕಳೆದಿದೆ: ಎಷ್ಟು ವಾರ ಎಂದು ಈಗ ನಾನು ಗೊತ್ತಾಗಿ ಹೇಳಲಾರೆ ( "ಕಾಕಲೋಕ" )

2 ಮತ್ತೆ ಕೆಲವು ಕಾಲ ಕಳೆದಿದೆ: ಇಷ್ಟೇ ಎಂದು ನಾನು ಹೇಳಲಾರೆ (ಅದೇ.)

3 ಈಗ ಸುಮಾರು ಒಂದು ತಿಂಗಳ ಹಿಂದೆ ಮಂಗಮ್ಮ ಬೇಗಾಗ "ಮೊಸರು ತಕ್ಕೊಳ್ಳುತ್ತೀರಾ ಅಮ್ಮಯ್ಯ" ಅಂತ ಬಂದಾಗ ನಾನು ಎಲ್ಲೋ ಒಳಗಿದ್ದೆ. ( "ಮೊಸರಿನ ಮಂಗಮ್ಮ" )

4 ಈಗ ಹದಿನೈದು ದಿನದ ಹಿಂದೆ ಮಂಗಮ್ಮ ಮನೆಗೆ ಬಂದಾಗ ಬಹಳ ಬೇಸರ ಪಟ್ಟಿದ್ದಳು ಅಂತ ಕಂಡಿತು. (ಅದೇ)

5 ಮೂರನೆಯ ದಿನ ಮಂಗಮ್ಮ ಬಂದಾಗ ಹಿಂದಿನ ದಿನದಷ್ಟು ವ್ಯಸನ ವಿರಲಿಲ್ಲ. [ಅದೇ]

6 ಆಮೇಲೆ ಒಂದೆರಡು ದಿನ ಈ ಮಾತನ್ನು ಎತ್ತಲಿಲ್ಲ. [ಅದೇ]

7 ಮೂರನೆಯ ದಿನ ಮಂಗಮ್ಮ ನನಗೆ ಇದನ್ನು ಹೇಳಿದಳು [ಅದೇ]

8 ಇದಾದ ಕೆಲವು ದಿನದ ಮೇಲೆ ಮಂಗಮ್ಮ ನನ್ನನ್ನು "ಅವ್ವಾ ನೀವು ಸತ್ಯವಂತರು...." [ಅದೇ]

ಮೇಲೆ ಎರಡೇ ಕತೆಗಳಿಂದ ಉದಾಹರಣ ವಾಕ್ಯಗಳನ್ನು ಆಯ್ದುಕೊಟ್ಟದ್ದರ ಕಾರಣ: ಕತೆಯ ಕಾಲದ ಗಡುವು ಹೇಗೆ ವಿಸ್ತಾರಗೊಳ್ಳುತ್ತ ಹೋಗುತ್ತದೆ ಎಂಬುದನ್ನು ತಿಳಿಯಬಹುದೆಂದು. ಇಲ್ಲಿ ಒಂದು ಸಂಗತಿಯನ್ನು ಗಮನಿಸುವುದು ಅವಶ್ಯ: ಕತೆಯ ಘಟನೆಗಳಿಗೆ ಹಿನ್ನೋಟವಾಗಿ ಭೂತಕಾಲದ ವಿವರಗಳನ್ನು ಕೊಡುವುದಕ್ಕಿಂತ ('ಕಲ್ಮಾಡಿಯ ಕೋಣ'ದಲ್ಲಿಯಂತೆ) ಕಾಲಾನುಕ್ರಮದಲ್ಲಿ ಕತೆಯ ಘಟನೆಗಳನ್ನು ಪ್ರಸ್ತಾಪಿಸುವ।ನೆನಪಿಸಿಕೊಳ್ಳುವ ಈ ಕತೆಗಳ ರೀತಿ ಭಿನ್ನವಾದುದು. ಮೊದಲ ರೀತಿ ಯಲ್ಲಿ ಭೂತಕಾಲದ ಘಟನೆಗಳು ವರ್ತಮಾನದ ಒಂದು ಭಾಗ ಎಂಬಂತೆ ಸೇರಿದ್ದರೆ ಎರಡನೆಯ ರೀತಿಯಲ್ಲಿ ಕತೆಗೆ ಹಿನ್ನೆಲೆಯಾದ ಕಾಲಾನುಕ್ರಮಣಿಕೆಯ ಪ್ರಜ್ಞಾ ಪೂರ್ವಕವಾದ ಪರಿಗಣನೆಯಿರುತ್ತದೆ.

ಐತಿಹಾಸಿಕ ವಸ್ತುವನ್ನುಳ್ಳ ಅನೇಕ ಕತೆಗಳಲ್ಲಿ ಕಾಲವನ್ನು ಕುರಿತಾದ ಬೇರೊಂದು ರೀತಿಯ ಪ್ರಸ್ತಾಪವಿದೆ. ಕತೆಯ ಪ್ರಾರಂಭದಲ್ಲಿ ಅದು ಇತಿಹಾಸಕ್ಕೆ ಸೇರಿದ್ದೆಂಬು ದನ್ನು ಸ್ಪಷ್ಟವಾಗಿ ತೋರಿಸುವ ರೀತಿಯಲ್ಲಿ ನಿರ್ದಿಷ್ಟ ಕಾಲವನ್ನು ಹೇಳುವ ವಾಕ್ಯಗಳಿವೆ. ಹಾಗೂ ಕತೆಯ ಕೊನೆಯಲ್ಲಿ ಮುಖ್ಯಕತೆಗೆ ಹೊಂದಿಕೊಂಡಂತೆ ದೀರ್ಘಾ ವಧಿಯಲ್ಲಿ ನಡೆದ ಮತ್ತಿನ ಕೆಲವು ಘಟನೆಗಳನ್ನು ಸಾರಾಂಶರೂಪವಾಗಿ (ಕೆಲವೊಮ್ಮೆ ಅವುಗಳನ್ನು ಕುರಿತ ವ್ಯಾಖ್ಯಾನದೊಡನೆ) ಹೇಳಲಾಗಿದೆ. ಕ್ರಮವಾಗಿ ಇವುಗಳಿಗೆ ನಿದರ್ಶನವಾಗಿ (ಅ) ಹಾಗೂ (ಬ) ವಿಭಾಗದ ವಾಕ್ಯಗಳನ್ನು ನೋಡಬಹುದು:

1 ಅ) ಕ್ರಿಸ್ತಶಕ 1800 ಡಿಸೆಂಬರ್ 12ನೇ ತಾರೀಖು, ಶ್ರೀರಂಗಪಟ್ಟಣದಿಂದ ('ಡೂಬಾಯಿ ಪಾದ್ರಿಯ ಒಂದು ಪತ್ರ')

2 ಅ) ಕ್ರಿಸ್ತಪೂರ್ವ ಮುನ್ನೂರ ಇಪ್ಪತ್ತು ಮೇಲ್ಪಟ್ಟು ಹಿಂದೆ ಒಂದು ದಿನ. ಅಥೆನ್ಸ್ ನಗರದ ಪ್ರಮುಖ ತತ್ವಜ್ಞ ಅರಿಸ್ಟಾಟಲ್___ಓದುತ್ತಿದ್ದನು. ('ಅಲೆಕ್ಸಾಂಡರ ಗುರುದಕ್ಷಿಣೆ')

3 ಅ) ಕ್ರಿಸ್ತಶಕ ಮುನ್ನೂರ ತೊಂಭತ್ತನೆಯ ವರ್ಷದ ಒಂದು ದಿನ. ಮಿಲಾನ್ ನಗರದ ದೇವಮಂದಿರದಲ್ಲಿ ಜನ ಸಾವಿರಸಾವಿರವಾಗಿ ಸೇರಿದ್ದಾರೆ. ( 'ಅಂಬ್ರೋಸ್ ಅಪ್ಪಾಜಿ' )

4 ಅ) ಹೂಣರ ರಾಜ ಆ್ಯಟಿಲಾ ದೇಶ ದೇಶದ ಮೇಲೆ ಧಾಳಿಮಾಡಿ ಜನಾಂಗಗಳನ್ನು ತಲ್ಲಣಗೊಳಿಸುತ್ತಿದ್ದ ಕಾಲ. ( 'ಆ್ಯಟಿಲಾನ ದಾಕ್ಷಿಣ್ಯ' )

5 ಅ) ಶಕವರ್ಷ 944: ದುಂದುಭಿ ಸಂವತ್ಸರ. ಹೊಯ್ಸಳರ ಮೊದಲಿಗ ಕಾಮರಸ ವೊಲನೂರಿನಲ್ಲಿ ಆಳುತ್ತಿದ್ದಾನೆ. ('ಹೊಯಿಸಳನ ದಳಪತಿ' )

1 ಬ) ಅಶೋಕ ಮಹಾರಾಜನು ತಾನು ಬುದ್ಧಮೂರ್ತಿಗೆ ಕೊಟ್ಟಮಾತನ್ನು ಹೇಗೆ ನಡೆಸಿದನೆನ್ನುವುದು ಇತಿಹಾಸ ಪ್ರಸಿದ್ಧವಾಗಿದೆ. ಅವನು ಮತ್ತೆ ಯುದ್ಧ ಮಾಡಲಿಲ್ಲ, ತನ್ನ ಆಳ್ವಿಕೆಯ ಉಳಿದೆಲ್ಲ ಕಾಲವನ್ನೂ ಧರ್ಮದ ಪ್ರಚಾರಕ್ಕೆ ಮೀಸಲು ಮಾಡಿ __ (ಪ್ರಿಯದರ್ಶಿ ಅಶೋಕ)

2 ಬ) ಇತಿಹಾಸದ ಸಂಗತಿಯಾಗಿ ಇನ್ನೊಂದು ಮಾತನ್ನು ಹೇಳುವುದು ಉಚಿತವಾಗಬಹುದು. ಈ ಮದುವೆಯಾದ ಮಾರನೆಯ ವರ್ಷ ಮೇರಿ ತೀರಿಕೊಂಡಳು. ನೆಪೋಲಿಯನ್ ಆಮೇಲೆ ನಾಲ್ಕು ವರ್ಷ ಜೀವಿಸಿದ್ದನು. ( "ನೆಪೋಲಿಯನ್ನನ ಸೋಲು" )

3 ಬ) ಹಿರಿಯರು ಹೇಳಿದರು. ಕಿರಿಯರು ಬೇಡಿದರು ... ಹೇಗೆಂದು ಅರಿಯದೆ ವಾಸಂತಿ ತನ್ನ ಜೀವವನ್ನು ಧರಿಸಿನಿಂತಳು. __ ಮಾಗ ಜೋಗನ ಹೆಸರನ್ನು ಹೇಳುವ ವೀರಗಲ್ಲು ದೊರೆತಿಲ್ಲ ಅವನು ಬಹುಕಾಲ ಬಾಳಿದನೆಂದು ನಂಬಿದರೆ ತಪ್ಪಿಲ್ಲ. ( "ಹೊಯಿಸಳನ ದಳಪತಿ" )

4 ಬ) ನಾನು ನೋಡುವ ದಿನಕ್ಕೆ ಹುಂಡಿ ಬಹಳ ಶಿಲವಾಗುತ್ತ ಬಂದಿದ್ದಿತು. ಆ ಮನುಷ್ಯನಿಗೆ ಆಗ ಮಧ್ಯವಯಸ್ಸು ಮೀರಿದ್ದಿತು. ಈ ಕಥೆಯಲ್ಲಿ ಬಹುಜನಕ್ಕೆ ನಂಬಿಕೆಯಿಲ್ಲ.... ( "ಬಿಳಿಗಿರಿ ರಂಗ" )

5 ಬ) ಸಾವಿಯಬ್ಬೆಗೆ ಸ್ವರ್ಗದಲ್ಲಿ ಇನಿಯನ ಒಲವಿನಂತೆ ತಂದೆಯ ವಾತ್ಸಲ್ಯವೂ ಒದಗಿತು. ಭೂಮಿಯಲ್ಲಿ ಒಂದು ವೀರಗಲ್ಲು ಅವಳ ಕೀರ್ತಿಯನ್ನು ಸಾರಿತು : ( "ಸಾವಿಯಬ್ಬೆ" )

ಮೇಲೆ 1ಅ) – 5ಅ)ದ ವಾಕ್ಯಗಳನ್ನು ಕತೆಗಳನ್ನು ನಿರ್ದಿಷ್ಟ ಕಾಲ, ದೇಶದಲ್ಲಿ ಆಗಿಹೋದ ಘಟನೆಗಳೆಂಬಂತೆ-ಇತಿಹಾಸದ ಭಾಗಗಳೆಂಬಂತೆ ಪ್ರಸ್ತುತಗೊಳಿಸುತ್ತವೆ.

ಸಾಮಾನ್ಯವಾಗಿ ಇತರತ್ರ ಐತಿಹಾಸಿಕ ವಸ್ತುಗಳನ್ನು ಹೊಂದಿರುವ ಸಾಹಿತ್ಯಕೃತಿಗಳ (ಕಾಲವನ್ನು ಪರೋಕ್ಷವಾಗಿ ಮಾತ್ರ ಸೂಚಿಸುವ) ರೀತಿಗಿಂತ ಇದು ಭಿನ್ನವಾದುದು. 1ಬ) – 5ಬ) ವರೆಗಿನ ಉದಾಹರಣೆಗಳು ಮುಖ್ಯಕಥೆಗೆ ಸಂಬಂಧಿಸಿದ ಮತ್ತೆ ಕೆಲವು ಘಟನೆಗಳನ್ನು ಕತೆಯನ್ನು ಕುರಿತು ನಿರ್ದಿಷ್ಟ ನಿಲುವುಗಳನ್ನು ಹೊಂದಲು ಅನುಕೂಲವಾಗುವ ರೀತಿಯಲ್ಲಿ ಸಾರಾಂಶರೂಪದಲ್ಲಿ ಪ್ರಸ್ತುತಪಡಿಸುತ್ತವೆ. ಇಲ್ಲಿ 'ಮುಖ್ಯ-ಕಥೆ' ಎಂಬ ಪದವನ್ನು ಬಳಸಲು ಕಾರಣ ಕತೆಗಾರರು ಇತಿಹಾಸದಲ್ಲಿಯ ಯಾವುದೋ ಒಂದು ನಿರ್ದಿಷ್ಟ ಕಾಲಾವಧಿಯ ಘಟನೆಗಳ ಮೇಲೆ ಗಮನವನ್ನು ಕೇಂದ್ರಿಕರಿಸಿ ಮುಂದಿನದನ್ನು ಸಡಿಲವಾಗಿ-ಸಾರಾಂಶರೂಪವಾಗಿ ಹೇಳಿದಂತೆ ಕತೆಯ ರಚನೆಯಿದೆ.

ಕೊನೆಯದಾಗಿ ಮಾಸ್ತಿಯವರ ಕತೆಗಳಲ್ಲಿ ಸಾಮಾನ್ಯವಾಗಿ ಕಾಣಿಸುವ ಇನ್ನೊಂದು ಬಗೆಯ ವಾಕ್ಯಗಳನ್ನು ಗಮನಿಸಬಹುದು. ಇವು ಕತೆಯಲ್ಲಿಯ ಸಂದರ್ಭ ಪಾತ್ರಗಳನ್ನು ಕುರಿತು ಅಥವಾ ಇಡೀ ಕತೆಯನ್ನು ಕುರಿತು ಮಾಡುವ ವ್ಯಾಖ್ಯಾನಗಳು; ಹಲವೊಮ್ಮೆ ಗುಣ, ಸ್ವಭಾವಗಳನ್ನು ಸಾಮಾನ್ಯೀಕರಣಗೊಳಿಸುವಂತಹ ಹೇಳಿಕೆಗಳು. ನಿದರ್ಶನವಾಗಿ ಕೆಲವನ್ನಿಲ್ಲಿ ನೋಡಬಹುದು :

1 ವಿವಾಹದ ಕಾಲದಲ್ಲಿ ಗೃಹವೆಲ್ಲ ಪತಿಯ ಆಲೋಚನೆಯಿಂದ ತುಂಬಿತ್ತು... ಮದುವೆಯಾದವರೆಲ್ಲರಿಗೂ ಇದು ಅನುಭವದಲ್ಲಿರಬೇಕು. ಸ್ವಲ್ಪ ಕಸ್ತೂರಿಯನ್ನು ಒಂದು ಕೋಣೆಯಲ್ಲಿಡಿ; ಮನೆಯಲ್ಲೆಲ್ಲ ಗಮಗಮ ಎಂದಿರುತ್ತದೆ: ವಾಸನೆ ಬಲ್ಲವರಿಗೆ. ಪತಿಯ ಭಾವವು ಪತ್ನಿಗೆ ಹಾಗೆಯೇ. ('ರಂಗಪ್ಪನ ದೀಪಾವಳಿ')

2 ರಂಗಪ್ಪನ ಸುಖಕ್ಕಂತೂ ಪಾರವೇ ಇಲ್ಲ. ಯಾಕೆ?.... ಒಬ್ಬೊಬ್ಬನೂ ತನ್ನ ತನ್ನ ಹೆಂಡತಿ ತನ್ನ ಸಂಗಡ ಮೊದಲು ಮಾತನಾಡಿದಾಗ ಪಸೋ ಮಹಾಕೋಟೆ ಕೊತ್ತಲವನ್ನು ಗೆದ್ದವನಿಗಿಂತ ಹೆಚ್ಚು ಸುಖಿಯಾಗುತ್ತಾನೆ. (ಅದೇ.)

3 ಸರಸ್ವತಿಯದು ಬಹಳ ಜಂಭ. ಹುಡುಗಿಯರೇ ಹಾಗೆ ಎಂದು ತೋರುತ್ತದೆ. ('ನಮ್ಮ ಮೇಸ್ಟರು')

4 ರಾಮಾರಸನಾಯಕನು ದೇವರಮುಂದೆ ನಮ್ರವಾಗಿ ನಿಂತು ಕೀರ್ತನಂತೆ ನಡೆದುಕೊಂಡನು. ಹಿರಿಯರೂ ಪುಣ್ಯವಂತರೂ ಭಕ್ತರಂತೆ ನಡೆದರೆ ಜನರು ಅವರಿಗೆ ಅತಿಶಯವಾದ ಪ್ರೀತಿ ಗೌರವಗಳನ್ನು ತೋರಿಸುವರು. ('ವಿಜಗಲ್ಲಿನ ರಾಣಿ')

5 ಊರಿನಲ್ಲಿ ಉತ್ಸವಗಳು ಹೆಚ್ಚಿದುವೆಂದರೆ ಬರಿಯ ಒಳ್ಳೆಯದು ಮಾತ್ರ ಹೆಚ್ಚಾಗುವುದಿಲ್ಲ. (ಅದೇ.)

6 ಆದರೆ ತಾನು ಯಜಮಾನಿ ಅಂತ ತನಗೆ ಎಲ್ಲರೂ ಗೌರವ ತೋರಿಸಬೇಕು. ಮನುಷ್ಯನಾದವನಿಗೆ ಈ ಚಪಲ ತಪ್ಪಿದ್ದಲ್ಲ. ('ಮೊಸರಿನ ಮಂಗಮ್ಮ')

ಇಂತಹ ವ್ಯಾಖ್ಯಾನರೂಪದ, ಸಾಮಾನ್ಯೀಕರಣಗೊಳಿಸುವಂತಹ (generalizing) ವಾಕ್ಯಗಳು ಕತೆಗಳಲ್ಲಿ ಮಧ್ಯೆ ಮಧ್ಯೆ ಕಾಣಿಸಿಕೊಳ್ಳುತ್ತವೆ. ಕತೆಗಾರ/ನಿರೂಪಕ ಕತೆಯ ಘಟನಾವಳಿಗಳನ್ನು ಇಡಿಯ ಒಂದು ಆಕೃತಿಯಾಗಿ ಪರಿಗಣಿಸಿ ಅದರಲ್ಲಿ ತಲ್ಲೀನನಾಗಿ ಹೇಳದೆ ಪ್ರತ್ಯೇಕವಾಗಿ, ಎಚ್ಚರವಾಗಿಯೇ ಉಳಿಯುತ್ತಾನೆ. ಹಾಗೂ ತನ್ನ ಹಾಗೂ ಓದುಗ(ಕೇಳುಗ)ರ ಸಂಬಂಧವನ್ನೂ (ಇದು ಬಹುಮಟ್ಟಿಗೆ ಹಿತವಚನದ ಧಾಟಿಯದು) ಮನಸ್ಸಿನಲ್ಲಿರಿಸಿಕೊಂಡಿರುತ್ತಾನೆಂಬುದು ಇಂತಹ ವಾಕ್ಯಗಳಿಂದ ಸ್ಪಷ್ಟ. ಮಾಸ್ತಿಯವರು ಮೊದಮೊದಲು ಕೆಲವು ಕತೆಗಳಲ್ಲಂತೂ 'ನೀವು' ಎಂಬ ಪದವನ್ನು ಓದುಗರೊಡನೆ ಆತ್ಮೀಯತೆಯನ್ನು ಕುದುರಿಸುವಂತಹ ಕೆಲವು ವಾಕ್ಯಗಳನ್ನು ಬಳಸುತ್ತ (ಗಮನಿಸಿ: "ನೀವು ನಿಮ್ಮ ಪತ್ನೀರತ್ನಗಳನ್ನು. .ಮುತ್ತಿಡುವಾಗ ಹತ್ತಿರ ಯಾರಾದರೂ ಮಕ್ಕಳಿದ್ದರೆ 'ಇವರಿದ್ದರೇನು' ಎಂತ ಮಾತ್ರ ಅಲಕ್ಷ್ಯ ಮಾಡಬೇಡಿ...,. ಬಹಳ ನಗೆಗೇಡಿಗೆ ಗುರಿಯಾಗುವಿರಿ ಜೋಕೆ! ಹೇಳಿದ್ದೇನೆ." – 'ರಂಗಪ್ಪನ ದೀಪಾವಳಿ') ಕತೆಗಾರ-ಓದುಗ ಸಂಬಂಧ ಕತೆಯ ಸಂವಹನದ ಒಂದು ಮುಖ್ಯವಾದ ಅಂಶವೇ ಆಗಿದೆ. ಈ ವಿಷಯದಲ್ಲಿ ಈ ಕತೆಗಳು ಹರಟೆ-ಪ್ರಬಂಧಗಳ ರಚನೆಯೊಂದಿಗೆ ಹೋಲಿಕೆ ಪಡೆದಿವೆ. ಪ್ರಾರಂಭದ ಕೆಲವೇ ಕತೆಗಳಲ್ಲಿ ಕಾಣಿಸಿಕೊಳ್ಳುವ ಈ ಲಕ್ಷಣ ಮುಂದೆ ಉಳಿದಿಲ್ಲವೆಂಬುದು ಬೇರೆ ಮಾತು.

## 4

ಈವರೆಗೆ ಮಾಸ್ತಿಯವರ ಸಣ್ಣಕತೆಗಳಲ್ಲಿ ಕಾಣಸುವ – ವಾಕ್ಯಗಳು, ವಾಕ್ಯಭಾಗಗಳು ಹಾಗೂ ಪದಗಳ ಸ್ತರದಲ್ಲಿ ವ್ಯಕ್ತವಾಗುವ –ಕೆಲವು ವಿಶಿಷ್ಟ ಲಕ್ಷಣಗಳನ್ನು ಗುರುತಿಸಿ ಅವಕ್ಕೆ ವಿವರಣೆನೀಡಲು ಪ್ರಯತ್ನಿಸಲಾಗಿದೆ. (ಕಟ್ಟುನಿಟ್ಟಾದ ಅರ್ಥದಲ್ಲಿ, ಮೇಲೆ ಗುರುತಿಸಿದ ಲಕ್ಷಣಗಳಲ್ಲಿ ಹೆಚ್ಚಿನವನ್ನು ಭಾಷೆಗೆ ಸಂಬಂಧಿಸಿದ ಲಕ್ಷಣಗಳೆಂದು ಕರೆಯುವುದಕ್ಕಿಂತ ಕತೆಯ ರಚನೆಯ ಲಕ್ಷಣಗಳೆಂದು ಗುರುತಿಸುವುದು ಸೂಕ್ತ. ಆದರೆ ವಿಷಯಾಧಾರಿತವಾಗಿ ವಾಕ್ಯ, ವಾಕ್ಯಭಾಗಗಳನ್ನಾಯ್ದು, ಅವನ್ನೇ ಸಡಿಲವಾದ ಅರ್ಥದಲ್ಲಿ ಭಾಷಿಕ ವಿಶ್ಲೇಷಣೆ ಎಂದು ಇಲ್ಲಿ ಕರೆದಿದ್ದೇನೆ.) ಈಗ ಮೇಲಿನ ವಿವರಣೆಗಳನ್ನೆ ಒಟ್ಟಾಗಿ ನೋಡಿ ಮಾಸ್ತಿಯವರ ಕತೆಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಬಹುದು.

ಮಾಸ್ತಿಯವರ ಕತೆಗಳು ಕಾಲ, ದೇಶ, ಓದುಗರ ನೇರ ಸಂಬಂಧಗಳನ್ನು ಕಳಚಿಕೊಂಡು ತನಗೆ ತಾನೇ ಒಂದು ಆಕೃತಿಯಾಗಿ ನಿಲ್ಲುವ ಕತೆಗಳಿಗಿಂತ ಭಿನ್ನವಾದವು. ಇಲ್ಲಿ ವಸ್ತು ಮತ್ತು ಆಕೃತಿಗಳ ನಡುವಿನ ಗೆರೆ (ಹೆಚ್ಚಿನ ಕತೆಗಳ ವಿಷಯದಲ್ಲಿ) ಸ್ಪಷ್ಟವಲ್ಲ. ಐತಿಹಾಸಿಕ ವಸ್ತುವನ್ನುಳ್ಳ ಕತೆಗಳಲ್ಲಿ ಇದು ಖಚಿತವಾದ ಕಾಲವನ್ನು ಹೇಳುವ ವಾಕ್ಯಗಳು, ವಿಸ್ತೃತವಾದ ಕಾಲದ ಹಿನ್ನೆಲೆಯಲ್ಲಿ ಘಟನೆಗಳನ್ನಾಯ್ದುಕೊಳ್ಳುವ ರೀತಿ, ಕತೆಗಾರನ ನಿಲುವಿಗೆ ಅನುಗುಣವಾಗಿ ಕತೆಯ ಆಕೃತಿಗೆ ಸಂಬಂಧವಿಲ್ಲದ ಘಟನೆಗಳನ್ನು ಸಂಗ್ರಹವಾಗಿ ಸೇರಿಸುವ ರೀತಿ ಇವುಗಳ ಮೂಲಕ ವ್ಯಕ್ತವಾಗುತ್ತದೆ. ಸಾಮಾಜಿಕ ವಸ್ತುವನ್ನುಳ್ಳ ಕತೆಗಳಲ್ಲಿ ಇದು ವಿಷಯಾಂತರ, ಮಧ್ಯೆ ಮಧ್ಯೆ ನಿರೂಪಕನ ಪ್ರವೇಶ, ಪಾತ್ರ, ಘಟನೆಗಳನ್ನು ಕುರಿತ ವಿವರಣೆ-ವ್ಯಾಖ್ಯಾನ-ಇವುಗಳ ಮೂಲಕ ವ್ಯಕ್ತವಾಗುತ್ತದೆ. ಕತೆಗಾರ ಕತೆಯಲ್ಲಿ, ನೇರವಾದ ನಿರೂಪಕನಾಗಿ ಪ್ರವೇಶಿಸಿದಾಗಲೂ ಅದರಲ್ಲಿ ಒಂದು ಸಕ್ರಿಯ ಪಾತ್ರವಾಗದೇ, ಅಥವಾ ಪರೋಕ್ಷ ನಿರೂಪಕನಾಗಲೂ ಅದರಲ್ಲಿ ತಲ್ಲೀನವಾಗದೇ ಉದ್ದಕ್ಕೂ ನಿರೀಕ್ಷಕನಾಗಿ, ವ್ಯಾಖ್ಯಾನಕಾರನಾಗಿಯೇ ಉಳಿಯುತ್ತಾನೆಂದು ಹಿಂದೆಯೇ ಹೇಳಲಾಗಿದೆ. ಇದು ಕತೆಗಾರ ಉದ್ದೇಶಪೂರ್ವಕವಾಗಿ ಉಳಿಸಿಕೊಂಡ ನಿಲುವಿರಬಹುದು. ಭಾವಾತ್ಮಕ ಪ್ರತಿಕ್ರಿಯೆಯನ್ನಪೇಕ್ಷಿಸುವುದಕ್ಕಿಂತ ನೈತಿಕ ಉದ್ದೇಶಗಳಿಗಾಗಿ ಬಳಸುವುದೇ ಉತ್ತಮ ಎಂಬ ಕತೆಗಾರನ ನಿಲುವು ಇಂತಹ ಕತೆಗಳಿಗೆ ಜನ್ಮನೀಡಿರಬೇಕು. ಗಮನಿಸಬೇಕಾದ ಮೂರನೆಯ ಮತ್ತೊಂದು ಅಂಶ: ಪಾತ್ರ, ಘಟನೆಗಳು ಅಥವಾ ಮನುಷ್ಯನ ಜೀವನ ಕ್ರಮ-ಪರಿಣಾಮಗಳು ಕಾಲದ ಹಿನ್ನೆಲೆಯಲ್ಲಿ ಪರೀಕ್ಷೆಗೆ ಒಳಗಾಗುತ್ತಿರುತ್ತವೆ ಎಂಬ ನಂಬಿಕೆ.

* * * *

# ಅಪ್ರಕಟಿತ ನಾಲ್ಕು ವೃತ್ತಗಳು

—(ಸಂ) ಶ್ರೀ ಎಸ್. ಶಿವಣ್ಣ

ಈ ಮುಂದಿನ ನಾಲ್ಕು ವೃತ್ತಗಳು ಹರಿಹರನ 'ಪಂಪಾಶತಕ'ದ ಓಲೆ ಪ್ರತಿಯೊಂದರಲ್ಲಿ ಲಭ್ಯವಾಗಿವೆ. ಇವು ಛಂದಸ್ಸಿನ ದೃಷ್ಟಿಯಲ್ಲಿ ಚಂಪಕಮಾಲಾವೃತ್ತಗಳಾಗಿದ್ದು ಪ್ರಕಟಿತ ಹಾಗೂ ಲಭ್ಯ 'ಪಂಪಾಶತಕ' ಮತ್ತು 'ರಕ್ಷಾಶತಕ'ದ ಪ್ರತಿಗಳಲ್ಲಿಲ್ಲ.

ಮೇಲಿನ ಅಪ್ರಕಟಿತ ವೃತ್ತಗಳು ಬಹುಶಃ ಹರಿಹರದೇವನ ಅಲಭ್ಯ ಶತಕ/ಅಷ್ಟಕಕ್ಕೆ ಸಂಬಂಧಿಸಿರಬಹುದಾಗಿದೆ. ಈ ವೃತ್ತಗಳ ನಿರೂಪಣ ಶೈಲಿ ಮತ್ತು ವಸ್ತುಗಳು ಹರಿಹರನ ಜಾಯಮಾನಕ್ಕೆ ಹೇಳಿ ಮಾಡಿಸಿದಂತಿವೆ. ಹೀಗಾಗಿ ಈ ವೃತ್ತಗಳ ಕರ್ತೃತ್ವವನ್ನು ಹರಿಹರನಿಗೆ ಆರೋಪಿಸಬಹುದೆಂದು ಕಾಣುತ್ತದೆ. ಇದು ಕೇವಲ ಸದ್ಯದ ತೀರ್ಮಾನವೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಸ್ತುತ ಓಲೆ ಕೃತಿಯನ್ನು ನನಗೆ ಕೊಟ್ಟು ಬೆಳಕಿಗೆ ಬರಲು ಕಾರಣಕರ್ತರಾದವರು ಪೂಜ್ಯ ನಿ. ಪ್ರ. ಸ್ವರೂಪಿಗಳಾದ ಶ್ರೀ ಶಿವರುದ್ರಸ್ವಾಮಿಗಳು, ಬೇಲಿಮಠ ಬೆಂಗಳೂರು. ಅವರಿಗೆ ನನ್ನ ವಂದನೆಗಳನ್ನರ್ಪಿಸಲು ಸಂತೋಷಿಸುತ್ತೇನೆ.

ಅತುಳ ಕಪಾಲಿ ಪಾಲಿಸುವುದುಮಾಪತಿಮಾಪತಿ ರಾಜರಾಜಭೂ
ಷಿತ ಸಿತಭಸ್ಮ ಭಸ್ಮಮಯ ಮನ್ಮಥ ಮನ್ಮಥವಿಗ್ರಹಗ್ರಹೋ
ನ್ನತ ಸುರ ಸಿದ್ಧ ಸಿದ್ಧ ಸಕಲಾತ್ಮ ಕಳಾತ್ಮ ವಿಶೇಷ ಶೇಷ ಪೂ
ಜಿತ ಜಿತಕಾಲಕಾಲ ವಿಲಸದ್ಗಳ ಸದ್ಗಳ ಹಂಪೆಯಾಳ್ದನೇ ||೧||

ಕರುಣಿಸನಾಥನಾಥಕುಲಸೇವಿತಸೇವಿತ ಕಾಲಕಾಲ ಸಂ
ಹರಣರಣಾಗ್ರ ರಂಜಿತಜಿತಾಮರತಾಮರಸಾಕ್ಷಸಾಕ್ಷ ಸೌ
ಖ್ಯರ ನಿಜದರ್ಪದರ್ಪಕವಿನಾಶ ವಿನಾಶ [ಕ] ಕಾಯಕಾಯ ವಿ
ಸ್ತರಿತ ಭುಜಂಗಜಂಗಮ ಕೃಪಾಕರಸಾಕರ ಹಂಪೆಯಾಳ್ದನೇ ||೨||

ಗುಣನಿಧಿ ಗೂಢರೂಪ ಪರಬೊಮ್ಮ ನಿರಾಳದಸಾರಪೂರ ಭ
ಕ್ಷಣಕರಹಾಲಹಾಲವಿಷಭಕ್ಷ ವನೇಜ ದಿನೇಶ ಈಶ ತ್ರ್ಯ
ಕ್ಷಣ ಗಿರಿಜಾಂಗಲಿಂಗ ಕಮಲಾಕ್ಷ ವಿರಿಂಚಿ ಬಿಡೌಜ ವಂದ್ಯ
ಕ್ಷಣ ಪಶುಪಾಶಮುಕ್ತ ಪರಮೇಶ ಸದಾಶಿವ ಹಂಪೆಯಾಳ್ದನೇ ||೩||

ಎಲೆಲೆಲೆ ಸಾರಿದೆಂನೆಲೆಲೆ ಸಾರಿದೆನಕ್ಕಟ ಸಾರಿದೆಂ ವೃಥಾ
ಚಲಿಸದಿರಿನ್ನು ಪುಟ್ಟುವಪಪೂರ್ವಪಪೂರ್ವಪಪೂರ್ವ ವಾರ್ಧಿಯು
ನೆಲಿನಲಿದುಬ್ಬಿ ಬೊಬ್ಬಿಡುತ ಕೊಬ್ಬುತ ಕೂಗುತ ಹಾಡುತಾಡುತ
ಗ್ಗಲಿಸುತ ತೂಗಿಬಾಗುಕೊಂಡಾಡಿಸು ನಾಮನ ಹಂಪೆಯಾಳ್ದನೇ ||೪||

# ಕಾವ್ಯದಲ್ಲಿ ರಸವು ಸರ್ವಪ್ರಯೋಜನವೆ ಮೌಲೀಭೂತವಲ್ಲ

—ಶ್ರೀ ಸಿ. ಓಂಕಾರಪ್ಪ

ಲೋಕರೂಢಿಯಲ್ಲಿ ಜೀವ, ಜಗತ್ತು, ಈಶ್ವರ–ಇವು ಮೂರೂ ಬೇರೆ ಬೇರೆಯಾಗಿರುವಂತೆ ತೋರುತ್ತದೆ. ಆದರೆ ಋಷಿಯ ದ್ರಷ್ಟಾರ ಪ್ರಜ್ಞೆಗೆ ಈ ತೋರಿಕೆಯ ಭಿನ್ನತೆ ಮರೆಯಾಗಿ ಸರ್ವವೂ ಬ್ರಹ್ಮಮಯವಾಗಿ ಗೋಚರಿಸುತ್ತದೆ. ಬಾಹ್ಯ ಜಗತ್ತನ್ನೇ ದೃಷ್ಟಿಸಿ ನೋಡಿದರೂ ಸಾಕು, ಹೊರಗೆ ಕಾಣುತ್ತದೆ ಅನಂತವಾದ ಅಪಾರವಾದ ನೀಲಾಕಾಶ. ಯಾವ ವಿಜ್ಞಾನವೂ ಈವರೆಗೆ ಕಂಡು ಕೇಳಿ ಅರಿಯದ ಅದರ ಆದಿ ಅಂತ್ಯಗಳೂ ಯಾವ ವಿಜ್ಞಾನಿಯ ಊಹೆಗೂ ನಿಲುಕದ ಅದರ ಅಪಾರತೆಯೂ ಕಣ್ಣೆದುರು ಸರ್ವದಾ ಪ್ರತ್ಯಕ್ಷವಾಗಿಯೇ ಇರುವುದನ್ನು ಕಾಣುತ್ತೇವೆ. ಕಣ್ಣೆದುರಿನ ಈ ಅನಂತ ವಿಶ್ವಸಾಗರದಲ್ಲಿ ಮಾನವ ಜೀವಿ ಲೆಕ್ಕಕ್ಕೇ ಬಾರದ ಕ್ಷುದ್ರಾತಿ ಕ್ಷುದ್ರವಾದ, ಯಃಕಶ್ಚಿತವಾದ ಒಂದು ಗುಳ್ಳೆ ಮಾತ್ರವಷ್ಟೆ. ಇದು ನಮ್ಮ ಸಾಮಾನ್ಯ ಪ್ರಜ್ಞೆಗೆ ಸತ್ಯಸ್ಯ ಸತ್ಯವೆನಿಸಿ ಕಣ್ಣಿಗೆ ಕಾಣುವ ಬಾಹ್ಯ ಜಗತ್ತಿನ ವಿಚಾರವಾದರೆ ಅಂತರಂಗವು ಇನ್ನೂ ವಿಚಿತ್ರಕರವಾಗಿದ್ದು ದಂಗು ಬಡಿಸುವಂತಿರುತ್ತದೆ.

ಅದ್ಭುತಗಳ ತವರಾದ ವಿಶ್ವದ ವಿಚಿತ್ರ ವಿನ್ಯಾಸಗಳನ್ನು ಬುದ್ಬುದ ಸದೃಶವಾದ ಮಾನವ ಮತಿಗೆ ನಿಲುಕಿಸಲು ವಾಗರ್ಥ ಪ್ರತಿಪತ್ತಿಯಿಂದ ಸಂಜನಿಸುವ ಕಾವ್ಯಕಲೆ ಶ್ರೇಷ್ಠ ಸಾಧನವೆನ್ನಬಹುದು. ಕವಿಯ ಪ್ರತಿಭಾಚಕ್ಷು ವಿಶ್ವಸಮಸ್ತದ ಸರ್ವಾಂಗದಲ್ಲೂ ಪ್ರವೇಶಾರ್ಹತೆಯನ್ನು ಪಡೆದ ಕ್ಷಕಿರಣದಂತಿರುತ್ತದೆ. ಧೂಳಿನ ಕಣದಿಂದ ಆಕಾಶದ ಅನಂತತೆಯ ವರೆಗೆ ಕವಿಪ್ರತಿಭೆಗೆ ಅವೇದ್ಯವಾದದ್ದೆಂಬುದೇ ಇಲ್ಲ. ಕೊಳಕು ಚಿಂದಿಯ ಮುರುಕು ಗುಡಿಸಲು ನಿವಾಸಿಯಿಂದ ಹಿಡಿದು ವಜ್ರಕಿರೀಟಧಾರಿಯಾದ ಸಾರ್ವಭೌಮನ ಜೀವನದ ವರೆಗೆ ಮಾನವ ಬಾಳಿನ ಒಳ ಹೊರಗುಗಳೆಲ್ಲ ಕವಿ ಪ್ರತಿಭೆಗೆ ಅಂಗೈನೆಲ್ಲಿಕಾಯಿ. ಹೀಗಾಗಿ ಇತರ ಕಲೆಗಳಿಗೆ ದಕ್ಕದ ಸನ್ನಿವೇಶ ಸೃಷ್ಟಿ ಸಾಮರ್ಥ್ಯವೊಂದು ವಾಗರ್ಥ ಪ್ರತಿಪತ್ತಿಯಿಂದ ಮೈದಳೆಯುವ ಕಾವ್ಯ ಕಲೆಗೆ ಮೀಸಲಾಗಿರುವಂತಿದೆ. ಆದ್ದರಿಂದಲೇ ಕವಿಯನ್ನು, ಸೃಷ್ಟಿಕರ್ತನಾದ ಬ್ರಹ್ಮನ ಪ್ರತಿಮೂರ್ತಿ ಎಂದು ಕರೆಯುವುದು ಅರ್ಥಪೂರ್ಣವಾಗುತ್ತದೆ.

ಕವಿ ಕರ್ಮಕ್ಕೆ ಕಾರಣ ಮತ್ತು ಅದರ ಪರಿಣಾಮ ಎರಡೂ ಆನಂದವೇ. ಭಾರತೀಯ ಕಾವ್ಯ ಮೀಮಾಂಸೆ ಕಾವ್ಯದ ಈ ಅನುಭವವನ್ನು ರಸಾನುಭವ ಎಂದು ನಿರ್ದೇಶಿಸುತ್ತದೆ. ಈವರೆಗಿನ ಭಾರತೀಯ ಕಾವ್ಯ ಮೀಮಾಂಸಾ ತಜ್ಞರ ಅಭಿ

ಪ್ರಾಯದಲ್ಲಿ ಕಾವ್ಯರಚನೆಯಲ್ಲಿ ಕವಿ ಅಳವಡಿಸುವ ಎಲ್ಲ ತಂತ್ರಗಳ ಗುರಿಯೂ ರಸಾನುಭವವೇ. ಕಾವ್ಯದಲ್ಲಿ ರಸವೇ ಪರಮ ಪ್ರಯೋಜನ. ರಸವೇ ಕಾವ್ಯದ ಅಂತರತಮ ರಹಸ್ಯ. ಕಾವ್ಯದ ಪರಮ ಗಂತವ್ಯವೆನಿಸಿದ ಈ ರಸ-ಧ್ವನಿ-ಔಚಿತ್ಯಗಳ ಕಾವ್ಯಗಾರುತ್ರಯವನ್ನು ಕಂಡುಹಿಡಿದ ಕಾವ್ಯ ಮೀಮಾಂಸಕರು ಒಂಬತ್ತು ಮತ್ತು ಹತ್ತನೆಯ ಶತಮಾನದ ಆನಂದವರ್ಧನ ಮತ್ತು ಅಭಿನವಗುಪ್ತರು. ಇವರಿಬ್ಬರನ್ನೂ ಕಾವ್ಯ ಮೀಮಾಂಸೆಯ ಎವರೆಸ್ಟ್ ವೀರರೆಂದೂ ಇವರು ಕಂಡುಹಿಡಿದ ಈ ಅಂತರತಮ ರಹಸ್ಯವೇ ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಅಂತಿಮ ಶಿಖರ. ಕಟ್ಟಕಡೆಯ ಸಾಧನೆ ಎಂದೆಲ್ಲಾ ಪ್ರಶಂಸಿಸಲಾಗಿದೆ. ಅಷ್ಟೇ ಅಲ್ಲದೆ ಲೋಕದ ಕಾವ್ಯಮೀಮಾಂಸಾ ಶಾಸ್ತ್ರಕ್ಕೆ ಈ ಭಾರತೀಯ ಸಿದ್ಧಾಂತವು ಮಹೋತ್ತುಂಗವಾದ ಕೊಡುಗೆ ಎಂದೆಲ್ಲಾ ಸಾರುತ್ತಾ ಬಂದದ್ದಾಗಿದೆ. ಈ ಸಿದ್ಧಾಂತದ ಪ್ರಕಾರ ಕಾವ್ಯದ ಆತ್ಮ ಧ್ವನಿ. ರಸವು ಅದರ ಪ್ರಾಣ. ರಸ ಪ್ರತೀತಿಯನ್ನುಂಟುಮಾಡದ ವಾಕ್ಯಗಳು ಕಸಕ್ಕೆ ಸಮಾನ. ರಸವೇ ಕಾವ್ಯದ ಅಂತರತಮ ರಹಸ್ಯ. ಆದ್ದರಿಂದ ಕಾವ್ಯದಲ್ಲಿ ಅಗ್ರಪೂಜೆ ಸಲ್ಲಬೇಕಾಗಿರುವುದು ರಸಕ್ಕೆ. ಇದರ ಪ್ರಕಾರ ರಸವು "ಸರ್ವಪ್ರಯೋಜನ ಮೌಲೀಭೂತ" ಎನಿಸಿಕೊಳ್ಳುತ್ತದೆ. ಧ್ವನಿಪ್ರಸ್ಥಾನಕ್ಕಿಂತ ಮೊದಲು ಬಂದ ಅಲಂಕಾರ ಪ್ರಸ್ಥಾನವಾಗಲೀ, ರೀತಿ ಪ್ರಸ್ಥಾನವಾಗಲೀ, ವಕ್ರೋಕ್ತಿ ವಿಶ್ಲೇಷಣೆ ವಿವೇಚನೆಗಳಾಗಲೀ ಕಾವ್ಯ ರಹಸ್ಯ ಭೇದನದಲ್ಲಿ ಆರಂಭದ ಮಜಲುಗಳಷ್ಟೆ; ಅವು ಶಿಖರಸ್ಥಾನಗಳಲ್ಲ. ಮೇರು ಶಿಖರಾರೋಹಣ ಸಾಹಸವೆಂದರೆ ಅದು ಧ್ವನಿ ಪ್ರಸ್ಥಾನದವರು ಸ್ಥಾಪಿಸಿದ ರಸ-ಧ್ವನಿ ಸಿದ್ಧಾಂತ. ಕಾವ್ಯ ರಹಸ್ಯ ಭೇದನದಲ್ಲಿ ಈ ಸಾಹಸಿಗಳು ಪೂರ್ಣ ನಿಸ್ಸಂದಿಗ್ಧವಾದ ಯಶಸ್ಸನ್ನು ಗಳಿಸಿ ಕೃತಕೃತ್ಯರಾದುದರಿಂದ ಕಾವ್ಯಮೀಮಾಂಸೆ ಬಹುತೇಕ ಅಲ್ಲಿಗೆ ನಿಂತುಹೋಯಿತು. ನಂತರ ಈ ಪ್ರವೃತ್ತಿಯ ಸಮಾನಾಂತರದಲ್ಲೂ ಕಾವ್ಯ ಮೀಮಾಂಸೆಯು ದಿಗ್ಭ್ರಾಂತಿಗಳ ಅಭಿವ್ಯಕ್ತಿಯಾಯಿತು.

ಈಗ ಈ ವಿಚಾರವನ್ನು ಇನ್ನಷ್ಟು ಪರಿಶೀಲಿಸುವ ಕಾಲ ಬಂದಿದೆ. ಈ ವಾದ ಪರಿಶೀಲಿಸಬೇಕಾದ ಅಗತ್ಯವುಂಟಾಗುತ್ತದೆ. ಧ್ವನಿಯು ಕಾವ್ಯದ ಆತ್ಮ, ರಸವು ಅದರ ಪ್ರಾಣ ಎಂಬ ನಿಲುವು ಸಮರ್ಥನೆ ಮಾತ್ರದಿಂದ ಕಾವ್ಯ ಮೀಮಾಂಸೆಯು ಅಂತಿಮ ಶಿಖರಾರೋಹಣ ಮಾಡಿದಂತಾಯಿತೇ? ಕಾವ್ಯ ರಹಸ್ಯ ಸಮಸ್ತವನ್ನೂ ಇವರಿಂದ ಭೇದಿಸಿ ತೆರೆದಿಟ್ಟಂತಾಯಿತೇ? ಎಂಬ ಈ ಪ್ರಶ್ನೆಗಳನ್ನು ಈಗ ಸಂದೇಹಕ್ಕೆ ಅವಕಾಶವಿಲ್ಲದಂತೆ ಉತ್ತರಿಸಬೇಕಾಗಿದೆ

ಒಳಗಾಗಬೇಕಾದ ಅಗತ್ಯ ಕಂಡುಬರುತ್ತದೆ. ಸರ್ವಂಕಷವಾಗಿ ಇದರ ಮೂಲವನ್ನು ಕುರಿತು ಅನ್ವೇಷಿಸಲು ಈ ಹೇಳಿಕೆಗಳನ್ನು ಮಹಾಕಾವ್ಯದ ಸಾಗರ ಸಂಪತ್ತಿನ ಶೋಧನ ತಂತ್ರಗಳಲ್ಲಿ ತೊಡಗಿಸಿ ಪರೀಕ್ಷಿಸಿದರೆ ಆಗ ಅವುಗಳ ಅಸಲಿ ನಕಲಿತನಗಳನ್ನೆಲ್ಲ ವಿವೇಚಿಸಲು ಅನುಕೂಲವಾಗುತ್ತದೆ.

ಮೊದಲನೆಯದು ಕಾವ್ಯ. ಅನಂತರ ಉಂಟಾಗತಕ್ಕದ್ದು ಮಹಾಕಾವ್ಯವಷ್ಟೆ. ಮಹಾಕಾವ್ಯದಲ್ಲಿ ಅಡಗಿದೆ ಎನ್ನಲಾದ ಮಹತ್ತು ಯಾವುದು? ಅದಕ್ಕೂ ಕಾವ್ಯದ ಮೂಲಾಂಶಕ್ಕೂ ಏನಾದರೂ ಸಂಬಂಧವುಂಟೆ? ಅಥವಾ ಈ ಮಹತ್ತು ಕಾವ್ಯದ ಮೂಲತತ್ವದಿಂದ ಯಾವ ಮಟ್ಟಿಗಾದರೂ ಭಿನ್ನವಾಗಿರುವಂಥದೆ? ಭಿನ್ನವಾಗಿದ್ದರೆ ಅದು ಯಾವ ಬಗೆಯದು? ಕಾವ್ಯದ ಮೂಲತತ್ತ್ವಕ್ಕಿಂತ ಬೇರೆಯದೇ ಆದ ಈ ಮಹತ್ತು ಕಾವ್ಯದ ಮೂಲತತ್ತ್ವದೊಡನೆ ಸೇರಿಕೊಂಡದ್ದರಿಂದ ಕಾವ್ಯವು ಮಹಾಕಾವ್ಯವಾಗಿ ಮಾರ್ಪಡುತ್ತದೆಯೆ? ಹಾಗೆ ಸೇರಿಕೊಳ್ಳುವುದು ಎಂದರೇನು? ಕಾವ್ಯತ್ವ ಮಹತ್ವಗಳೆರಡೂ ಹಗ್ಗದ ಎರಡು ಹುರಿಗಳಂತೆ ಬೇಕೆಂದಾಗ ಬೇರೆ ಬೇರೆಯಾಗಿ ವಿಂಗಡಿಸಲು ಬರುವಂಥವೆ? ಅಥವಾ ಅವುಗಳ ಸಂಬಂಧ ಇನ್ನಾವುದಾದರೂ ಅಳತೆಗೋಲಿಗೆ ಸಿಗುವಂಥವೆ? ಇತ್ಯಾದಿ ಇತ್ಯಾದಿ ಪ್ರಶ್ನೆಗಳು ಸಾಲೆ ಸಾಲೆಯಾಗಿ ಹೊರಸೂಸಿದರೆ ಆಶ್ಚರ್ಯವಿಲ್ಲ. ಈ ಸಂದರ್ಭದಲ್ಲಿ ಮಹಾಭಾರತಕಾರನು ತಮಾಷೆಯಾಗಿ ಹೇಳಿರುವಂತಿರುವ ಶ್ಲೋಕವೊಂದು ನೆನಪಾಗುತ್ತದೆ. ಕೃತಿಗೆ 'ಮಹಾಭಾರತ' ಎಂದು ಏಕೆ ಹೆಸರು ಬಂತೆಂದರೆ ಆತನ ಅಂಬೋಣವನ್ನು ನೋಡಿ.

“ಮಹತ್ತ್ವಾದ್ ಭಾರವತ್ತ್ವಾತ್ ಚ ಮಹಾಭಾರತಮುಚ್ಯತೇ” ಕೃತಿಯಲ್ಲಿ ಎರಡು ಅಂಶಗಳು ಸೇರಿಕೊಂಡಿರುವುದರಿಂದ ಇದನ್ನು 'ಮಹಾಭಾರತ' ಎನ್ನಬೇಕಾಯಿತಂತೆ. ಅವು ಯಾವುವೆಂದರೆ ಒಂದು 'ಮಹತ್ವ' ಇನ್ನೊಂದು 'ಭಾರ'. ಭಾರವಾಗಿರುವ ಕೃತಿಗಳಿಗೇನೂ ಬರಗಾಲವಿಲ್ಲ. ಬೇಕಾದಷ್ಟಿವೆ. ಆದರೆ ಅದಷ್ಟೇ ಆದರೆ ಅದರಿಂದ ಪ್ರಯೋಜನವೇನು? ಅದು ಬರೀ ಭಾರ ಮಾತ್ರವಾದರೆ ಕಡೆಗೆ ಹೊರಬೇಕಾದ ನಮಗೆ ಬರೀ ತ್ರಾಸದಾಯಕವಾಗಿಬಿಟ್ಟೀತು. ಆದರೆ ಇದು ಮಾತ್ರ ಹಾಗಲ್ಲ. ಇದು ಭಾರವಾಗಿರುವಂತೆಯೇ ಇದರಲ್ಲಿ 'ಮಹತ್ವ'ವೂ ಮನೆ ಮಾಡಿಕೊಂಡಿದೆ. ಆದ್ದರಿಂದಲೇ ಎರಡೂ ಅಂಶಗಳನ್ನೂ ಸ್ಮರಣೆಗೆ ತರುವ ಅನುಕೂಲಕ್ಕೋಸ್ಕರ ಇದಕ್ಕೆ ಮಹಾ-ಭಾರ-ತ ಎಂದು ಹೆಸರಿಡಲಾಗಿದೆಯಂತೆ. ಈ ವಿವರಣೆಯೇನೋ ತಮಾಷೆಗಾಗಿ ಹೇಳಿರುವಂತೆ ತೋರುತ್ತದೆ ನಿಜ. ಆದರೆ

ಇದರಲ್ಲಿನ 'ಭಾರ'ವನ್ನು ಒತ್ತಟ್ಟಿಗೆ ಸರಿಸಿ 'ಮಹತ್ವ' ವನ್ನು ಮಾತ್ರ ಕುರಿತು ಸಂಭಾವಿಸ ಹೊರಡುವುದೂ ಒಂದು ಕ್ರಮವಷ್ಟೆ ? ಈ ಮಹತ್ವವೇ ಇಲ್ಲಿ ಮಹಾ ಭಾರಿಯಾಗಿದ್ದುದರಿಂದ ಪುಸ್ತಕವೂ ಕಡೆ ಕಡೆಗೆ ಭಾರವಾಗುತ್ತಾ ಹೋಗಿರಲೂ ಸಾಕು. ಆದ್ದರಿಂದ 'ಮಹಾಕಾವ್ಯ' ಎಂಬಲ್ಲಿ 'ಮಹತ್'ತ್ವವನ್ನೂ 'ಕಾವ್ಯ' ತ್ವವನ್ನೂ ಬೇರೆ ಬೇರೆಯಾಗಿ ವಿವೇಚಿಸಬೇಕೆ ? ಹಾಗೆ ವಿವೇಚಿಸಲು ಸಾಧ್ಯವೆ ? ಅಥವಾ ಕಾವ್ಯತ್ವವೇ ಹೆಪ್ಪುಗಟ್ಟಿ, ಘನೀಭವಿಸಿ, ರಾಶಿರಾಶಿಯಾಗಿ ಸುರಿಯಲ್ಪಟ್ಟು, ಸಂಚಯುಗೊಂಡು, ಶಿಖರಪ್ರಾಯವಾಗಿ, ಹೈಮಾಚಲೋನ್ನತವಾಗಿ ನೆಲೆಗೊಂಡಿದ್ದುರಿಂದಾಗಿ ಒಂದು ಕೃತಿ 'ಮಹಾಕಾವ್ಯ' ವಾಗಿ ರೂಪುಗೊಳ್ಳಲು ಸಾಧ್ಯವಾಯಿತೆ ಎಂಬೆಲ್ಲ ಅಂಶಗಳೂ ನಮ್ಮ ಕುತೂಹಲಕ್ಕೆ ಕಾರಣವಾಗುತ್ತವೆ.

ಈಗ ಮತ್ತೆ 'ಕಾವ್ಯ' ಎಂದರೇನು ಎಂಬಲ್ಲಿಂದಲೇ ಆರಂಭಿಸಬೇಕಾಗುತ್ತದೆ. ಇದಕ್ಕೆ ಉತ್ತರಗಳಿಗೇನೂ ಬರಗಾಲವಿಲ್ಲವಷ್ಟೆ ? 'ಶಬ್ದಾರ್ಥ ಸಹಿತೌ ಕಾವ್ಯಂ' ಎಂಬ ಸೌದೆ ಸೀಳುವ ಉಕ್ತಿಯಿಂದ ಮೊದಲ್ಗೊಂಡು, 'ಕಾವ್ಯಸ್ಯಾತ್ಮಾ ಧ್ವನಿಃ' ಎಂಬ ಚರಮ ಸಿದ್ಧಿಗೆ ತಲಪುವ ವರೆಗಿನ ಹಲವು ಪ್ರಸ್ಥಾನಕಾರರ ವಾದ ಸರಣಿಗಳನ್ನು ತಕ್ಕಡಿಯ ಒಂದು ತಟ್ಟೆಯಲ್ಲೂ "ನಾನೃಷಿಃ ಕುರುತೇ ಕಾವ್ಯಂ" ಎಂಬ ಒಂದೇ ಒಂದು ವಾಕ್ಯವನ್ನು ತಕ್ಕಡಿಯ ಇನ್ನೊಂದು ತಟ್ಟೆಯಲ್ಲೂ ಇಟ್ಟು ತೂಕಕ್ಕೇರಿಸಬೇಕಾಗುತ್ತದೆ. ಹಾಗೆ ಏರಿಸಿ, ಜೊತೆಗೆ ಹುಬ್ಬೇರಿಸಿ ಯೋಚಿಸುತ್ತಾ ಬಹು ದೂರದ ವರೆಗೆ ಸಾಗಿ ಹೋದೆವಾದರೆ ಅದು ನಮ್ಮನ್ನು ಬೇರಾವುದೋ ಒಂದ ಲೋಕಕ್ಕೆ ತಲುಪಿಸಿಬಿಡುತ್ತದೆ. ದೂರದರ್ಶಕದಿಂದ ನಮ್ಮ ಭೂಗ್ರಹವನ್ನು ವೀಕ್ಷಿಸತೊಡಗುವ ವ್ಯೋಮ ಸಾಹಸಿಯ ಕಣ್ಣಿಗೆ ಕಾಣುವ ದೃಶ್ಯಾವಳಿಯಂತಿರುತ್ತದೆ–ನಮಗೆ ತಕ್ಕಡಿಯ ಇನ್ನೊಂದು ತಟ್ಟೆಗೆ ಒಟ್ಟಲ್ಪಟ್ಟ ಕಾವ್ಯ ಮೀಮಾಂಸಕರ ಅಥವಾ ನಮ್ಮ ಸರ್ವ ಆಲಂಕಾರಿಕರ ಪ್ರಸ್ಥಾನ ಪರಂಪರೆಗಳ ಸೃಷ್ಟಿಗೆ ಕಾರಣವಾದ ಸಮುಚ್ಚಯ. ಇತರ ಪ್ರಸ್ಥಾನಗಳನ್ನೆಲ್ಲ ಹಿಂದಕ್ಕೆ ತಳ್ಳಿ ಸಿದ್ಧಿಶಿಖರವನ್ನು ಸ್ಥಾಪಿಸಿದ ಧ್ವನಿಪ್ರಸ್ಥಾನವು 'ರಸವೇ ಸರ್ವ ಪ್ರಯೋಜನ ಮೌಲೀಭೂತ' ಎಂದು ಘೋಷಿಸಿ ರಸ–ಧ್ವನಿಗಳು ಕಾವ್ಯದ ಆತ್ಮ ಎಂದು ಸಾರಿತಷ್ಟೆ. ಇದಕ್ಕೂ "ನಾನೃಷಿಃ ಕುರುತೇ ಕಾವ್ಯಂ" ಎಂಬ ಮಾತಿಗೂ ಅಷ್ಟೇನೂ ನಿಕಟ ಸಂಬಂಧವಿದ್ದಂತಿಲ್ಲ ಎಂಬುದು ಮೇಲು ನೋಟಕ್ಕೇ ಯಾರಿಗಾದರೂ ತಿಳಿಯುವಂತಿದೆ. "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್" ನಿಷ್ಪತ್ತಿಯಾಗುವ ರಸವನ್ನೂ ಮತ್ತು ಅದರ ಆತ್ಮಸ್ಥ ಕಾರಣವಾದ ಧ್ವನಿಯನ್ನೂ ಕಟ್ಟಿಕಡೆಯ [illegible] ಕೇವಲ [illegible]ಕೊಂಡು ಪ್ರತಿಪಾದಿಸಿದ್ದಷ್ಟರಿಂದಲೇ [illegible]

'ಮಹಾಕಾವ್ಯ' ಎನಿಸಿಕೊಳ್ಳುವ ಅರ್ಹತೆಯನ್ನು ಪಡೆಯಲಾರದೆಂಬುದೂ ತೀರ ಸ್ಪಷ್ಟವೇ ಆಗಿದೆ. ಏಕೆಂದರೆ ನಮ್ಮ ಆಲಂಕಾರಿಕರ ದೃಷ್ಟಿಯಲ್ಲಿ "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್" ಸಂಜನಿಸುವ ರಸಕ್ಕೂ 'ಋಷಿತ್ವ'ಕ್ಕೂ ಯಾವ ಸಂಬಂಧವಿದ್ದೀತು ? ಈ ರಸವು ಎಷ್ಟೆಷ್ಟು ಸಂಕುಚಿತಾರ್ಥದಲ್ಲಿ ಸಂಗ್ರಹಿಸಲ್ಪಡಬಹುದೆಂದರೆ ಕೆಲವರ ಅಭಿಪ್ರಾಯದಲ್ಲಂತೂ ಇದು 'ರಸವದಲಂಕಾರ' ಎಂದು ಒಂದು ಅಲಂಕಾರ ವಿಶೇಷವಾಗಿ ಪರಿಗಣಿಸಲ್ಪಡಬಹುದಾಗಿತ್ತಷ್ಟೆ. ಹೀಗಾಗಿ ಭರತ ಸೂತ್ರದ ಈ ರಸವು ನೂರರಲ್ಲಿ ನೂರೊಂದನೆಯ ಅಲಂಕಾರವೆನಿಸಿಕೊಂಡು ಕೇಳುವವರು ದಿಕ್ಕಿಲ್ಲದೆ ಯಾವುದೋ ಮೂಲೆಯಲ್ಲಿ ಬಿದ್ದು ಹೋಗಿತ್ತು. ಅಲಂಕಾರಗಳ ಅಬ್ಬರದಲ್ಲಿ ಮೂಲೆಗುಂಪಾಗಿದ್ದ ಇದನ್ನು ಧ್ವನಿ ಪ್ರಸ್ಥಾನಕಾರನು ಅನರ್ಘ್ಯ ರತ್ನವೆಂದು ಗುರುತಿಸಿ ಸಿಂಹಾಸನಾರೋಹಣ ಮಾಡಿಸಿ ರಸ-ಧ್ವನಿ-ಔಚಿತ್ಯಗಳ ಕಾವ್ಯಗಾಯತ್ರಿಯನ್ನು ಸೃಷ್ಟಿಸಿ ಕಾವ್ಯದಲ್ಲಿ ರಸವು ಸರ್ವ ಪ್ರಯೋಜನ ಮೌಲೀಭೂತ ಎಂದು ಸಾರಿದನು. ಧ್ವನಿ ವಿರೋಧಿಗಳೂ ಅಂತರ್ಭಾವವಾದಿಗಳೂ ಇದ್ದೇ ಇದ್ದರಾದರೂ ಅಂದಿನಿಂದ ಇಂದಿನ ವರೆಗೆ ಈ ಗಾಯತ್ರಿಯ ಸಾರ್ವಭೌಮಿಕೆಯನ್ನೇ ಬಹುಮಟ್ಟಿಗೆ ಎಲ್ಲರೂ ಮಾನ್ಯ ಮಾಡಿಕೊಂಡು ಬಂದಿರುವರೆಂಬುದು ನಿರ್ವಿವಾದ ಪ್ರಸಂಗ ಹೀಗಿರುವಲ್ಲಿ ಕವಿಯ ಋಷಿತ್ವಕ್ಕಾಗಲೀ ಕಾವ್ಯದಲ್ಲಿ ಶ್ರೇಣೀಕೃತವಾಗಬಹುದಾದ ಮಹತ್ತಿಗಾಗಲೀ ಭರತ ಸೂತ್ರದ ಈ ರಸವು ಯಾವ ರೀತಿಯ ಸಂಬಂಧವನ್ನು ಹೊಂದಿರಬಹುದೆಂಬುದು ಇನ್ನೂ ಪರ್ಯಾಲೋಚಿಸಬೇಕಾದ ಅಂಶವಾಗಿಯೇ ಉಳಿಯುತ್ತದೆ.

'ವಾಕ್ಯಂ ರಸಾತ್ಮಕಂ ಕಾವ್ಯ' ಎಂಬ ಮಾತೊಂದಿದೆಯಷ್ಟೆ ? ಇದರಲ್ಲಿ ಬಳಕೆ ಹಾಕಿರುವ ಏಕವಚನ ಪ್ರಯೋಗವನ್ನು ಗಮನಿಸಿ. ರಸಾತ್ಮಕವಾದ ವಾಕ್ಯವು-ವಾಕ್ಯ ಸರಣಿಯಾಗಲೀ, ವಾಕ್ಯ ಸಮೂಹವಾಗಲೀ ಅಲ್ಲ-ಕಾವ್ಯ ಎನಿಸಿಕೊಳ್ಳುತ್ತದಂತೆ. ಕೇಶಿರಾಜನು ಹೇಳಿರುವ ಜಾತ್ಯೇಕ ವಚನಕ್ಕೆ ಇದನ್ನು ಒಳ್ಳೆಯ ಉದಾಹರಣೆ ಎಂದಿಟ್ಟುಕೊಳ್ಳಬೇಕಾಗಬಹುದು. ಇಲ್ಲದಿದ್ದರೆ ಅದು ಎಂತಹ ವಾಕ್ಯವೇ ಆಗಿರಲಿ ಒಂದೇ ಒಂದು ವಾಕ್ಯವು ವಿಭಾವ, ಅನುಭಾವ, ವ್ಯಭಿಚಾರಿ ಭಾವ-ಇಷ್ಟಕ್ಕೂ ಭಾವಗಳನ್ನೂ ಅವುಗಳ ಸಂಯೋಗವನ್ನೂ ಸೂಚಿಸಿ ರಸ ಪ್ರತೀತಿ ಕಾರಣವಾಗಬಲ್ಲುದೆ ? ಇಂತಹ ಮಾತುಗಳ ಅರ್ಥವನ್ನು ಅಕ್ಷರಶಃ ಪರಿಭಾವಿಸ ಹೊರಟರೆ ಆಗ ಎಲ್ಲಿಗೆ ತಲಪುತ್ತೇವೆ ? ಕಾವ್ಯ ಎಂಬ ಮಾತಿನ ಅರ್ಥವನ್ನು ಒಂದೊಂದೇ ವಾಕ್ಯಗಳಿಗೂ ಅನ್ವಯಿಸ ಹೊರಟು ತಕ್ಕ [illegible]

ಕಾಳಿನಲ್ಲಿ ಕೆತ್ತಿದ ಆನೆಯ ಮೂರ್ತಿಯ ಕಲೆಗಾರಿಕೆಯನ್ನು ಕುರಿತ ಪರಿಶೀಲನೆಗೆ ನಮ್ಮನ್ನು ಗುರಿ ಮಾಡಿದಂತಾಗುವುದಿಲ್ಲವೆ ? ಇದು ಒಂದು ರೀತಿಯಿಂದ ಸಂಕುಚಿತ ದೃಷ್ಟಿಯ ಪರಮಾವಧಿಯಲ್ಲದೆ ಬೇರಲ್ಲ.

ಮಿತಿಮೀರಿದ ಮಿತಿಯ ಈ ತುದಿಯ ಅಪಹಾಸ್ಯಕಾರಕತೆಯನ್ನು ತಳ್ಳಿ ಹಾಕಿ ಧ್ವನಿ ಸಿದ್ಧಾಂತಿಯ ವಿಶಾಲಾರ್ಥವನ್ನೇ ಬೆನ್ನಟ್ಟಿದೆವೆನ್ನೋಣ. ಆಗಲೂ ಕೇವಲ ಶೃಂಗಾರಾದಿ ನವರಸ ಪ್ರತಿಪಾದಕನಾದ ಕವಿಯನ್ನು ನಾವು ಋಷಿ, ದ್ರಷ್ಟಾರ ಇತ್ಯಾದಿ ವಿಶೇಷಣಗಳಿಂದ ತೂಗಬಲ್ಲೆವೆ ಎಂಬ ಕುತೂಹಲಕರ ಪ್ರಶ್ನೆ ಎದುರು ನಿಲ್ಲುತ್ತದೆ. ಉದಾಹರಣೆಗೆ ಸುಭದ್ರಾ ಪರಿಣಯವನ್ನೋ, ಅಭಿಮನ್ಯುವಿನ ಸಂಗ್ರಾಮವನ್ನೋ ಅಥವಾ ಉತ್ತರನ ಪೌರುಷದಂತಹ ಹಾಸ್ಯ ರಸದ ಸಂದರ್ಭವನ್ನೋ ಪರಿಭಾವಿಸತೊಡಗಿದೆವೆಂದಿಟ್ಟುಕೊಳ್ಳೋಣ ಒಂದೊಂದೇ ಸಂದರ್ಭಗಳನ್ನು ಬೇರೆ ಬೇರೆಯಾಗಿ ಪರಿಶೀಲಿಸುವಾಗ ಭರತ ಸೂತ್ರದ ರಸವು ಜಲಪಾತದಂತೆ ಧುಮ್ಮಿಕ್ಕುವುದನ್ನು ಕಾಣಬಹುದು. ಆದರೆ ಸಮಗ್ರಭಾರತದಿಂದ ಕಳಚಿ ನಿಂತಿರುವ ಈ ಬಿಡಿ ಸಂದರ್ಭಗಳಿಂದ ಅಥವಾ ಈ ತೆರನ ಪ್ರಸಂಗಗಳನ್ನೇ ಕೋದ ಪದ್ಯ ಪ್ರಸಂಗಮಾಲಿಕೆಯ ಪರಿಭಾವನೆಯಿಂದ ನಮ್ಮ ಮೇಲೆ ಉಂಟಾಗುವ ಪರಿಣಾಮವೇನು ? ಇಲ್ಲಿ ರಸಾನುಭವಕ್ಕೆ ಯಾವ ಕೊರತೆಯೂ ಕಾಣುವುದಿಲ್ಲ ಎಂಬುದು ನೂರಕ್ಕೆ ನೂರು ಸತ್ಯವೆ ಆದರೆ ಸಮಗ್ರ ಭಾರತದ ಪರಿಭಾವನೆಯಿಂದ ಲಭಿಸುವ ಚರಮ ಪರಿಣಾಮವನ್ನು ಇದರೊಡನೆ ಎಷ್ಟು ಮಾತ್ರಕ್ಕಾದರೂ ಹೋಲಿಸಬಲ್ಲೆವೆ ? ಇಂತಹ ಬಿಡಿ ಸಂದರ್ಭಗಳನ್ನು ರಸಭರಿತವಾಗಿ ನಿರೂಪಿಸುವವನನ್ನು ಋಷಿ ಎನ್ನಲಾದೀತೆ ಎಂಬುದೇ ನಮ್ಮ ಪ್ರಶ್ನೆ

ಸಮಗ್ರ ಕೃತಿಯ ಪರಿಭಾವನೆಯಿಂದ ಉಂಟಾಗುವ ಪರಿಣಾಮಕ್ಕೂ ಮೇಲೆ ಹೇಳಿದಂತಹ ಯಾವುದಾದರೊಂದು ಬಿಡಿ ಸಂದರ್ಭದ ಪರಿಭಾವನೆಯಿಂದ ಉಂಟಾಗುವ ಪರಿಣಾಮಕ್ಕೂ ಅಜಗಜಾಂತರವಿರುವಂತೆ ತೋರುತ್ತದೆ ಮಹಾಭಾರತವೋ, ನಳೋಪಾಖ್ಯಾನವೋ, ಸಾವಿತ್ರಿಯೋ ಇಂತಹ ಯಾವುದೇ ಒಂದು ಕೃತಿಯ ಸಮಗ್ರ ಪರಿಶೀಲನೆಯ ಅನಂತರ ನಮ್ಮ ಅಂತರಂಗವನ್ನು ಆವರಿಸುವುದು ಅಲ್ಲಿನ ರಸ ಪ್ರತೀತಿಯಲ್ಲ. ಮಹಾಭಾರತದಲ್ಲಿ ಉತ್ಕರ್ಷ ಹೊಂದುವ ಯಾವ ರಸ ತಾನೆ ಕಡೆಯಲ್ಲಿ ನಮ್ಮಲ್ಲಿ ಸ್ಥಾಯಿತ್ವವನ್ನು ಸ್ಥಾಪಿಸಿ ನಿಲ್ಲುತ್ತದೆ ? ಸಾವಿತ್ರಿ ಕಾವ್ಯವಾಗಲೀ ಹರಿಶ್ಚಂದ್ರ ಕಾವ್ಯವಾಗಲೀ ಅಲ್ಲಿ ನಮ್ಮನ್ನು ಆಕರ್ಷಿಸುವ ರಸ ಯಾವುದು ? ಕರುಣವೆ ? ಬೀಭತ್ಸವೆ ? ಯಾವುದೂ ಅಲ್ಲ. ಸೂಕ್ಷ್ಮ ಪರಿಶೀಲನೆಯಿಂದ ತಿಳಿಯುವ ಅಂಶವೆಂದರೆ, ಇಲ್ಲಿನ ಪರಿಣಾಮ ಪ್ರಾಬಲ್ಯವು ಭರತಸೂತ್ರದ ಯಾವುದೇ ರಸವೂ ಖಂಡಿತ

ಅಲ್ಲ. ಹಾಗಾದರೆ ಇಲ್ಲಿ ನಮ್ಮ ಮನಸ್ಸು ಆಕರ್ಷಿತವಾಗುವುದು ಎಲ್ಲಿ? ಸನ್ನಿವೇಶದ ಪರಿಭಾವನೆಯಲ್ಲಿ ಮನಸ್ಸು ಮಗ್ನವಾಗುವುದಿಲ್ಲವೆ? ಹಾಗಿದ್ದ ಮೇಲೆ ಇದು ಯಾವ ರಸ? ರಸಕ್ಕೂ ಇದಕ್ಕೂ ಯಾವುದೂ ಸಂಬಂಧವಿಲ್ಲವೆಂಟೆ ಎನಿಸುತ್ತದೆ. ಇಲ್ಲಿ ನಮ್ಮ ಮನಸ್ಸು ಆಕರ್ಷಿತವಾಗುವುದೂ ಅದರ ಪರಿಭಾವನೆಯಲ್ಲೇ ಮಗ್ನವಾಗುವುದೂ ತೀರಾ ಸ್ಪಷ್ಟ. ಒಂದು ದೃಷ್ಟಿಯಿಂದ ಇಲ್ಲಿ ಸದ್ಯಃ ನಿರ್ವೃತಿಯೂ ಉಂಟಾಗುತ್ತದೆ ಎನ್ನೋಣ. ಆದರೆ ಇದು ಮಾತ್ರ ಶೃಂಗಾರ ವೀರಾದಿ ರಸಗಳಿಂದ ಉಂಟಾಗುವ ಸದ್ಯಃಪರನಿರ್ವೃತಿಯಾಗಿರುವುದಿಲ್ಲ. ಎರಡರ ವ್ಯತ್ಯಾಸ ಸೂಕ್ಷ್ಮಮತಿಗಳಿಗೆ ಹೊಳೆಯಬಲ್ಲದು. ಇಲ್ಲಿ ನಮ್ಮಲ್ಲಿ ಭಾವೋತ್ಕರ್ಷ ಉಂಟಾಗುವುದೂ ನಿಜವೆ. ಅದಿಲ್ಲದಿದ್ದರೆ ಸಂಭಾವನೆ, ಮಗ್ನತೆ ಎಂಬ ಮಾತುಗಳೂ ದೂರವೇ ಉಳಿಯುತ್ತವೆ. ಆದರೆ ಇಲ್ಲಿ ನಮ್ಮನ್ನಾವರಿಸಿರುವ ಭಾವವು ಮಾತ್ರ ಭರತ ಸೂತ್ರದ ಯಾವುದೇ ಸ್ಥಾಯಿ ಅಥವಾ ಸಂಚಾರಿ ಭಾವಗಳನ್ನು ಹೋಲುವುದಿಲ್ಲ. ಪರವಶತೆಯಲ್ಲಿ ನಾವು ಮುಳುಗಿ ಹೋಗುತ್ತೇವಾದರೂ ಭರತಸೂತ್ರ ಜನ್ಯವಾದ ಯಾವುದೇ ರಸದ ಪರಿಭಾವನೆಯಲ್ಲೂ ನಾವಿರುವಂತೆ ತೋರುವುದಿಲ್ಲ. ಹಾಗಾದರೆ ಇಲ್ಲಿ ನಮ್ಮನ್ನಾವರಿಸುವ ಭಾವವಾವುದು? ಇಲ್ಲಿನ ಪರವಶತೆಯ ಅರ್ಥವೇನು? ಇತ್ಯಾದಿ ಪ್ರಶ್ನೆಗಳಿಗೆ ನಾವು ಕಂಡುಕೊಳ್ಳುವ ಉತ್ತರದಲ್ಲೇ ಕಾವ್ಯ, ಕವಿ, ಋಷಿ, ಮಹತ್ತು ಮುಂತಾದ ಪದಗಳಲ್ಲಿ ಅಡಗಿರುವ ಭಾವ ಸಂಪತ್ತಿನ ಪ್ರಭಾವಲಯವನ್ನು ನಾವು ಸಂದರ್ಶಿಸಬಹುದೆಂದು ತೋರುತ್ತದೆ.

ಲೋಕಸತ್ಯವನ್ನೂ ಲೋಕ ಸತ್ಯಗಳನ್ನೂ ಕುರಿತ ಭಾವ ಸಾಮಗ್ರಿಯ ಪರಿಭಾವನೆಯಲ್ಲಿ ನಮ್ಮ ಮನಸ್ಸು ಮಗ್ನವಾದಾಗ ಭರತಸೂತ್ರಜನ್ಯವಾದ ನವರಸಗಳ ಪ್ರತೀತಿ ಉಂಟಾಗುತ್ತದೆ. ಆದರೆ ಮೇಲಿನ ಸಂದರ್ಭಗಳ ಪರಿಭಾವನೆಯಲ್ಲಿ ತೊಡಗಿದಾಗ ನಮ್ಮಲ್ಲಿ ಉದ್ಬುದ್ಧವಾಗುವುದು ಲೋಕಭಾವಗಳಾಗಲೀ ತತ್ಸಂಬಂಧಿಯಾದ ಶೃಂಗಾರಾದಿ ನವರಸಗಳಾಗಲೀ ಅಲ್ಲ. ಆಗ ನಮ್ಮಲ್ಲಿ ಉತ್ಕರ್ಷ ಹೊಂದುವುದು "ಅಲೋಕಭಾವ". ಆದ್ದರಿಂದಲೇ ಇದರಿಂದ ಪ್ರತೀತವಾಗುವ ಪರವಶತೆಗೂ ಭರತಸೂತ್ರಜನ್ಯವಾದ ರಸಕ್ಕೂ ಯಾವ ಸಂಬಂಧವೂ ಇರುವ ಸಾಧ್ಯತೆಯಿಲ್ಲ. ಈ ಅಲೋಕಭಾವ ಎಂಬುದೇನು? ಅದರ ಸ್ವರೂಪವೇನು? ಇತ್ಯಾದಿ ಪ್ರಶ್ನೆಗಳೇಳುವುದು ಸಹಜವೆ.* ಅಲೋಕಭಾವಕ್ಕೂ ಲೋಕಭಾವಗಳಿಗೂ ಇರುವ ವ್ಯತ್ಯಾಸ

---

* ಇವನ್ನು ಕುರಿತ [illegible] ಪ್ರಕಟವಾಗ ಲಿರುವ 'ಮಹಾಕವಿ ರಾಜಶೇಖರ' ಗ್ರಂಥದಲ್ಲಿ [illegible]

ವನ್ನು ಮುಖ್ಯವಾಗಿ ಅಲ್ಲಿನ ವಿಭಾವದಲ್ಲಿ ಗುರುತಿಸಬಹುದು. ನವರಸಗಳ ಪ್ರತೀತಿಯಲ್ಲಿ ವಿಭಾವವು ಮೂರ್ತ ಸ್ವರೂಪದಲ್ಲಿದ್ದು ಲೋಕಪರವಾಗಿರುತ್ತದೆ. ಎಂದರೆ ರತಿ ಭಾವವೃದ್ಧಿಗೆ ಗಂಡು ಹೆಣ್ಣುಗಳು ಕಾರಣವಾಗಿರುವಂತೆ ಉಳಿದ ಹಾಸ ಕ್ರೋಧಾದಿಗಳಿಗೂ ಲೋಕ ವ್ಯಕ್ತಿಯೋ ವೃತ್ತಾಂತವೋ ಕಾರಣವಾಗಿದ್ದು ಇಲ್ಲಿನ ಸಾಮಗ್ರಿ ನಾಮ ರೂಪಾತ್ಮಕವಾಗಿರುತ್ತದೆ. ಆದರೆ ಹರಿಶ್ಚಂದ್ರ ಕಾವ್ಯದಲ್ಲಾಗಲೀ, ಸಾವಿತ್ರಿಯಲ್ಲಾಗಲೀ ಅಲ್ಲಿನ ನಾಯಕ ಪಾತ್ರಗಳ ಅಂತರಂಗದ ತುಡಿತವನ್ನು ಗಮನಿಸಿದರೆ ತಿಳಿಯುತ್ತದೆ, ಅಲ್ಲಿರುವುದು ಲೋಕ ಪರತೆಯಲ್ಲ ; ಲೋಕೋತ್ತರತೆ ಎಂಬುದು. ದ್ವಂದ್ವಾತ್ಮಕವಾದ ಲೋಕತತ್ತ್ವದ ನಿರಾಕಾರಣ ಅಲ್ಲಿನ ಅಂತಸ್ತತ್ವ. ಏಕೆಂದರೆ ಹರಿಶ್ಚಂದ್ರನು ಸತ್ಯಕ್ಕಾಗಿ ಸೇಂದ್ರಿಯ ಜಗತ್ತಿನ ಸರ್ವಾಕರ್ಷಣೆಗಳನ್ನೂ ಅಥವಾ ಉಪಾಧಿಗಳನ್ನೂ ನಿರಾಕರಿಸುವುದನ್ನು ಕಾಣುತ್ತೇವೆ ಹರಿಶ್ಚಂದ್ರನ ಸತ್ಯ ಮತ್ತು ಸಾವಿತ್ರಿಯ ಪಾತಿವ್ರತ್ಯಗಳು ರತಿ, ಹಾಸ, ಕ್ರೋಧಾದಿಗಳಂತೆ ಮೂರ್ತಭಾವತತ್ವಗಳಿಗೆ ಸಂಬಂಧಿಸಿದುವಲ್ಲ. ಇವು ಅಮೂರ್ತ ತತ್ತ್ವಗಳಾಗಿರುವುದರಿಂದ ಅಲ್ಲಿನ ವಿಭಾವವೂ ಅಮೂರ್ತವಾಗಿರುವುದು ಅನಿವಾರ್ಯವಾಗುತ್ತದೆ. ಆದ್ದರಿಂದ ಸದ್ಯಕ್ಕೆ ಅಲ್ಲಿನ ವಿಭಾವವನ್ನು 'ಅವ್ಯಕ್ತ' ಎಂದು ಹೆಸರಿಸಬಹುದು.

ಅಲೋಕಭಾವದ ಉತ್ಕರ್ಷವು ನಮ್ಮಲ್ಲಿ ಭರತಸೂತ್ರದ ರಸಾನುಭವವನ್ನುಂಟು ಮಾಡುವುದಿಲ್ಲ. ಆದರ ಬದಲು ಅದು ನಮ್ಮನ್ನು ಚಿಂತನಪರರನ್ನಾಗಿ ಮಾಡುತ್ತದೆ. ಹರಿಶ್ಚಂದ್ರ ಕಾವ್ಯದಲ್ಲಾಗಲೀ ಅಥವಾ ಸಾವಿತ್ರಿಯಲ್ಲಾಗಲೀ ರತ್ಯಾದಿ ಲೋಕಭಾವ ಸಮಸ್ತದ ನಿರಾಕರಣವುಂಟಾಗಿ ಸಹೃದಯನು ನಾಯಕ ಪಾತ್ರದೊಡನೆ ಅಲೋಕಭಾವವಶನಾಗಿ ಅವ್ಯಕ್ತವೆನಿಸುವ ಆಕಾಶಕ್ಕೆ ತೆಕ್ಕೆ ಬೀಳುತ್ತಾನೆ. ಆಗ ರತಿ ಹಾಸಾದಿ ಲೋಕಭಾವಗಳ ನಿರಸನದಿಂದ ಭುಗಿಲೆದ್ದ ಅಲೋಕ ಭಾವ ಪುಂಜವು ನಮ್ಮನ್ನು ಚಿಂತನಾದ್ರಿ ಶಿಖರಕ್ಕೇರಿಸುತ್ತದೆ. ಆಗ ನಾವು ಭರತ ಸೂತ್ರದ ರಸಾನುಭವಕ್ಕಿಂತ ಭಿನ್ನವಾದ ಅನುಭೂತಿಯಲ್ಲಿ ಮುಳುಗಿದಂತೆ ಭಾಸವಾಗುತ್ತದೆ. ಇದು ಹಂತ ಹಂತವಾಗಿ ವರ್ಧಿಸಿದಾಗ ನಾವು ಭವ್ಯತೆ ಭೂಮಾನ ಭೂತಿಗಳ ತೆಕ್ಕೆಯಲ್ಲಿ ಹುದುಗಿದಂತಾಗುತ್ತೇವೆ. ಒಂದಲ್ಲ ಒಂದು ರೀತಿಯಿಂದ ಯಾವುದೇ ಕೃತಿಯಲ್ಲಿ ಆವಿರ್ಭವಿಸುವ ಇಂತಹ ಅನುಭೂತಿ ಸಮಷ್ಟಿಯನ್ನೇ 'ದರ್ಶನ' ಎನ್ನುವುದು. ಇದನ್ನು ಮೈಗೂಡಿಸಿಕೊಂಡ ಕೃತಿಯನ್ನೇ ಸತ್ಯವಾದ ಅರ್ಥದಲ್ಲಿ 'ಕಾವ್ಯ' ಎನ್ನುವುದು. ಇದರ ಪರಿಚಯವಿಲ್ಲದವನನ್ನು ಅಥವಾ ಇತರರಿಗೆ ಪರಿಚಯಿಸಲರಿಯದವನನ್ನೇ "ಅನೃಷಿ" 'ಋಷಿಯಲ್ಲದವನು' ಎಂದು ಹೇಳಿದ್ದು. ಅಂತಹ 'ಅನೃಷಿ' ಯಿಂದ ಸತ್ಯವಾದ ಅರ್ಥದಲ್ಲಿ 'ಕಾವ್ಯ ಎನ್ನಿಸಿ ಕೊಳ್ಳಬಲ್ಲ ಕೃತಿರಚನೆ ಸಾಧ್ಯವಿಲ್ಲ. ಇದನ್ನು ಹೇಳುವುದಕ್ಕಾಗಿಯೇ "ನಾನೃಷಿಃ ಕುರುತೇ ಕಾವ್ಯಂ" ಎಂದಿರುವುದು

ಬಹುಶಃ ನಮ್ಮ ದಾರ್ಶನಿಕ ಮಹಾಕವಿಗಳೂ ದರ್ಶನಪಟುಗಳಾಗಿದ್ದ ಕಾವ್ಯ ತತ್ತ್ವ ಜಿಜ್ಞಾಸುಗಳೂ-ಇವರನ್ನು ಆಲಂಕಾರಿಕರೆನ್ನುವುದು ಅಸಮಂಜಸವಾದೀತು. ಕಾವ್ಯದ ಈ ಅಂತರತಮ ರಹಸ್ಯವನ್ನು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞ ಪೂರ್ವಕವಾಗಿಯೂ ಅರಿತಿದ್ದರಿಂದಲೇ "ನಾನೃಷಿಃ ಕುರುತೇ ಕಾವ್ಯಂ" ಎಂತಹ ಉಕ್ತಿಗಳು ಮೂಡಿಬಂದದ್ದು. ಕನ್ನಡದ ಏಕಮೇವಾದ್ವಿತೀಯ ಮಹಾಕವಿ ಕುಮಾರವ್ಯಾಸನಂತೂ ಇದನ್ನು ಎಷ್ಟು ನಿಚ್ಚಳವಾಗಿ ಅರಿತಿದ್ದನೆಂದರೆ ವಿಸ್ಮಯ ವಾಗುತ್ತದೆ. ಕವಿಯ ಸುಪ್ತ ಪ್ರಜ್ಞೆಯಲ್ಲಿ ಅಡಗಿದ್ದ ಈ ರಹಸ್ಯವು ಆತನ ಬಾಯಿಂದ ಬಹುಶಃ ಅನೈಚ್ಛಿಕವಾಗಿ ಆದರೂ ಆದಮ್ಯವಾಗಿ ಎಂಬಂತೆ ನುಗ್ಗಿ ಬರುತ್ತದೆ. ಸ್ಪರ್ಶಗೋಚರವೋ ಎಂಬಂತಿದೆ. "ರಸವು ಸರ್ವಪ್ರಯೋಜನ ಮೌಲೀಭೂತ" ಎಂದು ಶತ ಶತಮಾನಗಳಿಂದ ಡಂಗುರ ಸಾರಿ ರಸಕ್ಕೆ ಅಗ್ರಪೂಜೆಯನ್ನು ಸಲ್ಲಿ ಸುತ್ತಾ ಬಂದಿದ್ದ ಆಲಂಕಾರಿಕರನ್ನು ಅವನು ಮುಟ್ಟಿ ಮೂದಲಿಸಿ, ತಿರಸ್ಕರಿಸಿ ತಳ್ಳಿಬಿಟ್ಟಿರುವುದನ್ನು ಕಾಣಬಹುದು. ಅಪ್ಪಟವಾದ ಆದರ ವಾಚ್ಯತೆಯನ್ನು ಇಲ್ಲಿನಷ್ಟು ಸ್ಫುಟವಾಗಿ ಇನ್ನೆಲ್ಲಿ ತಾನೆ ಗುರುತಿಸಲಾದೀತು ? ನಿಸ್ಸಂದೇಹಕರವಾಗಿ ಅವನು ಸಾರಿ ಹೇಳಿದ ಮಾತನ್ನು ಕೇಳಿ.

ಪದದ ಪ್ರೌಢಿಯು ನವರಸಂಗಳ
ಉದಿತವೆನುವಭಿಧಾನ ಭಾವವ
ಬೆದಕಲಾಗದು ಬಲ್ಲ ಪ್ರೌಢರು ಮೀ ಕಥಾಂತರಕೆ |
ಇದು ವಿಚಾರಿಸೆ ಬರಿಯ ತೊಳಸಿಯ
ಉದಕದಂತಿರೆಯಿಲ್ಲಿ ನೋಳ್ಪುದು
ಪದುಮನಾಭನ ಮಹಿಮೆ ಧರ್ಮ ವಿಚಾರ ಮಾತ್ರವನು ||

ಆಲಂಕಾರಿಕರಿಗೆ ಅಷ್ಟೊಂದು ಅಚ್ಚುಮೆಚ್ಚಿನದಾದ ಪರಮಪೂಜ್ಯವಾದ 'ರಸ' ವನ್ನು ದಾರ್ಶನಿಕ ಕವಿ ಕುಮಾರವ್ಯಾಸ ಎಷ್ಟು ನಿರ್ದಾಕ್ಷಿಣ್ಯವಾಗಿ ಗದ್ದುಗೆ ಯಿಂದ ಕೆಳಕ್ಕೆ ತಳ್ಳಿ ಬಿಟ್ಟಿದ್ದಾನೆ ! ಇಲ್ಲಿನ ಔತಣ ಕೂಟದಲ್ಲಿ ನಾವು ಗಮನಹರಿಸ ಬೇಕಾಗಿರುವುದು ಷಡ್ರಸಗಳ ಬಾಯಿಚಪ್ಪರಣೆಗಲ್ಲ; ಇದು ದೇವಮಂದಿರದ ಪರಮಪೂಜ್ಯವಾದ ತುಳಸಿಯುದಕ. ತುಳಸಿಯ ತೀರ್ಥಕ್ಕೂ ಬಾಯಿ ಚಪ್ಪರ ಣೆಯ ಷಡ್ರಸಗಳಿಗೂ ಇರುವ ತಾರತಮ್ಯ ಇಲ್ಲಿ ನವರಸಗಳಿಗೂ ಅವುಗಳ ಉಬ್ಬರಣೆ ಉತ್ಕರ್ಷಗಳನ್ನು ಮೀರಿ ಚಿಂತನಾಕಾಶಸ್ಥಾಯಿಯಾಗಿ ಬೆಳಗುವ ದಿವ್ಯ ದರ್ಶನ ದೀಧಿತಿಗೂ ಇರುವಂತಿದೆ. ಅದರತ್ತ ಗಮನವಿರಲಿ ಎಂಬುದು ಕವಿಯ-ದೇಶನ.

ಇನ್ನು ಕಾವ್ಯಪ್ರಯೋಜನದ ಫಲವನ್ನು ಹೇಳುವಾಗಲೂ ಅಷ್ಟೆ. ಆಲಂಕಾರಿಕರಿಗೆ ಬೇಕಾದದ್ದು ಮುಖ್ಯವಾಗಿ ಸದ್ಯಃ ಪರನಿರ್ವೃತಿ ಉಳಿದವು ಅವರಿಗೆ ಅಷ್ಟೇನೂ ಮುಖ್ಯವೆಂಬಂತ ಕಾಣುವುದಿಲ್ಲ. ಕೀರ್ತಿಯು ಮಾತೊಂದು ಕಡೆಗಿರಲಿ ಅರ್ಥಕೃತೇ, ವ್ಯವಹಾರವಿದೇ–ಇವೂ ಅವರಿಗೆ ಫಲಗಳೇ. ಇದು ಒಂದು ರೀತಿ ಕುಚೋದ್ಯಕರವಾಗಿರುವಂತಿದೆ. ಕಾವ್ಯವನ್ನು ಓದಿದ್ದರಿಂದ ಹಣ ಸಿಕ್ಕುತ್ತದೆ ಎಂದ್ರೆ ಯಾರಿಗೆ ? ಯಾವಾಗ ಸಿಕ್ಕಿತಂತೆ ! ಎಂದು ಯಾರಾದರೂ ತಮಾಷೆ ಮಾಡಿಯಾರು. ಇನ್ನು ಕಾಂತಾಸಮ್ಮಿತತಯೋಪದೇಶವಾದರೂ ಅಷ್ಟೆ ಒಂದು ರೀತಿಯಿಂದ ವ್ಯವಹಾರವಿದೇ ಎನ್ನುವಂತೆಯೇ ಇದು. ಆಹ್ಲಾದಕರ ಮಾತಿನಲ್ಲಿ ಉಪದೇಶ ಮಾಡುತ್ತದೆ ಎನ್ನುವುದೂ ವ್ಯವಹಾರ ಜ್ಞಾನವನ್ನೇ ಗುರಿಗಟ್ಟುವ ಮಾತು. ಆದರೆ ಮಹಾಕವಿಯ ಕಾವ್ಯಫಲವನ್ನು ಕೇಳಿ.

ವೇದ ಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನ ಫಲ ಕೃ
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮಯಾಗಫಲ |
.......... .... ..........

ಇಷ್ಟರಿಂದಲೇ ತಿಳಿಯದೇ ಕಾವ್ಯದ ಉದ್ದೇಶ, ಕವಿಯ ದೃಷ್ಟಿಗಳೇನು ? ಕಡೆಗೆ ಕಾವ್ಯ ಎಂದರೇನು ? ಅದರಲ್ಲಿರಬೇಕಾದದ್ದೇನು ಎಂಬುದು !

ಕಾವ್ಯದಲ್ಲಿ ಅದರಲ್ಲೂ ಮಹಾಕಾವ್ಯದಲ್ಲಿ ರಸದ ಅವಶ್ಯಕತೆಯನ್ನು ಕುಮಾರವ್ಯಾಸನಂತಹ ದಾರ್ಶನಿಕ ಮಹಾಕವಿ ಅಲ್ಲಗಳೆದಿದ್ದಾನೆಂದು ಇದರಿಂದ ವ್ಯಕ್ತವಾಗುವ ಸಿದ್ಧಾಂತವಲ್ಲ. ರಸವು ಸರ್ವಪ್ರಯೋಜನ ಮೌಲೀಭೂತ ಎಂಬ ಧ್ವನಿಪ್ರಸ್ಥಾನಕಾರನು ಸಾರಿದ ಸಿದ್ಧಾಂತ ಸಮಂಜಸವಲ್ಲ ಎಂಬುದಷ್ಟೇ ಇದರ ತಥ್ಯ. ಹಾಗಾದರೆ ಕಾವ್ಯದಲ್ಲಿ ರಸದ ಸ್ಥಾನವೇನು ಎಂಬ ಪ್ರಶ್ನೆ ಮೂಡುತ್ತದೆ. ಮೇಲಿನ ಪರಿಶೀಲನೆಯಿಂದ ರಸದ ಸ್ಥಾನವನ್ನು ಕೆಳಗಿಳಿಸಿದಂತಾಯಿತೇ ವಿನಾ ನಿರಾಕರಿಸಿದಂತಾಗಲಿಲ್ಲ. ರಸವು ಸರ್ವಪ್ರಯೋಜನ ಮೌಲೀಭೂತ ಎಂದಾಗಲೂ ಅಷ್ಟೆ. ಅದರಿಂದ ಕಾವ್ಯದಲ್ಲಿ ಅಲಂಕಾರ ರೀತಿಗಳಿಗೆ ಸ್ಥಾನವೇ ಇಲ್ಲವೆಂದು ನಿರಾಕರಿಸಿದಂತಾಯಿತೆ ? ರಸೋಚಿತವಾಗಿದ್ದಾಗ ಮಾತ್ರ ಅವು ಕೂಡ ಗ್ರಾಹ್ಯವೇ ಎಂದು ಹೇಳಿ ಅವುಗಳ ಪ್ರಾಮುಖ್ಯವನ್ನು ಸಾರ್ವಭೌಮತ್ವವನ್ನು ನಿರಾಕರಿಸಿದರೂ ಔಚಿತ್ಯದ ಮಿತಿಯಲ್ಲಿ ಅವುಗಳಿಗೆ ಪ್ರಾಮುಖ್ಯವನ್ನೇ ಕೊಡಲಿಲ್ಲವೆ ? ಅದೇ ರೀತಿ ಇಲ್ಲಿಯೂ ರಸದ ಸಾರ್ವಭೌಮಿಕೆಯನ್ನು ಮಾತ್ರ ಕಿತ್ತುಕೊಂಡೆವಾದರೂ ಅದರ ಅಸ್ತಿತ್ವ

ವನ್ನೇ ತಳ್ಳಿಹಾಕಲಿಲ್ಲವೆಂಬುದು ಗಮನಾರ್ಹವಾದ ಅಂಶ. ಕಾವ್ಯದಲ್ಲಿ ವಿಶೇಷ ವಾಗಿ ಮಹಾ ಕಾವ್ಯದಲ್ಲಿ ರಸಕ್ಕಿಂತಲೂ ಉತ್ತಮೋತ್ತಮವಾದ ನೆಲೆ ಅದರಲ್ಲಿ ಅಡಕವಾಗಿರುವ ಚಿಂತನಾಂಶ ; ದರ್ಶನಾಂಶಗಳಿಗೆ ಸಂಬಂಧಿಸಿದ್ದು. ರಸದ ಸ್ಥಾನವು ಎಷ್ಟಾದರೂ ಇವುಗಳಿಗೆ ಅಧೀನವಾಗಿರುವಂಥದು. ವಿವಿಧಾಲಂಕಾರ ಗಳಿಲ್ಲದೆಯೂ, ರೀತಿ ಸುಭಗತೆ ಮನೋಹರತೆಗಳಿಲ್ಲದೆಯೂ ರಸಸ್ಯಂದಿಯಾ ಗಿರುವ ವಾಕ್ಯಮಾಲೆಯನ್ನು ಕಾವ್ಯ ಎಂದು ಧ್ವನಿ ಪ್ರಸ್ಥಾನವು ಘೋಷಿಸಿದಂತೆ ರಸದ ಸಾರ್ವಭೌಮಿಕತೆಯನ್ನು ಅಲ್ಲಗಳೆಯುವಾಗ ರಸವಿಲ್ಲದೆಯೂ ಕಾವ್ಯವು ಯಶಸ್ವಿ ಎನಿಸಬಲ್ಲದು ಎಂದು ಹೇಳಬೇಕಾಗುತ್ತದೆ. ಆದರೂ ಅಲಂಕಾರಗಳನ್ನಾ ಗಲಿ, ರೀತಿಸುಭಗತೆಯನ್ನಾಗಲೀ ನಿರಾಕರಿಸದೆ ಅವುಗಳನ್ನೊಳಗೊಂಡೇ ಪರಿಪೂರ್ಣತೆ ಯನ್ನು ಚಿಂತನಾಂಶದರ್ಶನಾಂಶಗಳಿಗೂ ರಸೋತ್ಕರ್ಷವನ್ನು ಒಳಗೊಂಡೇ ಸಂಪೂ ರ್ಣತೆಯನ್ನು ಪಡೆದು ಶೋಭಿಸುವುದು ಅವುಗಳ ಸಾರ್ವಭೌಮಿಕೆಗೆ ದೂಷಣ ವಾಗುವುದಿಲ್ಲ ; ಅದರ ಬದಲು ಭೂಷಣವೇ ಆಗುತ್ತದೆ. ರಾಜನು ಸರ್ವಶ್ರೇಷ್ಠ ಎಂದು ಹೇಳಿದ್ದರಿಂದ ಮಂತ್ರಿಗಳ, ಸೇನಾಪತಿಗಳ, ಕಡೆಗೆ ಪರಿವಾರ ಪಸಾಯಿತರ ಆಗತ್ಯವೇ ಅವನಿಗಿಲ್ಲ ಎಂದಂತಾಗುತ್ತದೆಯೇ ಅವರನ್ನೆಲ್ಲ ನಿರಾಕರಿಸುವುದರಲ್ಲಿ ರಾಜನ ಶ್ರೇಷ್ಠತೆ ಸ್ಥಾಪಿತವಾಗುವುದು ; ಅವರೆಲ್ಲರನ್ನೂ ಕೂಡಿಕೊಂಡೇ ಅವರೆಲ್ಲ ರನ್ನೂ ಮೀರಿದ ಸ್ಥಾನದಲ್ಲಿ ನೆಲೆಗೊಳ್ಳುವುದರಲ್ಲಿ ಆತನ ಶ್ರೇಷ್ಠತೆ ಎದ್ದು ಕಾಣುವುದು.

ಅಲಂಕಾರ, ರೀತಿ, ರಸ, ಧ್ವನಿಗಳನ್ನು ಕಾವ್ಯ ಶರೀರದ ರಕ್ತಮಾಂಸ ಸಂಬಂಧಿ ಯಾದ ಚೆಲುವಿಕೆಗೂ, ಸೌಂದರ್ಯಕ್ಕೂ ಹೋಲಿಸಬಹುದಾದರೆ ಚಿಂತನಾಂಶವನ್ನು ಮಿದುಳು ಬಳ್ಳಿಗೂ ಅಲ್ಲಿಂದ ಹೊರಟು ಶರೀರ ಸಮಸ್ತವನ್ನೂ ವ್ಯಾಪಿಸಿದ ಜ್ಞಾನ ಕ್ರಿಯಾವಾಹಿನಿ ನರಮಂಡಲಕ್ಕೂ ಹೋಲಿಸಬಹುದು. ಆಗ ದರ್ಶನಾಂಶವು ವ್ಯಕ್ತಿಯ ಆತ್ಮತೇಜಸ್ಸಿನ ಸ್ಥಾನವನ್ನಲಂಕರಿಸುತ್ತದೆ. ವ್ಯಕ್ತಿ ಸುಂದರಾಂಗ ನಾಗಿಯೂ ದಷ್ಟಪುಷ್ಟನಾಗಿಯೂ ಇರಬಹುದು. ಮುಖದ ಆಕಾರ, ಮೈಬಣ್ಣ, ಅಂಗಾಂಗ ಸೌಷ್ಠವಗಳು ಅತ್ಯಂತ ಆಕರ್ಷಕವಾಗಿರಬಹುದು ಆದರೆ ಆಲೋಚನೆ, ಬುದ್ಧಿ, ಚಾತುರ್ಯಗಳಾಗಲೀ ಮೇಧಾಶಕ್ತಿಯಾಗಲೀ ಆತನಿಗಿಲ್ಲದೆ ಹೋಗಿರುವ ಸಾಧ್ಯತೆಯುಂಟು ಅಂತಹ ವ್ಯಕ್ತಿಗಳಿಗೇನೂ ಬರಗಾಲವಿಲ್ಲ ಎಷ್ಟೋ ವೇಳೆ ನೋಡಲು ಅಂದವಾಗಿದ್ದು ಚತುರತೆ ಮೇಧಾಶಕ್ತಿಗಳಿಲ್ಲದ ಅಂತಹ ವ್ಯಕ್ತಿಗಳನ್ನು ಮುತ್ತುಗದ ಹೂವು, ಬಣ್ಣ ಮಾತ್ರ ಭರಾಟೆಯಾಗಿದೆ ಅಷ್ಟೇ, ವಾಸನೆ ಮಾತ್ರ ಏನೇನೂ ಇಲ್ಲ ಎಂದು ಹೂದಲಿಸುವುದುಂಟು ಇಂತಹ ವ್ಯಕ್ತಿಗಳಲ್ಲಿ ರಕ್ತಮಾಂಸ ಗಳೂ ಅಂಗ ಸೌಷ್ಠವವೂ ಅಷ್ಟು ಆಕರ್ಷಕವಾಗಿ ವೃದ್ಧಿ ಹೊಂದಿವೆ ಬರಿ

ಮೆದುಳು ಬಳ್ಳಿಯೂ, ಮೆದುಳಿನ ಸೂಕ್ಷ್ಮ ಸ್ತರಗಳೂ ಅವುಗಳ ಬೆಳವಣಿಗೆಯೂ ಹೇಳಿಕೊಳ್ಳುವಂತಿರುವುದಿಲ್ಲವೆನ್ನಬೇಕಾಗುತ್ತದೆ. ರಸಭಾವ ಸಮೃದ್ಧಿಯಿರುವ ಒಂದು ಕಾವ್ಯದಲ್ಲಿ ಚಿಂತನಾಂಶಕ್ಕೆ ಕೊರತೆ ಕಂಡುಬಂದಲ್ಲಿ ಅದನ್ನು ಇಂತಹ ವ್ಯಕ್ತಿಗೆ ಹೋಲಿಸಬೇಕಾಗುತ್ತದೆ ಮತ್ತೆ ಕೆಲವು ವೇಳೆ ರಕ್ತಮಾಂಸಾದಿ ಅಂಗ ಸೌಷ್ಠವ, ಆಕಾರ, ಗಾತ್ರ, ಮೈಬಣ್ಣಗಳು ಅಷ್ಟೇನೂ ಆಕರ್ಷಕವಲ್ಲವೆನಿಸಿದರೂ ಬುದ್ಧಿಮತ್ತೆ ಮೇಧಾಶಕ್ತಿಗಳ ದೃಷ್ಟಿಯಿಂದ ವ್ಯಕ್ತಿ ಸರ್ ಎಂ. ವಿಶ್ವೇಶ್ವರಯ್ಯನವರಂತೆ ಲೋಕವಂದ್ಯನಾಗಿರಬಹುದು. ಅಂತಹ ವ್ಯಕ್ತಿಯಲ್ಲಿ ರಕ್ತಮಾಂಸಾದಿ ಅಂಗ ಸೌಷ್ಠವ, ಆಕಾರ, ಗಾತ್ರ, ಮೈಬಣ್ಣಗಳಿಗಿಂತ ಬೇರೆಯಾಗಿರುವ ಮೆದುಳು ಮತ್ತು ತತ್ಸಂಬಂಧಿ ನರಮಂಡಲವು ರಚನೆಯಲ್ಲಿ ಅಭೂತಪೂರ್ವವಾಗಿ ವೃದ್ಧಿ ಹೊಂದಿರುತ್ತದೆ. ಆ ಕಾರಣದಿಂದಲೇ ಅವರಲ್ಲಿ ಅಷ್ಟು ಅಪೂರ್ವವಾದ ಮೇಧಾಶಕ್ತಿ ಪ್ರಕಾಶಿಸುತ್ತದೆ. ಒಂದು ಕಾವ್ಯದಲ್ಲಿ ರಸಭಾವಗಳ ಉತ್ಕರ್ಷಕ್ಕಿಂತ ಚಿಂತನಾಂಶವು ಉತ್ತರೋತ್ತರವಾಗಿ ವರ್ಧಿಸಿದ್ದರೆ ಅಂತಹ ಕಾವ್ಯವನ್ನು ಸರ್ ಎಂ. ವಿ. ಯವರಂತಹ ವಿರಳರ ವ್ಯಕ್ತಿತ್ವಕ್ಕೆ ಹೋಲಿಸಬಹುದಾಗುತ್ತದೆ ಉದಾಹರಣೆಗೆ ಕನ್ನಡ ಕವಿ ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ಈ ಜಾತಿಗೆ ಸೇರಿಸಬಹುದು. ಚಿಂತನಾಂಶದ ಅತ್ಯಲ್ಪ ಸೆಳಕುಗಳನ್ನೊಳಗೊಂಡಿದ್ದು ರಸದ ಪರಾಕಾಷ್ಠೆಯನು. ಮೆರೆಯುವ ಕೃತಿಗಳಿಗೆ ಶ್ರೇಷ್ಠ ಉದಾಹರಣೆಯಾಗಿ ಬಾಣನ ಕಾದಂಬರಿಯನ್ನು ಹೆಸರಿಸಬಹುದು. ಇಲ್ಲಿ ರಸ ಭಾವಗಳೂ ಕಲ್ಪನಾಂಶವೂ ಮುಗಿಲು ಮುಟ್ಟಿದ್ದರೂ ಚಿಂತನಾಂಶದ ಅತ್ಯಲ್ಪ ಸೆಳಕನ್ನು ಮಾತ್ರ ಇಲ್ಲಿ ಕಾಣಬಹುದು. ಆದ್ದರಿಂದಲೇ ಈ ಕೃತಿ ಮುಗಿಲ ಮಲ್ಲಿಗೆಯಂತೆ ಮನೋಹರವಾಗಿದ್ದು ನೆಲಕ್ಕೆ ಮುಟ್ಟದೆ ಅಂತರಿಕ್ಷದಲ್ಲೇ ತೇಲುವ ಸ್ವಪ್ನ ಲೋಕ ಮಾತ್ರವಾಗಿದೆ. ಬಾಣಕವಿ ಜಾನಪದ ಕಥೆಯೊಂದನ್ನು ಆಧಾರ ಸಾಮಗ್ರಿಯನ್ನಾಗಿ ಬಳಸಿದ್ದಾನೆಂಬುದು ಅದರ ಸತ್ಯದೂರತೆಯ ಮೊದಲ ಸುಳಿವಾಗಿ ತೋರಿದರೆ ಆಶ್ಚರ್ಯವಿಲ್ಲ. ಹರಿಶ್ಚಂದ್ರನ ಜೀವನ ದೃಷ್ಟಿ ವಾಸ್ತವ ಜೀವನಕ್ಕೆ ಎಷ್ಟು ಹತ್ತಿರದ ಸಂಬಂಧವನ್ನುಳ್ಳದಾಗಿದೆ. ಚಿಂತನಾಂಶದ ಉದ್ದೀಪನ ಕಾರಣವಾಗಿದೆ ಎಂಬುದಕ್ಕೆ ಮಹಾತ್ಮ ಗಾಂಧಿಯಂತಹ ವ್ಯಕ್ತಿಗಳ ಮೇಲೆ ಅದು ಬೀರಿದ ಪರಿಣಾಮವೇ ಸಾಕ್ಷಿ. ಈ ದೃಷ್ಟಿಯಿಂದ ಕೇವಲ ಕಟ್ಟುಕತೆಯಾದ ಕಾದಂಬರಿ ಕಾವ್ಯವು ಅದರ ಮತ್ತೊಂದು ಅತಿರೇಕ ಮಾತ್ರ. ಆದ್ದರಿಂದಲೇ ಅವನ್ನು ಸುಂದರವಾದ ಗಗನ ಕುಸುಮ ಮಾತ್ರ ಎನ್ನುವುದು ಅರ್ಥಪೂರ್ಣವಾಗುತ್ತದೆ.

ಹಾಗಾದರೆ ಕಾದಂಬರಿ ಕಾವ್ಯದಲ್ಲಿ ಚಿಂತನಾಂಶವು ಸೊನ್ನೆಯಾಗಿದೆಯೇ ಎಂದರೆ ಹೌದು ಹಾಗೂ ಅಲ್ಲವೆನ್ನಬೇಕಾಗುತ್ತದೆ. ಯಾವನೇ ಸುಂದರ ವ್ಯಕ್ತಿ

ಎಷ್ಟೇ ದಪ್ಪನಾಗಿದ್ದರೂ ಆತನ ದೇಹದಲ್ಲಿ ನರಮಂಡಲವೂ ಮೆದುಳು ಬಳ್ಳಿಯೂ ಸೊನ್ನೆಯಾಗಿರಲು ಸಾಧ್ಯವೆ? ಅದು ಲೆಕ್ಕಕ್ಕೆ ಬಾರದಷ್ಟು ಅಪ್ರಬುದ್ಧವಾಗಿರ ಬಲ್ಲದು ಎಂಬುದಷ್ಟೇ ಇಲ್ಲಿನ ಪಥ್ಯ. ಅದೇ ರೀತಿ ಚಿಂತನಾಂಶದ ಉತ್ತುಂಗ ಶಿಖರ ವಾಗಿರುವ ಕೃತಿಯಲ್ಲಾದರೂ ರಸಭಾವ ಗುಣಾಲಂಕಾರಗಳೂ ಸೊನ್ನೆಯಾಗಿರಲು ಸಾಧ್ಯವಲ್ಲ. ಮೆದುಳು ಬಳ್ಳಿಯು ಆಶ್ಚರ್ಯಕರ ವಿಕಾಸ ವಿನ್ಯಾಸಗಳನ್ನು ಪಡೆದ ವ್ಯಕ್ತಿಯೇ ಆದರೂ ರಕ್ತಮಾಂಸ ರೂಪಾತ್ಮಕತೆಯಲ್ಲಿ ಸೊನ್ನೆ ಎನಿಸುವುದೆಂತು? ಇವು ಒಂದನ್ನೊಂದು ಸಂಪೂರ್ಣವಾಗಿ ಬಿಟ್ಟಿರಲಾರವಾದರೂ ಎರಡರಲ್ಲಿ ಒಂದು ಪರಾಕಾಷ್ಠೆಗೇರಿ ಇನ್ನೊಂದು ನಾಮಮಾತ್ರವಾಗಿರಬಲ್ಲದು ಎಂಬುದು ಸ್ಪಷ್ಟ. ಹರಿಶ್ಚಂದ್ರ ಕಾವ್ಯದಲ್ಲಿ ಚಿಂತನಾಂಶವು ಪರಾಕಾಷ್ಠೆಯನ್ನು ತಲುಪಿದ್ದರೂ ಅದಕ್ಕೆ ಆದ್ಯಂತವಾಗಿ ಲೇಪಿತವಾಗಿರುವ ಕರುಣ ರಸದ ಲೇಪನವನ್ನು ಕಡೆಗಣಿಸಲಾರೆವು. ಅಲ್ಲದೆ ಇಲ್ಲಿ ಪ್ರತ್ಯೇಕವಾಗಿರುವ ಕರುಣ ರಸವು ಕೇವಲ ಹೊರವಲಯದ ಲೇಪನ ಮಾತ್ರ ಎಂಬುದೂ ಗಮನಾರ್ಹವಾದದ್ದೆ. ಏಕೆಂದರೆ ಕರುಣರಸ ಪ್ರತಿಪಾದನೆ ಅಲ್ಲಿನ ಮುಖ್ಯ ಗುರಿಯಲ್ಲ ಎಂಬುದು ಹಗಲಿನಷ್ಟು ಸತ್ಯ. ಹರಿಶ್ಚಂದ್ರನ ವರ್ತನೆ ಯಲ್ಲಿ ಮುಖ್ಯವಾಗಿ ನಮ್ಮ ಗಮನವನ್ನು ಸೆಳೆಯುವುದು ಸತ್ಯಪಾಲನೆಯ ಬಗ್ಗೆ ಆತನಿಗಿರುವ ನಿಷ್ಠೆ, ಕೆಚ್ಚು ಮತ್ತು ಛಲ. ತತ್ಪರಿಣಾಮವಾಗಿ ಬರುವ ಕಷ್ಟ ಕೋಟಲೆಗಳೂ ದುರವಸ್ಥೆಗಳೂ ಎರಡನೆಯ ಸ್ಥಾನದಲ್ಲಿ ನಿಲ್ಲುತ್ತವೆ. ಹರಿಶ್ಚಂದ್ರನಲ್ಲಿ ಕಂಡು ಬರುವ ಶೋಕಭಾವವು ಕೇವಲ ಸಂಚಾರಿಯೇ ಹೊರತು ಸ್ಥಾಯಿಯಲ್ಲ ಎಂಬುದು ಸ್ಪಷ್ಟ. ಚಿಂತನಾಂಶದ ಪ್ರಕಾಶಕ್ಕೆ ಅದು ಕೇವಲ ಪ್ರೇರಕ ಇಂಧನ ಮಾತ್ರವೇ ಹೊರತು ತಾನೇ ಪ್ರಮುಖ ಗುರಿ ಎನಿಸುವುದಿಲ್ಲ. ಆದ್ದರಿಂದ ಇಲ್ಲಿ ಕಂಡು ಬರುವ ಕರುಣ ರಸವು ಕೇವಲ ಹೊರವಲಯದ ಲೇಪನ ಮಾತ್ರವೇ ಹೊರತು ಅದರ ಅಂತಸ್ತತ್ತ್ವವಾಗಲೀ ಅಲ್ಲ.

*ಸಾವಿತ್ರಿಯಲ್ಲಿ ಈ ಲೇಪನ ಕೂಡ ಇಲ್ಲವೇ ಇಲ್ಲ ಎಂಬಂತಿದೆ. ಇಲ್ಲಿ ಮದುವೆ ಎಂಬ ಲೌಕಿಕ ಘಟನೆ ಮಾತ್ರವೇ ಶೃಂಗಾರ ರಸದ ಹೆಸರನ್ನು ಹೇಳಿ ತತ್‌ಕ್ಷಣವೇ ಮಾಯವಾಗಿ ಬಿಡುತ್ತದೆ. ಏಕೆಂದರೆ ಮರುಕ್ಷಣದಲ್ಲೇ ಬರುತ್ತದೆ ವರ್ಷಾವಧಿಯ ಸಾವಿನ ಸುದ್ದಿ. ಇನ್ನು ಶೃಂಗಾರವು ಗಡೀಪಾರಾಂದತಲ್ಲವೆ? ಹೋಗಲಿ. ಕರುಣ ರಸ ಕಾಲಿಡಬಹುದೆನ್ನೋಣವೆ? ಇನ್ನೂ ಆಗಿಲ್ಲದ,

* ಇಲ್ಲಿ ಸಾವಿತ್ರಿ ಎಂದರೆ ಅರವಿಂದರ ದಾರ್ಶನಿಕ ಕಾವ್ಯವೇ ಎಂದಲ್ಲ. ಸಾವಿತ್ರಿಯ ಕಥೆಯನ್ನು ಕುರಿತ ಯಾವುದೇ ಕೃತಿ ಎಂದರ್ಥ.

ವಯಸ್ಸಿನ ಅವಸ್ಥೆಯಲ್ಲೇ ಇರುವ ಮದುವೆಯಾದ್ದರಿಂದ ಕರುಣರಸವು ಕನಿಷ್ಠತೆಯ ಸ್ಥಿತಿಯನ್ನೂ ತಲುಪಲಾರದೆ ಹಿಂಗುತ್ತದೆ. ಇಂತಹ ದಿನ ಸಾವು ನಿಶ್ಚಿತ ಎಂಬುದು ಖಚಿತವಾಗಿ ತಿಳಿದರೂ ನಿಲ್ಲಬೇಕಾದ ಮದುವೆ ನಿಲ್ಲದೆ ನಡೆದೇ ಹೋಗುತ್ತದೆ. ಇಲ್ಲಿ ಕುತೂಹಲವೊಂದನ್ನು ಬಿಟ್ಟರೆ ಯಾವ ರಸ ಯಾವ ಭಾವಗಳಿವೆ ? ಯಾವ ರಸದಿಂದ ನಾವು ಆಕರ್ಷಿತರಾಗುತ್ತೇವೆ ? ವಿಸ್ಮಯ ಭಾವದಿಂದ ಅದ್ಭುತ ರಸದ ಪ್ರತೀತಿಯನ್ನಾದರೂ ಇಲ್ಲಿ ಹೆಕ್ಕಬಹುದೆ ? ಎಂದರೆ ಇಲ್ಲಿ ಅದೂ ಸಾಧ್ಯವಿಲ್ಲ. ಏಕೆಂದರೆ ಶನಿಕ್ರಿಯೆಯೇ ಆಗಲಿ, ಯಾರೇ ಆಗಲಿ ಇಂತಹ ಸಂದರ್ಭದಲ್ಲಿ ಹೇಗೆ ತಾನೆ ಗೆಲ್ಲಬಲ್ಲರೆಂಬುದು ನಾವು ಕಲ್ಪನೆಯಲ್ಲೂ ಕಾಣಲಾಗದ ಅಂಶವಾದ್ದರಿಂದ ಅದ್ಭುತ ರಸದ ಪ್ರತೀತಿಗೂ ಇಲ್ಲಿ ಅವಕಾಶವಿಲ್ಲ. ಇನ್ನು ನಿರ್ವೇದದಿಂದ ಶಾಂತ ರಸವನ್ನು ಹೆಕ್ಕಬಹುದೆ ಎಂದರೆ ಅದೂ ಸಾಧ್ಯವಿಲ್ಲ. ಮೃತ್ಯುವಿಗೆ ಎಂದೂ ಎಷ್ಟಕ್ಕೂ ಅಂಜದ ಆಕೆಯ ಆತ್ಮವಿಶ್ವಾಸವು ಭಯ ನಿರ್ವೇದಗಳೆರಡನ್ನೂ ತತ್‌ಕ್ಷಣವೇ ತಳ್ಳಿ ಹಾಕಿ ಕೇವಲ ಕುತೂಹಲವನ್ನು ಮಾತ್ರ ಉಳಿಸಿಕೊಳ್ಳುತ್ತದೆ. ಆದ್ದರಿಂದ ಇಲ್ಲಿ ಭಯಾನಕವಾಗಲೀ ಶಾಂತವಾಗಲೀ ನಾಮಮಾತ್ರವಾಗಿಯೂ ತೋರಲಾರದೆ ಶೃಂಗಾರ ರಸದಂತೆಯೇ ಹೆಸರು ಹೇಳುವ ಮುನ್ನವೇ ಪಲಾಯನ ಮಾಡುತ್ತವೆ. ಹೀಗಾಗಿ ಇಲ್ಲಿ ಉಳಿದದ್ದೊಂದೇ ಅದು ಅವ್ಯಕ್ತ ಶಕ್ತಿಯನ್ನು ವಿಭಾವವಾಗಿ ಪಡೆದು ಅದು ಕಾಲನ್ನೆದುರಿಸಿ ಅದರಲ್ಲೇ ಕರಗಿ ಅವ್ಯಕ್ತತೆಯಲ್ಲೇ ಐಕ್ಯವಾಗಲೆಳಸುವ ಶೋಕಾಂಶದ ಅಲೌಕಿಕ ರಸಧಾರೆ. ಇದು ನಮ್ಮನ್ನು ಸದ್ಯಃಪರ ನಿರ್ವೃತಿ ಮಾರ್ಗ ದಿವ್ಯ ಪರವಶತೆಯಲ್ಲಿ ಮುಳುಗಿಸುತ್ತದೆ. ಯಾವನೂ ಭರತ ಸೂತ್ರದ ಮೂರ್ತಭಾವಗಳಿಂದೊಗೆದ ನವರಸಧಾರೆಯಲ್ಲಿ "ವಿಭಾವಾನುಭಾವವ್ಯಭಿಚಾರಿ ಸಂಯೋಗಾತ್ ನಿಷ್ಪತ್ತಿ"ಯಾಗುವ ರಸವು ಲೌಕಿಕವೆನಿಸುವ ಮೂರ್ತಭಾವಗಳಿಂದ ಜನ್ಯವಾದ ಅನುಭವ ವಿಶೇಷವಾದರೆ ಚಿಂತನಾಂಶದಲ್ಲಿ ಮುಳುಗಿ ಸದ್ಯಃಪರ ನಿರ್ವೃತಿಯನ್ನೀಯುವ ನಮ್ಮಲ್ಲಿ ಉಂಟಾಗುವ ಅನುಭೂತಿ ಸಾಮ್ಯವು ಅವ್ಯಕ್ತದ ಆವಾಹನೆಯಿಂದೊಗೆದ ಅಲೌಕಿಕ ಭಾವದಿಂದ ಉದ್ಭವಿಸಿದ್ದಾಗಿರುತ್ತದೆ. ಇಲ್ಲಿ ಭಾವವು ಮೂರ್ತವೂ ಸುಸ್ಪಷ್ಟ, ಗ್ರಾಹ್ಯವೂ ಅಲ್ಲವೆಂಬುದು ಮತ್ತೆ ಮತ್ತೆ ಮನಗಾಣಬೇಕಾದ ಅಂಶ. [illegible] ಸೃಷ್ಟಿ ಕಾವ್ಯದ ರಸಾವೇಶ, ಭಾವಾವೇಶಗಳಿಗೂ ಭಗವದ್ಭಕ್ತನ ಭಾವೋನ್ಮಾದಕ್ಕೂ ಹೋಲಿಸಿ ನೋಡಿ ಇದರ ಅಮೂರ್ತತೆಯನ್ನು, ಅದರ ವೇಗೋತ್ಕರ್ಷ ಸ್ವರೂಪದ [illegible] ಪರಿಚಯವನ್ನು ಪಡೆಯಬಹುದು. ಶೃಂಗಾರಾದಿ ಲೌಕಿಕ ಭಾವಗಳು ಭಯಂಕರ ರೂಪಿಗಳಾದ್ದರಿಂದ ಅವು ಉಪಶಮನ ಹೊಂದುವುದರಿಂದ 18 ರೂಪವನ್ನು ಪಡೆದು ಅನುಭವಗಮ್ಯವಾಗುತ್ತವೆ. ಆದರೆ ಇಲ್ಲಿನ ಭಾವವು ಅಲೌಕಿಕವೂ ಅಮೂರ್ತವೂ ಆಗಿರುವುದರಿಂದಲೇ ಅದಕ್ಕೆ ಉಪಶಮನದ ಆವಶ್ಯಕತೆಯೂ ಇಲ್ಲ. ಉದ್ಭವಾವಸ್ಥೆಯಲ್ಲೇ ಅದು ರಸರೂಪ

ವನ್ನು ಪಡೆಯುದೆಯೇ ಅನುಭವ ಗಮ್ಯವಾಗಬಲ್ಲದು ಅದನ್ನು ಇಲ್ಲಿ ಭಾವವೇ ರಸವೆನಿಸಿಕೊಳ್ಳುತ್ತದೆ. "ರಸೋ ವೈ ಸಃ" ಎನಿಸಿಕೊಳ್ಳುವ ಭಗವಂತನೂ ತಾನು ತನ್ನನ್ನು ಭಾವಸ್ವರೂಪಿ ಎಂದು ಹೇಳುವುದನ್ನು ಇಲ್ಲಿ ಗಮನಿಸಬಹುದು.

"ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ
ಪರಂ ಭಾವಮಜಾನಂತೋ ಮಮಾವ್ಯಯಮನುತ್ತಮಂ"

"ಅವ್ಯಕ್ತನಾದ ತನ್ನನ್ನು ಅಜ್ಞಾನಿಗಳು ವ್ಯಕ್ತ ಎಂದು ತಿಳಿಯುತ್ತಾರೆ. ಆದರೆ ತಾನು ಪರಾಭಾವ ಸ್ವರೂಪಿ ಎಂಬುದನ್ನು ಅವರು ಅರಿಯರು" ಎಂದದ್ದನ್ನು ಗಮನಿಸಿದರೆ ಇಲ್ಲಿ ರಸವೂ ಭಾವವೂ ಒಂದೇ ಆಗಿರಲು ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ದೊರೆತಂತಾಗುತ್ತದೆ. ಸಂಸ್ಕೃತ ಕಾವ್ಯದ ಪ್ರಧಾನೋದ್ದೇಶ ರಸ ನಿರೂಪಣೆಯೂ ಅಲ್ಲ, ರಸಾಸ್ವಾದನೆಯೂ ಅಲ್ಲ ಎಂಬುದು ಸರ್ವವಿದಿತ. ಆದರೂ ಇಲ್ಲಿ ನಮ್ಮನ್ನು ಪರವಶರನ್ನಾಗಿ ಮಾಡುವ ತತ್ತ್ವ ಯಾವುದೆಂಬ ಕುತೂಹಲಕಾರಿ ಪ್ರಶ್ನೆಗೆ ಕೃತಿಯಲ್ಲಿ ಆದ್ಯಂತವಾಗಿ ವ್ಯಾಪಿಸಿರುವ ಚಿಂತನಾಂಶ ಎಂದು ಉತ್ತರಿಸಬಹುದು. ಅಮೂರ್ತ ತತ್ತ್ವವಾದ ಸತ್ಯದ ಬಗೆಗಿನ ನಿಷ್ಠೆಯನ್ನು ಪರೀಕ್ಷಿಸುವ ಸಲುವಾಗಿ ಒಡ್ಡಲ್ಪಡುವ ವಿವಿಧ ವ್ಯೂಹಗಳಲ್ಲಿ ಸತ್ಯನಿಷ್ಠೆ ಹೇಗೆ ಯಶಸ್ವಿಯಾಗುತ್ತದೆಂಬುದು ಇಲ್ಲಿ ಚಿಂತನಾಂಶದ ವಸ್ತುವಾಗುತ್ತದೆ. ಇದು ಸತ್ಯವನ್ನೇ ದೇವರೆಂದು ನಂಬಿ ಅದರಲ್ಲಿರುವ ಅಚಲ ನಿಷ್ಠೆಯನ್ನು ಕುರಿತ ವಿಚಾರ ಸರಣಿಯಾಗಿದ್ದು ಇಲ್ಲಿನ ತತ್ತ್ವವು ಲೋಕೋತ್ತರವೆನಿಸುವ ಆಧ್ಯಾತ್ಮಿಕ ಭೂಮಿಕೆಯನ್ನವಲಂಬಿಸುತ್ತದೆ.

ಆದರೆ ಚಿಂತನಾಂಶವು ಆಧ್ಯಾತ್ಮಿಕ ತತ್ತ್ವಗಳನ್ನು ವ್ಯಕ್ತಿಗಳನ್ನು ಮಾತ್ರವೇ ಅವಲಂಬಿಸಿ ಸೃಷ್ಟಿಯಾಗುತ್ತದೆಂದು ಹೇಳುವಂತಿಲ್ಲ. [illegible] ವ್ಯಕ್ತಿತ್ವಕ್ಕೆ [illegible] ಲೌಕಿಕತೆಗೆ ಬದ್ಧ [illegible] ಕುತೂಹಲಗಳಿಲ್ಲದ ವ್ಯಕ್ತಿಗಳ ಮತ್ತು ಘಟನೆಗಳ ಬಗ್ಗೆ ವಿಚಾರ ಮಂಡಿಸುವಾಗಲೂ ಚಿಂತನಾಂಶವು [illegible] ಬಹುದು. ಆದರೂ ಲೋಕಸಹಜ [illegible] ಭಾವ [illegible] ಪ್ರತೀತಿಯೂ [illegible] ಹೆಚ್ಚಿದಂತೆಲ್ಲ ಚಿಂತನಾಂಶ ಪ್ರಭಾವ [illegible] ವನ್ನು ಕಾಣಬಹುದು. [illegible] ಪ್ರತೀತವಾಗುವ ಪ್ರಧಾನ ರಸ ಯಾವುದು? ಹರಿಶ್ಚಂದ್ರ [illegible] ತತ್ತ್ವವನ್ನು ಪರಿಶೀಲಿಸಿದರೆ ಇಲ್ಲಿ ರಸದ [illegible] ವಿಶಿಷ್ಟವಾದ ಚಿಂತನಾಂಶ ಪ್ರಭಾವವನ್ನು ಕಾಣಬಹುದು. ಹರಿಶ್ಚಂದ್ರ [illegible]

ತ್ತೇವೆ. ಆದರೆ ಅಲ್ಲಿ ಯಾವ ರಸಕ್ಕೆ ತಾನೆ ಪ್ರಾಧಾನ್ಯವಿದೆ ? ಎಲ್ಲ ರಸಗಳೂ ಲೋಕೋತ್ತರ ಶಕ್ತಿಯಾದ ವಿಧಿಯ ಅಣಕಕ್ಕೆ ತಮ್ಮ ಅಧೀನತೆಯನ್ನೊಪ್ಪಿಕೊಂಡು ಸ್ಥಾಯಿತ್ವವನ್ನು ನೀಗಿ ಸಂಚಾರಿಗಳಾಗಿ ನಿಲ್ಲುತ್ತವೆ ಉದಾಹರಣೆಗೆ ಸಮಾಧಿ ತೋಡುವ ದೃಶ್ಯದಲ್ಲಿ ಕಂಡುಬರುವ ಹಾಸ್ಯರಸವನ್ನು ಗಮನಿಸಿ. ಸಮಾಧಿ ತೋಡುವವನ ದೃಷ್ಟಿಯಿಂದ ಸಾವೂ ಸತ್ತವನ ವಿಚಾರಗಳೂ ಶೋಕಭಾವವನ್ನು ಉಕ್ಕಿಸುವ ಅಂಶಗಳೇ ಅಲ್ಲ. ಸಮಾಧಿ ತೋಡುವುದೇ ದಿನ ನಿತ್ಯದ ಅವನ ಕಸಬಾದ್ದರಿಂದ ಹಾಡು ಹೇಳಿಕೊಂಡು ತಮಾಷೆ ಮಾಡಿಕೊಂಡೇ ಅವನು ಆ ಕೆಲಸ ಮಾಡುತ್ತಿರುತ್ತಾನೆ. ಆದರೆ ಆತನು ಅಗೆಯುತ್ತಿರುವ ಸಮಾಧಿಯಿಂದ ತೆಗೆದೆಸೆದ ಒಂದು ತಲೆ ಬುರುಡೆಯ ಮೂಳೆಯನ್ನು ಕಂಡ ಹ್ಯಾಮ್ಲೆಟ್‌ನ ಬಾಯಿಂದ ಚಿಮ್ಮಿದ ಮಾತುಗಳು ಇದ್ದಕ್ಕಿದ್ದಂತೆಯೇ ನಮ್ಮನ್ನು ಋಷಿಗಳನ್ನಾಗಿ ಪರಿವರ್ತಿಸಿ ಭೂತ ಭವಿಷ್ಯದ್ವರ್ತಮಾನಗಳನ್ನೆಲ್ಲ ನಮ್ಮ ಅಂಗೈನೆಲ್ಲಿ ಕಾಯಾಗಿ ಪರಿವರ್ತಿಸಿ ಬಿಡುತ್ತದೆ. ಸಮಾಧಿ ತೋಡುವವನು ಹಾಡಿದಂತೆಯೇ ಅವನು ತೋಡುತ್ತಿರುವ ಸಮಾಧಿಯಿಂದ ತೆಗೆದೆಸೆದ ತಲೆ ಬುರುಡೆಯ ಮೂಳೆಯೂ ಹಿಂದೊಂದು ದಿನ ಹಾಡುತ್ತಿತ್ತು. ಅದಕ್ಕೂ ಹಾಡಬಲ್ಲಂತಹ ಒಂದು ನಾಲಗೆ ಇತ್ತು ಸಮಾಧಿ ತೋಡುತ್ತಾ ಹಾಡುವ ಪ್ರಾಣಿಗೆ ಅದು ಗೊತ್ತಿದ್ದಂತಿಲ್ಲ. ಅವನಿಗೆ ತನ್ನ ಕೂಲಿ ಕಾಸಿನ ದೃಷ್ಟಿಯಿಂದ ತನ್ನ ಅಂತಹ ಕೆಲಸದಲ್ಲೂ ಒಂದು ರೀತಿಯ ಸಂತೋಷವೇ ಆಗಿದ್ದೂ ಆಶ್ಚರ್ಯವಲ್ಲ. ಇದು "ಹಬ್ಬಕ್ಕೆ ತಂದ ಕುರಿ ತೋರಣಕ್ಕೆ ತಂದ ತಳಿರ ಮೇದಿತ್ತು ನೋಡ" ಎಂಬ ವಚನದ ಸಾಲನ್ನು ನೆನಪಿಗೆ ತರುತ್ತದೆ. ಇದರಲ್ಲಿ ಲೋಕದ ನಶ್ವರತೆ, ಅಜ್ಞಾನ. ಅಸಹಾಯಕತೆ, ಅಲೋಕಶಕ್ತಿಯ ಅದಮ್ಯತೆ, ಅನಿವಾರ್ಯತೆ, ಮಾನವನ ತೃಣಸಮಾನ ಯಃಕಶ್ಚಿತತೆಗಳೆಲ್ಲ ಇಣುಕಿ ಹಾಕಿ ನಮ್ಮಲ್ಲಿ ವಿದ್ಯುತ್ ಸಂಚಾರವಾಗಿ ನಾವು ಮರವಟ್ಟು ಹೋಗುವಂತೆ ಮಾಡುತ್ತವೆ. ಎಂದರೆ ಅಲ್ಲಿನ ಹಾಸ್ಯರಸದ ತುಣುಕು ಇದ್ದಕ್ಕಿದ್ದಂತೆಯೇ ನಮ್ಮನ್ನು ಚಿಂತನಾಂಶದ ಯಾವ ಶಿಖರಕ್ಕೇರಿಸಿಬಿಡುವ ಸಾಮರ್ಥ್ಯವನ್ನು ತೆರೆದು ತೋರಿಸುತ್ತದೆ ! ಚಿಂತನಾಂಶದ ಎಂತಹ ಉಜ್ವಲ ಪ್ರಭೆಗೆ ಅದು ಇಂಧನವಾಗಿದೆ ಎಂಬುದೆಲ್ಲ ಇಲ್ಲಿನ ಮನೋಜ್ಞತೆಗೆ ಸಾಕ್ಷಿಯಾಗಿದೆ. ಒಫೀಲಿಯಾಳ ಪ್ರಣಯವೂ, ಅದರ ಭಂಗವೂ, ಹ್ಯಾಮ್ಲೆಟ್‌ನ ವೀರ ಸಾಹಸಪರತೆಯೂ. ಅವನ ಅರೆಹುಚ್ಚಿನ ಸುಪ್ರಭೀಕರತೆಯೂ ಎಲ್ಲವೂ ರಸ ರೂಪಕ್ಕೆ ಬರುತ್ತಿರುವಷ್ಟರಲ್ಲಿಯೇ ದೇದೀಪ್ಯಮಾನವಾಗಿ ಬೆಳಗುವ ಚಿಂತನಾಂಶ ಪ್ರಭೆಗೆ ಇಂಧನವಾಗಿ ಅಂತರ್ಧಾನವಾಗುವುದನ್ನು ಈ ನಾಟಕದಲ್ಲಿ ಕಾಣುತ್ತೇವೆ.

ಆದರೂ ಒಂದು ಅಂಶವನ್ನು ಮಾತ್ರ ಚಿಂತನಾಂಶದ ಹೇರಳತ್ತ [illegible] ಗಮನಿಸಬೇಕಾಗುತ್ತದೆ. ಅದು ಅಜ್ಞಾನದ ಲೋಕಪರತೆಯನ್ನು ಮೆಟ್ಟಿ ನಿಲ್ಲುವ

ಪಾರಲೌಕಿಕತೆ, ಎಜಾಕ್ಸ್ ಆಗಲಿ, ಹ್ಯಾಮ್ಲೆಟ್ಟಾಗಲಿ ಪಾರಲೌಕಿಕ ವ್ಯಕ್ತಿಗಳಲ್ಲದಿದ್ದರೂ ಮಹೋನ್ನತ ವ್ಯಕ್ತಿಗಳು. ಹಾಗಿದ್ದರೂ ಅವರು ಸಂದರ್ಭವಶದಿಂದ ವಿಧಿಯ ಕೈಯಲ್ಲಿ ಅನಿವಾರ್ಯವಾಗಿ ಎಂಬಂತೆ ಅದು ಆಡಿಸಿದಂತೆ ಆಡುವ ಗೊಂಬೆಗಳಾಗಿ ಬಿಡುತ್ತಾರಲ್ಲ. ಕಡೆಗೆ ಅಲೋಕ ಶಕ್ತಿಯ ಇಚ್ಛೆಯ ಮಹಾವಾರಿಧಿಯಲ್ಲಿ ಅವಶರಾಗಿ ತೃಣದಂತೆ ತೇಲಿ ಹೋಗಿ ಬಿಡುತ್ತಾರಲ್ಲ. ಇತ್ಯಾದಿ ಇತ್ಯಾದಿ ವಿಚಾರಗಳು ನಮ್ಮನ್ನು ಚಿಂತನಾಕಾಶ ಯಾತ್ರಿಗಳನ್ನಾಗಿ ಮಾಡಿಬಿಡುತ್ತವೆ. ಇಲ್ಲಿ ರಸವೆಂಬುದು ಚಿಂತನಾಂಶ ಪ್ರಭೆಯ ದೇದೀಪ್ಯಮಾನತೆಯನ್ನು ಹೆಚ್ಚಿಸಲು ಒದಗಿ ಬರುವ ಇಂಧನ ಮಾತ್ರವಾಗಿ ತೋರುತ್ತದೆ. ಅಷ್ಟೇ ಹೊರತು ಅದಕ್ಕೆ ಆಸ್ವಾದ್ಯತೆಯ ಸ್ವಾತಂತ್ರ್ಯವೆಂಬುದು ಎಳ್ಳಷ್ಟೂ ಇರುವಂತೆ ತೋರುವುದಿಲ್ಲ.

ಶರೀರದಲ್ಲಿ ರಕ್ತನಾಳ ಜಾಲವೂ ನರ ಜಾಲವೂ ಆದ್ಯಂತವಾಗಿ ವ್ಯಾಪಿಸಿರುವಂತೆ ಕಾವ್ಯ ಶರೀರದಲ್ಲಿ ರಸತಂತು ಜಾಲವೂ ಚಿಂತನಾಂಶ ಜಾಲವೂ ಆದ್ಯಂತವಾಗಿ ವ್ಯಾಪಿಸಿರುತ್ತವೆ. ಆದರೂ ಉನ್ಮೇಷ ಉತ್ಕರ್ಷಗಳ ದೃಷ್ಟಿಯಿಂದ ಕಾವ್ಯಗಳಲ್ಲಿ ತಾರತಮ್ಯವಿರಬಲ್ಲದು. ಈ ತಾರತಮ್ಯವೇ ಕಾವ್ಯದ ಅಂತಸ್ತಿನ ಅಳತೆಗೋಲು ಆಗಿರುತ್ತದೆಂಬುದು ಗಮನಾರ್ಹವಾದ ಅಂಶ. ಇದು ಬಿಡಿ ಕವನಗಳಿಂದ ಮೊದಲ್ಗೊಂಡು ಮೇರು ಕೃತಿಗಳ ವರೆಗೆ ಕಾವ್ಯ ಕ್ಷೇತ್ರ ಸಮಸ್ತವನ್ನೂ ಒಳಗೊಳ್ಳುತ್ತದೆಯಾದರೂ ಮಹತ್ಕೃತಿಗಳಲ್ಲಿ ಪರಿಣಾಮ ತೀವ್ರತೆ, ವ್ಯಾಪಕತೆ, ಚಿರಂತನತೆಗಳ ದೃಷ್ಟಿಯಿಂದ ಇದರ ಅನಿವಾರ್ಯತೆಯೂ ಮಾರ್ಪಡಿಸುತ್ತದೆ. ಮಹಾಕಾವ್ಯದಲ್ಲಿ ಚಿಂತನಾಂಶ ದರ್ಶನಾಂಶಗಳು ಪರಾಕಾಷ್ಠೆಯನ್ನು ತಲುಪಬೇಕಾಗುತ್ತದೆ ನಿಜ. ಆದರೆ ಇವುಗಳ ಆವಿರ್ಭೂತಿ ಅಭಿವ್ಯಕ್ತಿಗಳಿಗೆ ಮೂಲ ಕಾರಣವಾದ ಅಂಶಗಳು ಒಂದಲ್ಲ ಎರಡು ಎಂಬುದನ್ನೇ ಪ್ರತಿಭಾಶಾಲಿಗಳೂ ಸಿದ್ಧಹಸ್ತರೂ ಆದ ಚೇತನಗಳೂ ಸಹ ಮತ್ತೆ ಮತ್ತೆ ಮರೆತದ್ದನ್ನು ಚರಿತ್ರೆ ದಾಖಲಿಸುತ್ತಾ ಬಂದಿದೆ.

ಮೇರು ಕೃತಿಗಳಲ್ಲಿ ಮೈದೋರಬಹುದಾದ ಮಹೋತ್ತುಂಗತೆಗೆ ಕವಿ ಪ್ರತಿಭೆಯೊಂದೇ ಕಾರಣ ಎಂಬುದು ಸರ್ವೇಸಾಧಾರಣವಾದ ಅಭಿಪ್ರಾಯ. ಆದರೆ ಒಳಹೊಕ್ಕು ನೋಡಿದಾಗ ತಿಳಿಯುತ್ತದೆ, ಕವಿ ಪ್ರತಿಭೆಯೊಂದೇ ಇದಕ್ಕೆ ಕಾರಣವಲ್ಲ, ಕಾವ್ಯ ಶರೀರವೆನಿಸುವ ವಸ್ತುವೂ ಕವಿ ಪ್ರತಿಭೆಯಷ್ಟೇ ಇದಕ್ಕೆ ಕಾರಣ ಎಂಬುದು. ಇದು ಗತಾನುಗತಿಕತೆಯ ಮಂಪರಿನಲ್ಲಿ ಮುಳುಗಿರುವ ಮುಕ್ಕಾಲು ಪಾಲು ಜಗತ್ತಿನ ಅರಿವಿನಾಚೆಗಿರುವ ಸತ್ಯ. ಕಲಾಕೃತಿಯ ಶರೀರವೆನಿಸುವ ವಸ್ತುವಿನ ಆಯ್ಕೆಗೂ ಕವಿ ಪ್ರತಿಭೆಯೇ ಕಾರಣವೆಂಬುದೇನೋ ನಿಜವೆ? ಆದರೂ ಅದಿಷ್ಠಾನಕಾರಣವಾದ ಸನ್ನಿವೇಶ ಪರಿಸರಗಳ ಪ್ರಭಾವದಿಂದ ಕಾಳಿದಾಸನಂತಹ ಮಹಾ ಪ್ರತಿಭಾಶಾಲಿ

ಯಾದ ಕವಿಯೂ ಸಹ ವಸ್ತುವಿನ ಆಯ್ಕೆಯಲ್ಲಿಯೇ ಸೋತು ಹೋಗಿರುವ ದುರಂತವನ್ನು ಕಂಡಾಗ ಯಾರಿಗಾದರೂ ದಿಗ್ಭ್ರಮೆಯಾಗದಿರದು. ಸನ್ನಿವೇಶ ಪರಿಸರಗಳ ಮಾಯಾ ಮರೀಚಿಕೆ ಮಹಾ ಪ್ರತಿಭಾಶಾಲಿಯಾದ ಕವಿಯನ್ನೇ ಭ್ರಾಂತಿಗೀಡು ಮಾಡಬಲ್ಲುದಾದರೆ ಸಹೃದಯ ಕೋಟಿಯ ಪಾಡೇನು ? ಅದರಲ್ಲೂ ಗತಾನುಗತಿಕವಾದ ಲೋಕ ಸರ್ಪರಜ್ಜು ಭ್ರಾಂತಿಯಲ್ಲಿ ಮುಳುಗಿ ಶತಮಾನಗಳಿರಲಿ ಸಹಸ್ರಮಾನಗಳವರೆಗೂ ನಿದ್ದೆ ತಿಳಿಯದೇ ಒದ್ದಾಡಿದರೆ ಆಶ್ಚರ್ಯವೇ ಇಲ್ಲ. ಕಾಳಿದಾಸನಂತಹ ಮಹಾಮತಿಯೂ ಸಹ ವಸ್ತುವಿನ ಆಯ್ಕೆಯಲ್ಲೇ ಸೋತು ಪ್ರಥಮ ಚುಂಬನೇ ದಂತಭಗ್ನಂ ಆಗಿರುವುದನ್ನು ಆತನ ಕೃತಿಗಳ ನಿಷ್ಪಕ್ಷಪಾತವೂ ನಿಖರವೂ ಆದ ಅಧ್ಯಯನದಿಂದ ಕಂಡುಕೊಳ್ಳುವುದು ಕಷ್ಟವೇನಲ್ಲ. ಇದಕ್ಕೆ ನಾವು ತಕ್ಕಮಟ್ಟಿಗಾದರೂ ಗತಾನುಗತಿಕತೆಯಿಂದಲೂ ಪರಂಪರಾಗತವಾದ ಸರ್ಪರಜ್ಜು ಭ್ರಾಂತಿಯಿಂದಲೂ ತಪ್ಪಿಸಿಕೊಂಡು ಹೊರ ಬರಬಲ್ಲ ಸಾಹಸಿಗಳಾಗಿರಬೇಕಾಗುತ್ತದೆ ಅಷ್ಟೆ. ಕಾಳಿದಾಸನು ಮಹಾ ಪ್ರತಿಭಾಶಾಲಿ ಎಂಬುದೇನೋ ಹಗಲಿನಷ್ಟು ಸತ್ಯವೇ ಆದರೂ ಪ್ರತಿಭೆಯೇ ಮಹಾ ಕಾವ್ಯವೆನಿಸಲಾರದಷ್ಟೆ ?

ವಿದ್ವತ್ ಪೀಠವು ಅಲಂಕಾರವೇ ಕಾವ್ಯ ಎಂದು ಸಾರಿದ ಯುಗದಲ್ಲಿ ಕಾಳಿದಾಸನು ಬದುಕಿದ್ದನೆಂಬುದನ್ನು ನಾವು ಪ್ರಥಮತಃ ನೆನಪಿನಲ್ಲಿಡಬೇಕು. ಅದು ಕಾವ್ಯಮೀಮಾಂಸೆಯ ಹಸುಳೆತನದ ತೊದಲ್ನುಡಿಯಾಗಿತ್ತೆಂಬುದನ್ನು ಇಂದು ನಾವೆಲ್ಲ ಕಷ್ಟವಿಲ್ಲದೆ ತಿಳಿಯಬಲ್ಲೆವು. ಆದರೆ ಅದಾದನಂತರ ಪ್ರಸ್ಥಾನಗಳ ಮೇಲೆ ಪ್ರಸ್ಥಾನಗಳು ಬಂದು ಶತ ಶತಮಾನಗಳವರೆಗೆ ಕಾರ್ಯ ರಹಸ್ಯವನ್ನು ಕುರಿತ ಚಕ್ರವ್ಯೂಹ ಭೇದನದ ಸಾಹಸ ಯಾತ್ರೆ ಸಾಗುತ್ತಲೇ ಹೋಯಿತೆಂಬುದನ್ನೂ ಬಲ್ಲೆವು. ಎಷ್ಟೋ ಶತಮಾನಗಳ ಸಮುದ್ರ ಮಥನದ ಫಲವಾಗಿ ಕಟ್ಟಕಡೆಯಲ್ಲೆಂಬಂತೆ ಧ್ವನಿ ಪ್ರಸ್ಥಾನದೊಡನೆ ಆ ವರೆಗೆ ರಹಸ್ಯವಾಗಿದ್ದ ರಸತತ್ತ್ವವು ಮೂಡಿ ಬಂದು ಅಮೃತೋದ್ಭವವಾಯಿತೆಂದು ನಮ್ಮ ಈ ವರೆಗಿನ ಕಾವ್ಯಮೀಮಾಂಸೆಯ ಚರಿತ್ರೆ ತಿಳಿಸುತ್ತದಷ್ಟೆ. ಕಾಳಿದಾಸನಿಗೆ ಇದಾವುದರ ಪರಿವೆಯೂ ಇಲ್ಲದೆ ಆತನು ಅಲಂಕಾರಗಳೇ ಕಾವ್ಯದ ಜೀವ ಎಂಬ ಗಟ್ಟಿಯಾದ ನೆಲೆಯಲ್ಲಿ ನೆಲಸಿದ್ದನೆಂಬುದು ತೀರ ಸ್ಪಷ್ಟ. ಆದ್ದರಿಂದಲೇ ಆತನು ಮಹಾ ಕಾವ್ಯವೆಂದು ರಚಿಸಿದ ಕೃತಿಗಳೂ ಸಹ ವಿವಿಧಾಲಂಕಾರಗಳ ಸುತ್ತಲೂ ತಮ್ಮ ಪರಿಭ್ರಮಣ ಪಥವನ್ನು ನಿರ್ಮಿಸಿಕೊಂಡು ಅಲ್ಲಿಯೇ ಪ್ರದಕ್ಷಿಣೆ ಮಾಡಿದ್ದರಲ್ಲೂ ಆಶ್ಚರ್ಯವಿಲ್ಲ ಹೀಗಿರುವಲ್ಲಿ ಕೇವಲ ಭೂಮಿಯ ಕ್ಷಿತಿಜವನ್ನೇ ಮೀರಲಾರದ ಆತನ ಕೃತಿಗಳ ಮಹತ್ವ ರಸಧ್ವನಿಗಳ ಸೌರ ಪಥವನ್ನು ಸೇರಲರಿಯದೆ ಹೋಗಬೇಕಾಯಿತು ಎಂದ ಮೇಲೆ ಅವಕ್ಕೆ ಚಿಂತನಾಂಶದ ಕ್ಷೀರಪಥದ ಪರಿವೆಯುಂಟಾಗಬಲ್ಲುದೆ ? ಇನ್ನು ದರ್ಶನಾ

ಕಾಶದ ಹರಹಿನ ಕಲ್ಪನೆಯೂ ಅಷ್ಟೆ. ಅದು ಆತನಿಗೆ ಅಕ್ಷರಶಃ ಕಲ್ಪನಾತೀತವೇ ಆಗಬೇಕಾಯಿತು. ಏಕೆಂದರೆ ಮಹೋನ್ನತ ಕೃತಿ ಎನಿಸಿ ಲೋಕ ಪ್ರಸಿದ್ಧವಾದ ಆತನ ರಘುವಂಶದಲ್ಲಿ ಯಾವ ರಸ ಸಮೃದ್ಧಿಯಿದೆ? ರಸೋತ್ಕರ್ಷವು ಆತನ ಗುರಿಯೇ ಆಗಿಲ್ಲದ್ದರಿಂದ ಅಲ್ಲಿ ಅನೂಚಾನತೆ ಪೂರ್ವ ಪರತೆಗಳ ಕೊಂಡಿಗಳೇ ಇಲ್ಲದೆ ಪ್ರತಿ ಸರ್ಗವೂ ಒಬ್ಬೊಬ್ಬ ವ್ಯಕ್ತಿಯ ಜೀವಿತದ ಒಂದಲ್ಲೊಂದು ಮುಖ್ಯ ಘಟನೆಯ ವರ್ಣನೆಗೆ ಮೀಸಲಿಟ್ಟಂತಿದ್ದು ಒಂದೊಂದೂ ಬಿಡಿ ಬಿಡಿಯಾಗಿರುವ ಭಾಗ ಮಾತ್ರ ವಾಗಿದೆ. ಅವುಗಳಲ್ಲಿರುವ ಪರಸ್ಪರ ಸಂಬಂಧವೆಂದರೆ ಅದಕ್ಕೆ ಸಂಬಂಧಿಸಿದ ವ್ಯಕ್ತಿ ಗಳು ಒಂದು ವಂಶಕ್ಕೆ ಸೇರಿದವರೆಂಬುದಷ್ಟೇ. ಇಂದುಮತಿಯ ಸ್ವಯಂವರವು ಯಾವುದಾದರೂ ಒಂದು ಹೆಣ್ಣಿನ ಸ್ವಯಂವರ ಮಾತ್ರವೇ ಹೊರತು ಅದರಲ್ಲಿ ನಿರ್ದಿಷ್ಟ ವ್ಯಕ್ತಿಗಳನ್ನು ಕುರಿತದ್ದೆಂಬುದು ನಾಮ ಮಾತ್ರ. ಹೀಗಿರುವಲ್ಲಿ ಪೂರ್ವಾ ಪರವನ್ನೇ ಗಾಳಿಗೆ ತೂರಿದ ಈ ಬಿಡಿ ವರ್ಣನೆಗಳು ರಸಧ್ವನಿಗಳ ಅಂಚನ್ನು ತಲಪದಿದ್ದದ್ದು ತೀರ ಸಹಜವೇ ಆಗಿದೆ. ಹೀಗಿದ್ದರೂ ಇದರಲ್ಲಿ ಮಹಾ ಕಾವ್ಯತ್ವ ವನ್ನು ಕಾಣ ಹೊರಡುವುದೆಂದರೆ ಇದರ ಹಿನ್ನೆಲೆಯ ರಹಸ್ಯವೇನು ಎಂಬ ಕುತೂ ಹಲವುಂಟಾಗದಿರದು.

ರಘುವಂಶವನ್ನು ಮಹಾಕಾವ್ಯವೆಂದದ್ದಾದರೂ ಕಾಕತಾಳೀಯವೇನಲ್ಲ. ಅಂದಿನ ಕಾಲದ ಹಿನ್ನೆಲೆಯಲ್ಲಿ ಅದು ಸಕಾರಣವಾಗಿಯೇ ತೋರುತ್ತದೆ. ಏಕೆಂದರೆ ಕಾಳಿದಾಸನ ಕಾಲದ ವಿದ್ವತ್ ಪೀಠವು ಮಹಾಕಾವ್ಯದ ಲಕ್ಷಣ ಸಾಮುದ್ರಿಕೆಯನ್ನು ಗುರುತಿಸಿದ ಹಿನ್ನೆಲೆಯೇ ಬೇರೆ. ಅದು ಸಮುದ್ರಾದಿ ಹದಿನೆಂಟು ವರ್ಣನೆಗಳನ್ನೊಳಗೊಂಡಿರಬೇಕೆಂಬ ನಿಯತಿ ಮಾಲೆಯನ್ನೇ ನಿರ್ದೇಶಿಸಿ ಹೆಗ್ಗುರುತನ್ನು ಹಾಕಿ ಕೊಟ್ಟಿತ್ತು. ಒಬ್ಬಾನೊಬ್ಬ ಧೀರೋದಾತ್ತ ಚರಿತನ ಅಥವಾ ಆತನ ವಂಶಾನುಗತ ಚರಿತೆಯ ಅಥವಾ ಹಲವು ಜನ ವರ್ಚಸ್ವಿ ನಾಯಕರ ಜೀವಿತದ ಘಟನೆಗಳನ್ನು ಕುರಿತ ಕಥನವು ಮಹಾಕಾವ್ಯದ ವಸ್ತುವಾಗಲರ್ಹ ಎಂಬುದು ಲಾಕ್ಷಣಿಕರ ಮತವಾಗಿತ್ತು. ಈ ಲಕ್ಷಣವಾದರೂ ಲಕ್ಷಣದ ಆಧಾರ ವಿಲ್ಲದೆ ಮೂಡಿದಂತೆ ತೋರುವುದಿಲ್ಲ. ಹಾಗೆ ಮಾಡುವುದು ಸಾಧ್ಯವೂ ಅಲ್ಲ, ಸಹಜವೂ ಅಲ್ಲವಷ್ಟೆ. ನಮ್ಮ ಎಲ್ಲ ಲಾಕ್ಷಣಿಕ ಪಂಥಗಳೂ ಉದಯಿಸುವ ಎಷ್ಟೋ ಶತಮಾನಗಳ ಅಥವಾ ಸಹಸ್ರ ಮಾನಗಳ ಮೊದಲೇ ನ ಭೂತೋ ನ ಭವಿಷ್ಯತಿ ಎನಿಸುವ ಆದರ್ಶ ಮೇರು ಕೃತಿಗಳು ನಮ್ಮಲ್ಲಿ ಸಿದ್ಧವಾಗಿ ಬೆಳಗುತ್ತಿದ್ದು ವಷ್ಟೆ. ನಮ್ಮ ಲಾಕ್ಷಣಿಕರು ತಮ್ಮ ಲಕ್ಷಣ ಸಾಮುದ್ರಿಕಾ ಶಾಸ್ತ್ರದ ರೇಖೆಗಳನ್ನು ಅಲ್ಲಿಂದಲೇ ಹೆಕ್ಕಿಕೊಂಡದ್ದೂ ಅರ್ಥಪೂರ್ಣವಾಗಿದೆಯೇ ಹೊರತು ಕೇವಲ ಕಾಕ ತಾಳೀಯವೇನಲ್ಲ. ಇಲ್ಲಿನ ಲಕ್ಷಣದ ಲಕ್ಷಣ ರೇಖೆಗಳಿಗೆ ಚಿರಸ್ಥಾಯಿ ಕೃತಿ

ಗಳಾಗಿದ್ದ ರಾಮಾಯಣ ಮಹಾಭಾರತಗಳೇ ಆಕರಗಳೆಂಬುದನ್ನು ನಿಶಿತಮತಿಗಳು ಸುಲಭವಾಗಿ ಊಹಿಸಬಲ್ಲರು. ಮಹಾಭಾರತವು ಪಂಚಮ ವೇದವೆಂದೂ ಮತ್ತೊಂದು ಪುರಾಣವೆಂದೂ ಪರಿಗಣಿಸಲ್ಪಟ್ಟಿದ್ದರಿಂದ—ಅದರ ರಚನಾಕ್ರಮವೂ ಅದಕ್ಕೆ ಅನ್ವರ್ಥವೇ ಆಗಿದೆ—ಅದನ್ನು ಒತ್ತಟ್ಟಿಗಿಟ್ಟು ಶ್ರೀಮದ್ರಾಮಾಯಣ ಗುರುವಿನ ಸಾರ್ವಭೌಮಾದರ್ಶವನ್ನೇ ನಮ್ಮ ಲಾಕ್ಷಣಿಕರು ಮಹಾಕಾವ್ಯದ ತಮ್ಮ ಹೆಗ್ಗುರುತುಗಳ ವಿನ್ಯಾಸ ರಚನೆಗೆ ಆಧಾರವೆಂದು ಅವಲಂಬಿಸಿದ್ದರಲ್ಲಿ ಏನೇನೂ ಆಶ್ಚರ್ಯವಿಲ್ಲ. ಆದರೆ ಕೇವಲ ಬಹಿರಂಗದ ಆಕಾರ ಸೌಷ್ಠವವನ್ನು ಮಾತ್ರ ಕುರಿತಂತೆ ಹೇಳಿ ಅಂತರಂಗದ ಚೈತನ್ಯವನ್ನೂ ಆತ್ಮತೇಜಸ್ಸನ್ನೂ ಕುರಿತ ಅಂಶಗಳನ್ನು—ಅವು ಅವರಿಗೂ ಸ್ಪಷ್ಟವೂ, ನಿಖರವೂ, ಉಕ್ತಿಗ್ರಾಹ್ಯವೂ ಆಗಿಲ್ಲದೇ ಹೋಗಿದ್ದರಿಂದಲೋ ಏನೋ—ಮಾತ್ರ ವಚನಿಸಲಾರದೆ ಅವನ್ನು ಕವಿಯ ಸಾಮರ್ಥ್ಯಕ್ಕೂ, ಪ್ರತಿಭೆಗೂ ಕೈಬಿಟ್ಟು ಕೈ ತೊಳೆದುಕೊಂಡದ್ದರಿಂದ ಕವಿ ಸಮುದಾಯದಲ್ಲಿ ಅನಾಹುತ ಪರಂಪರೆಗಳಿಗೂ ವಿಚಿತ್ರಾರ್ಥ ವಿವರಣೆಗಳಿಗೂ ಕಡೆಗೆ ಸರ್ಪರಜ್ಜು ಭ್ರಾಂತಿಗೂ ಕಾರಣವಾಯಿತು. ಕವಿ ಪ್ರಪಂಚವನ್ನು ಕವಿದ ಈ ಮಬ್ಬು ಮಂಪರಗಳು ಎಷ್ಟೋ ಶತಮಾನಗಳ ವರೆಗೆ ಮಾಯಾಜವನಿಕೆಯಂತೆ ವರ್ತಿಸಿ ಅವರನ್ನು ದಿಕ್ಕು ತಪ್ಪಿಸಿದ್ದನ್ನು ಕಾಣಬಹುದು ತಲೆ ತಲಾಂತರಗಳ ವರೆಗೆ ಹರಿದು ಬಂದ ಈ ಭ್ರಾಂತಿ ಪೂರಕ್ಕೆ ಹಿಮಾಲಯದ ತಪ್ಪಲಿನ ಮಹಾ ಜಲಪಾತದಂತೆ ವರ್ತಿಸಿ ಕಾಳಿದಾಸನೂ ಸಹ ಈ ಕಂಗಾಲರ ಗುಂಪಿಗೇ ಸೇರಿದ್ದಾನೆಂಬುದು ವಿಸ್ಮಯಕರವಾದರೂ ಸತ್ಯ.

ಮಹಾಕಾವ್ಯವು ಒಂದು ಜನಾಂಗದ ಸಂಸ್ಕೃತಿಯ ಸಮಗ್ರ ಚಿತ್ರಣವಾಗಿರುತ್ತದೆ. ರಾಮಾಯಣವು ಇದಕ್ಕೆ ಮಹೋತ್ತುಂಗ ನಿರ್ದೇಶನವಷ್ಟೆ. ಮಹಾಕಾವ್ಯ ಕರ್ತನು ಇದನ್ನಿಲ್ಲಿ ಕಂಡರಿಸುವಲ್ಲಿ ಇಲ್ಲಿನ ಮುಖ್ಯಾಂಶಗಳನ್ನು ಗಮನಿಸಬೇಕೆಂಬುದು ಲಾಕ್ಷಣಿಕರ ಉದ್ದೇಶ. ಮೊದಲನೆಯ ಅಂಶವೇ ಮಹಾಕೃತಿ ವರ್ಣನಾ ಪ್ರಧಾನವಾಗಿರಬೇಕೆಂಬುದು. ಮಹಾ ಕಾವ್ಯವು ವಿಸ್ತಾರವಾದ ಇತಿವೃತ್ತವನ್ನುಳ್ಳದಾದ್ದರಿಂದ ಅದು ಕೇವಲ ವರದಿಯಾಗುವ ಅಪಾಯವುಂಟು ಮರಣ ಸ್ವರೂಪದ ಈ ಅಪಾಯದಿಂದ ತಪ್ಪಿಸಿಕೊಂಡು ಕೃತಿ ಸಜೀವವಾಗಿ ಮೈದಳೆಯಬೇಕಾದರೆ ಅದು ವರ್ಣನಾ ಪ್ರಧಾನವಾಗಿರಬೇಕಾದುದು ಅದರ ಮೊತ್ತಮೊದಲ ಆವಶ್ಯಕತೆ. 'ಕವಿ' ಶಬ್ದದ ಮೂಲವೇ 'ವರ್ಣಿಸು' ಎಂಬರ್ಥವನ್ನು ಕೊಡುವ 'ಕವೃ' ಧಾತು ಎಂಬುದನ್ನು ಇಲ್ಲಿ ಅಗತ್ಯವಾಗಿ ಜ್ಞಾಪಿಸಿಕೊಳ್ಳಬೇಕಾಗುತ್ತದೆ. 'ವರ್ಣಿಸುವುದು' ಎಂದರೆ ಸಜೀವವಾದ, ಸಚೇತನವಾದ ಸೃಷ್ಟಿಕಾರ್ಯ ಎಂಬ ಭಾವವಾಗುತ್ತದೆ ಈ ಹಿನ್ನೆಲೆಯಲ್ಲಿ ಮಹಾಕೃತಿಗೆ ವರ್ಣನೆಗಳು ಏಕೆ

ಅತ್ಯಾವಶ್ಯಕ ಎಂದು ಪರಿಭಾವಿಸಬೇಕಾಗುತ್ತದೆ. ಇಲ್ಲಿನ ವರ್ಣನಾತ್ಮಕತೆಯ ಸ್ವರೂಪವನ್ನು ಇನ್ನೂ ಸ್ಪಷ್ಟಪಡಿಸುವ ಸಂಕಲ್ಪದಿಂದಲೇ ಲಾಕ್ಷಣಿಕರು ಅವುಗಳನ್ನು ಪಟ್ಟಿ ಮಾಡಹೊರಟಿದ್ದಾರೆ. ಒಂದು ನಾಡಿನ ಹೊರ ಮೈಯ ವರ್ಣನೆಗಳಲ್ಲಿ ಅಲ್ಲಿನ ಅಂಬುಧಿ, ಪರ್ವತ, ಅಲ್ಲಿ ಗೋಚರಿಸುವ ಅಂಭೋರುಹವೈರಿ ಮಿತ್ರರುದಯಗಳು ವರ್ಣಿಸಲ್ಪಡಬೇಕು. ಪ್ರಕೃತಿವರ್ಣನೆ ಇಷ್ಟಕ್ಕೇ ಮುಗಿಯುತ್ತದೆಂದು ತಿಳಿಯದೆ ಆ ನಾಡು ವಿವಿಧ ಋತುಗಳಲ್ಲಿ ಹೇಗೆ ವೈವಿಧ್ಯದೊಡನೆ ಹೃದಯಂಗಮವಾಗಿ ಶೋಭಿಸುತ್ತದೆಂಬುದೂ ಅಲ್ಲಿನ ಪ್ರಕೃತಿ ರಮಣೀಯತೆಗೆ ಪುಟವಿಕ್ಕುವಂತೆ ಕಾಡು ನಾಡಿನ ಕೂಲಂಕಷ ವರ್ಣನೆಯಿಂದ ಕೃತಿ ಮೈದುಂಬಿಕೊಂಡಿರಬೇಕು ಇತ್ಯಾದಿಗಳು ಇಲ್ಲಿ ವರ್ಣನೆಗಳನ್ನು ಪಟ್ಟಿ ಮಾಡಿದಾತನ ಆಶಯ. ಹೀಗೆ ಹೇಳುವಲ್ಲಿ ವಾಲ್ಮೀಕಿ ರಾಮಾಯಣದ ಮಾಲೆ ಮಾಲೆಯಾದ ವರ್ಣನೆಗಳು ಆತನ ಎದೆಯಾಳದಲ್ಲಿ ಹುದುಗಿದ್ದುವೆಂಬುವನ್ನು ಅನುಭವಿಗಳು ಸುಲಭವಾಗಿ ಪತ್ತೆ ಮಾಡಬಲ್ಲರು. ಇದಿಷ್ಟೂ ಬಾಹ್ಯ ಪ್ರಕೃತಿಯ, ಸುತ್ತಣ ನಿಸರ್ಗ ರಮಣೀಯತೆಯನ್ನು ಕುರಿತ ವರ್ಣನೆಯಾಯಿತು. ಇದಿಲ್ಲದೆ ಕೃತಿ ಪೂರ್ಣತೆಯನ್ನು ಪಡೆಯಲಾರದೆಂದು ನಿರ್ದೇಶಿಸಿದ್ದು ಅರ್ಥಪೂರ್ಣವಾಗಿಲ್ಲವೆ ? ಇನ್ನು ಅಲ್ಲಿ ಮಾನವ ಕೋಟಿಯ ಬದುಕಿನ ಅಂತರಂಗದ ಪ್ರಕೃತಿಯ, ಮನೋಮಯ ಲೋಕದ ವರ್ಣನೆಯ ವಿವಿಧ ಮುಖಗಳ ಮಾದರಿಯನ್ನು ಹೇಳಹೊರಟ ಆತನು ಕಥಾನಾಯಕನ ಹುಟ್ಟು, ಬೆಳವಣಿಗೆ, ಮದುವೆ ಮುಂತಾದ ವರ್ಣನೆಗಳೊಡನೆ ಅಲ್ಲಿನ ಸಾಮಾಜಿಕ ಜೀವನದ ಚಿತ್ರಣವನ್ನು ನಿರ್ದೇಶಿಸುತ್ತಾನೆ. ಇನ್ನು ಸಾಂಸಾರಿಕ ಜೀವನ ಚಿತ್ರಣ. ಇದರಲ್ಲಿ ಜಲಕ್ರೀಡೆ, ವನಕ್ರೀಡೆ, ಪಾನಗೋಷ್ಠಿಗಳಿಲ್ಲದೆ ಕೃತಿಗೆ ಪರಿಪೂರ್ಣತೆ ಬರಲಾರದೆಂಬ ಆತನ ಅಭಿಪ್ರಾಯ ಮಾತ್ರ ಕುಚೋದ್ಯಕಾರಿಯಾಗಿದೆ. ಇಲ್ಲಿ ಮಾತ್ರ ವಾಲ್ಮೀಕಿಯ ಕೃತಿಯಿಂದ ನಮ್ಮ ಲಾಕ್ಷಣಿಕನು ತುಸು ಬೇರೆಯ ಮಾರ್ಗವನ್ನೇ ತುಳಿದು ಬಿಟ್ಟಿರುವುದನ್ನು ಕಾಣಬಹುದು ವಾಲ್ಮೀಕಿಯಲ್ಲಿ ವನಕ್ರೀಡೆಯನ್ನೇನೂ ಹುಡುಕುವ ಅಗತ್ಯವಿಲ್ಲವಷ್ಟೆ. ಜಲಕ್ರೀಡೆ ಪಾನಗೋಷ್ಠಿಗಳು ಮಾತ್ರ ಅಲ್ಲಿ ಸಿಕ್ಕುವುದಿಲ್ಲ. ಪಾನ ಗೋಷ್ಠಿ ಮತ್ತು ಅಲ್ಲಿ ಉಪಯೋಗವಾಗುತ್ತಿದ್ದ ಮದ್ಯಗಳ ಕೂಲಂಕಷವಾದ ವಿವರಣೆ ಭರತನ ಸೇನೆ ಚಿತ್ರಕೂಟಕ್ಕೆ ಬರುತ್ತಿದ್ದಾಗ ಮಾರ್ಗ ಮಧ್ಯೆ ಬೀಡು ಬಿಟ್ಟ ಸಂದರ್ಭದಲ್ಲಿ ಬರುತ್ತದೆ. ಪಾನಕ್ಕೆ ಸೇನಾ ಶಿಬಿರಕ್ಕಿಂತ ಸೂಕ್ತ ಸ್ಥಾನವಿನ್ನುಂಟೆ ? ರಾಮಾಯಣದ ಕವಿಯ ಔಚಿತ್ಯ ಪ್ರಜ್ಞೆ ಪ್ರಶ್ನಾತೀತವಲ್ಲವೆ ? ಆದಿರಲಿ, ಜಲಕ್ರೀಡೆಗೆ ಮಾತ್ರ ಇಷ್ಟೂ ಅವಕಾಶ ಅಲ್ಲಿಲ್ಲ ಉಳಿದೆಲ್ಲ ಅಂಶಗಳಿಗೂ ವಾಲ್ಮೀಕಿಯನ್ನು ಮಾದರಿಯಾಗಿಟ್ಟುಕೊಂಡ ನಮ್ಮ ಲಾಕ್ಷಣಿಕ ಮಹಾಶಯನು ಚಪಲತೆಯನ್ನು ತಡೆಯದೆ ಇಲ್ಲಿ

ಮಾತ್ರ ಬೇರೆ ದಾರಿ ಹಿಡಿದನೆ ಎನಿಸುತ್ತದೆ. ಅಲ್ಲದೆ ಹದಿನೆಂಟರಲ್ಲಿ ಇವು ಹೆಸರಿಸ ಬಹುದಾದಷ್ಟು ಗಣ್ಯವೆಂದು ಅವನು ಭಾವಿಸಿದ್ದು ಕಿಂಚಿತ್ ವಿಸ್ಮಯಕಾರಿಯೂ ಆಗಿದೆ. ಇನ್ನುಳಿದಂತೆ ಕಾಂತಾರಶಿ ಅತ್ಯಗತ್ಯವಾದದ್ದೆ. ಶೃಂಗಾರ ರಸದ ಎರಡು ಮುಖಗಳನ್ನೂ ಚಿತ್ರಿಸ ಹೊರಟು ಬಹುಮುಖ ಬಾಳಿನ ಅಂತಸ್ತತ್ತ್ವವನ್ನು ಕನ್ನಡಿಸಲು ಇದು ಅನಿವಾರ್ಯವಷ್ಟೆ

ಇದಿಷ್ಟು ಬಾಳಿನ ಸರ್ವೇಸಾಧಾರಣ ಸನ್ನಿವೇಶಗಳನ್ನು ಕುರಿತ ವಿಚಾರ ಸರಣಿ ಯಾದರೆ ಇಲ್ಲಿಂದ ಮುಂದಿನದು ಜೀವನದ ವಿಷಮಾವಸ್ಥೆಗಳನ್ನು ಕುರಿತ ವರ್ಣನೆ ಗಳನ್ನು ಗುರಿಗೊಳ್ಳುತ್ತದೆ. ಚಿಂತೆ, ಮಂತ್ರಚರ, ಯಾನ, ವಿರೋಧಿ ಜಯ— ಇವು ಕಿಷ್ಕಿಂಧಾ ಕಾಂಡದಿಂದ ಮುಂದಿನ ರಾಮಾಯಣದ ಎಂದರೆ ಕಾವ್ಯದ ಕಡೆಯ ಅರ್ಧ ಭಾಗವಾದ ಮೂರು ಕಾಂಡಗಳ ಕಥೆಯನ್ನು ಕುರಿತ ನಿರ್ದೇಶಕಾಂಶಗಳನ್ನು ಚಾಚು ತಪ್ಪದೆ ಸೂಚಿಸುತ್ತಿರುವುದು ಸ್ಪಷ್ಟವಾಗಿಯೇ ಇದೆ.

ಮೇಲಿನ ಪಟ್ಟಿಯಲ್ಲಿ ಪರಿಗಣಿಸಲಾದ ವರ್ಣನ ಮಾಲಿಕೆಯನ್ನು ಮುಖ್ಯ ವಾಗಿ ಮೂರು ಭಾಗವಾಗಿ ಮಾಡಬಹುದು. ಮೊದಲನೆಯದು ಬಾಹ್ಯ ಪ್ರಕೃತಿಯ ವಿವಿಧ ಮುಖಗಳನ್ನು ಕುರಿತ ವರ್ಣನೆಗಳು. ಎರಡನೆಯದು ಮಾನವ ಸಮಾಜದ ಸ್ವರೂಪವನ್ನೂ ಆಚಾರ ವ್ಯವಹಾರಗಳನ್ನೂ ಒಳಗೊಂಡಂತೆ ಸುಖ ದುಃಖ ಮಿಶ್ರಿತ ವಾದ ಹೊರ ಬಾಳಿನ ಸ್ವರೂಪವನ್ನು ಕುರಿತ ವರ್ಣನೆಗಳು. ಕಡೆಯಲ್ಲಿ ಉದಾತ್ತ ತತ್ತ್ವಗಳ ಪಾಲನೆಗಾಗಿ, ಧರ್ಮ ಸ್ಥಾಪನೆಗಾಗಿ, ಲೋಕ ಸಂಗ್ರಹಕ್ಕಾಗಿ ಆದರ್ಶ ಚೇತನಗಳು ಎದುರಿಸಬೇಕಾದ ಸಮಸ್ಯೆಗಳೂ, ಸವಾಲುಗಳೂ, ಧ್ಯೇಯ ಸಾಧನೆ ಗಾಗಿ ನಡೆಯಲೇಬೇಕಾದ ಹೋರಾಟ ಮತ್ತು ಅಂತಿಮ ವಿಜಯಗಳು – ಇವನ್ನು ಕುರಿತ ಭಾಗ. ಅಂತೂ ಹೋರಾಟ ಸೆಣಸಾಟಗಳೂ, ಸ್ಪರ್ಧೆ ಪೈಪೋಟಿಗಳೂ ತೀವ್ರವಾಗಿ ನಡೆದು ಮಹತ್ತರವೂ ವ್ಯಾಪಕವೂ ಆದ ಬಲಿದಾನದ ಫಲವಾಗಿ ಕಡೆ ಯಲ್ಲಿ ಧರ್ಮ ಸ್ಥಾಪನೆಯಾದ ಬಗೆಯನ್ನೂ ಮಹಾಕೃತಿ ಪ್ರತಿಬಿಂಬಿಸಲೇ ಬೇಕಾದ್ದು ಅನಿವಾರ್ಯ. ಧರ್ಮ ಸ್ಥಾಪನೆಗಾಗಿಯೋ, ಪೂರ್ಣತಾ ಸಿದ್ಧಿ ಗಾಗಿಯೋ ಒಂದಲ್ಲ ಒಂದು ಕಾರಣಕ್ಕಾಗಿ ಮಹಾಕಾವ್ಯದಲ್ಲಿ ಇಂತಹ ಅಂತರಿಕ ಹೋರಾಟವೊಂದು ಅತ್ಯಂತ ಅನಿವಾರ್ಯವಾಗಿರುವುದು ಅರ್ಥಪೂರ್ಣವಾಗಿದೆ. ಇದರ ಅಂತಸತಮ ಗೊತ್ತು ಗುರಿಗಳನ್ನು ಪರಾಮರ್ಶಿಸುವ ನಾವು ಒಡನೊಡನೆಯೇ ಕಾಳಿದಾಸಾದಿ ಮಹಾ ಮೇಧಾವಿಗಳನ್ನೂ ಮುಳುಗಿಸಿದ ಸರ್ಪರಜ್ಜು ಭ್ರಾಂತಿ ಎಂತಹದೆಂಬುದನ್ನು ಮನಗಾಣಬಹುದು

ಆದರ್ಶ ಕೃತಿಯಾದ ವಾಲ್ಮೀಕಿ ರಾಮಾಯಣವನ್ನು ಲಕ್ಷ್ಯವಾಗಿಟ್ಟುಕೊಂಡು ಸಿದ್ಧಪಡಿಸಲ್ಪಟ್ಟಂತಿರುವ ಈ ಪಟ್ಟಿಯನ್ನು ದಾರಿದೀಪವಾಗಿ ಅನುಸರಿಸಿದ ಕವಿ ಪರಂಪರೆ ಹಿಡಿದ ದಾರಿ ಕುತೂಹಲಕರವಾಗಿದೆ ಎನ್ನದೆ ವಿಧಿಯಿಲ್ಲ ಅಲಂಕಾರವೇ ಕಾವ್ಯದ ಜೀವಾಳ ಎಂದದ್ದನ್ನು ಕೇಳಿ ಮರವನ್ನು ಆನೆಗೂ ಆನೆಯನ್ನು ಮರಕ್ಕೂ ಹೋಲಿಸುವುದರಲ್ಲೇ ಕೃತಕೃತ್ಯತೆಯನ್ನು ಕಂಡ ಈ ಕುಶಲಕರ್ಮಿಗಳು ಮಹಾ ಕಾವ್ಯದ ವಿಚಾರದಲ್ಲೂ ಅದನ್ನೇ ಮಾಡಿ ಮುಗಿಸಿದ್ದರಲ್ಲಿ ಏನೇನೂ ಆಶ್ಚರ್ಯವಿಲ್ಲ. ಕಾಳಿದಾಸನ ಅಲಂಕಾರಗಳಿಗೆ ಈ ಮಾತು ಅನ್ವಯಿಸದಿರಬಹುದು. ಆದರೆ ಕಾಳಿದಾಸನ ಉಪಮೆಗಳು ಎಷ್ಟೇ ಲೋಕೋತ್ತರವಾಗಿದ್ದರೂ ಅವುಗಳ ಸೌಂದರ್ಯವು ಅಲಂಕಾರಕ್ಕೆ ಮಾತ್ರ ಸೀಮಿತವಾಗಿದ್ದು ಅವು ಕಾವ್ಯದ ಯಾವುದೇ ಪ್ರಧಾನ ರಸಕ್ಕೂ ಪೋಷಕವಾಗಿಲ್ಲದಿರುವುದು ತೀರ ಸ್ಪಷ್ಟ. ಇನ್ನು ಮಹಾಕೃತಿ ನಾಡಿನ ಸಂಸ್ಕೃತಿಯ ಕಣಜ. ಮಹಾಕವಿ ಅದರಲ್ಲಿ ಜೀವನದ ಮಹೋನ್ನತ ಆದರ್ಶಗಳನ್ನು ಕಂಡರಿಸಲು ತೊಡಗಬೇಕು ಆ ಪ್ರಯತ್ನದಲ್ಲಿ ಆತನು ಅನುಸರಿಸುವ ಮಾರ್ಗ ರಸಾತ್ಮಕವಾದುದಾಗಿರಬೇಕು. ರಸ ಪೋಷಣೆ ಕ್ರಿಯೆಯಿಂದುದ್ಭವಿಸುವ ಚಿಂತನಾಂಶ ದರ್ಶನಾಂಶಗಳಿಗೆ ಪರವಾಗಿದ್ದು ತನ್ನ ಕೈಂಕರ್ಯವನ್ನೆಸಗುವಂತಿರಬೇಕು ಇತ್ಯಾದಿ ಅಂಶಗಳಿಗೆ ವರ್ಣನ ಮಾಲಿಕೆ ಸಾಧಕವಾಗಿದೆಯೋ ಹೊರತು ಬಾಧಕವಾಗಿಲ್ಲದಿರುವುದು ಸ್ವಯಂ ಸಿದ್ಧವಾಗಿದೆ ಆದರೆ, ಕಾವ್ಯದ ಆತ್ಮ ತೇಜಸ್ಸನ್ನು ಕುರಿತು ಹೇಳದೆ ಸೂಚ್ಯವಾಗಿ ಮಾತ್ರ ಹೇಳಿ ಊಹೆಗೇ ಬಿಟ್ಟಂತೆ ತೋರಿದ್ದರಿಂದ ಮೊದಲೇ ಗತಾನುಗತಿಕವಾಗಿದ್ದ ಕವಿ ಪರಂಪರೆ ಸುಲಭೋಪಾಯಗಳನ್ನು ಕಂಡುಕೊಂಡದ್ದು ತೀರ ಸಹಜವೇ ಆಗಿದೆ. ರಸಾದಿಗಳೊಂದನ್ನೂ ಲೆಕ್ಕಿಸದೆ ಮರ ಆನೆಗಳ ಅಲಂಕಾರಗಳನ್ನು ಪುಂಖಾನುಪುಂಖವಾಗಿ ಎಸೆದಂತೆ ಹದಿನೆಂಟು ವರ್ಣನೆಗಳನ್ನೂ ಒಂದಾದ ಮೇಲೊಂದರಂತೆ ಯದ್ವಾ ತದ್ವಾ ತಂದು ತುಂಬುವುದರಲ್ಲೇ ಮಹಾ ಕಾವ್ಯತ್ವವನ್ನು ಕಂಡ ಕವಿಗಳೇ ಹೆಚ್ಚೆಂಬುದನ್ನು ಸಾಹಿತ್ಯಾಭ್ಯಾಸಿಗಳೆಲ್ಲರೂ ಬಲ್ಲರು. ಕಾಳಿದಾಸನಂತಹ ಮಹಾ ಮೇಧಾವಿಯನ್ನೂ ಸಹ ಈ ಜಾಣರ ಗುಂಪಿಗೇ ಸೇರಿಸಬೇಕಾಗಿ ಬಂದದ್ದು ಸನ್ನಿವೇಶದ ಪ್ರಭಾವವೆಷ್ಟೆಂಬುದನ್ನು ತೋರಿಸುತ್ತದೆ ರಘುವಂಶ ಕಾವ್ಯವನ್ನು ಮಹಾಕಾವ್ಯದ ಈ ರೂಪ ರೇಖೆಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದವರಿಗೆ ಅದೆಂತಹ ನಗೆಪಾಟಲ ಕೃತಿ ಎಂಬುದು ತಟ್ಟನೆ ಅರಿವಾಗದಿರದು. ರಘುವಂಶದಲ್ಲಿ ಒಂದೊಂದು ಸರ್ಗವೂ ಇಂತಹ ಒಂದಲ್ಲ ಒಂದು ವರ್ಣನೆಗೇ ಮೀಸಲಾಗಿರುವುದನ್ನು ನೋಡಿದರೆ ಲಾಕ್ಷಣಿಕರು ಹಾಕಿದ ಹೆಗ್ಗುರುತುಗಳ ಯಾಂತ್ರಿಕ ಅನುಸರಣೆಯಿದೆಂಬುದು ವಿದಿತವಾಗುತ್ತದೆ. ಒಂದಾದ ಅನಂತರ ಒಂದರಂತೆ ಹಲವಾರು ರಾಜರುಗಳ ಜೀವಿತದ ಒಂದೋ ಎರಡೋ ಘಟನೆಗಳನ್ನು ಬೇರೆ ಬೇರೆಯಾಗಿ ವರ್ಣಿಸಿದಂತಿರುವ ಈ ಕೃತಿಯಲ್ಲಿ ಸಮಗ್ರತೆ (unity of

action)ಯೇ ಇಲ್ಲ. ಅವರೆಲ್ಲ ಒಂದು ವಂಶಕ್ಕೆ ಸೇರಿದವರೆಂಬುದಷ್ಟರಿಂದಲೇ ಸಮಗ್ರತೆಯನ್ನು ದೊರಕಿಸಬಹುದೆ? ಲಾಕ್ಷಣಿಕರು ಹಾಕಿದ ಲಕ್ಷಣಗಳ ಹೆಗ್ಗುರುತಿನ ಅಂತರಾರ್ಥಕ್ಕೆ ಕವಿ ಕುರುಡಾದದ್ದರ ಸ್ಪಷ್ಟ ನಿದರ್ಶನವಿದು. ಮಹಾಕಾವ್ಯದ ವಸ್ತುವಿನ ಆಯ್ಕೆಯಲ್ಲೇ ಕವಿ ಸೋತು ಹೋಗಿರುವುದನ್ನು ಇಲ್ಲಿ ನಿಚ್ಚಳವಾಗಿ ಮನಗಾಣಬಹುದು. ಶಂಕಾತೀತವಾದ ಕಾಳಿದಾಸನ ಪ್ರತಿಭೆಯೂ ಸಹ ವಸ್ತುವಿನ ಆಯ್ಕೆಯಲ್ಲೇ ಸೋತು ಹೋಗಿ ಪ್ರಥಮ ಚುಂಬನೇ ದಂತಭಗ್ನಂ ಆಗಿದ್ದರಿಂದ ಕೃತಿ ತೊದಲ್ನುಡಿಯಾಗದೇ ಬೇರೆ ಮಾರ್ಗವಿಲ್ಲವಾಯಿತು. ಈ ತೆರನ ಆಯ್ಕೆಗೆ ಆತನ ಉದ್ದೇಶವೂ ಆ ಉದ್ದೇಶಕ್ಕೆ ಸನ್ನಿವೇಶದ ಪ್ರಭಾವವೂ ಕಾರಣವೆನ್ನಬೇಕಾಗುತ್ತದೆ. ಆದ್ದರಿಂದ ಮಹಾ ಕಾವ್ಯವು ರಚನೆಯಲ್ಲಿ ತಕ್ಕ ವಸ್ತುವಿನ ಆಯ್ಕೆಯೇ ಕೃತಿಯ ಮಹೋನ್ನತಿಯನ್ನು ನಿರ್ಣಯಿಸುವ ಮೂಲ ತತ್ತ್ವವೆಂಬುದು ನಿರ್ವಿವಾದವಾಗುತ್ತದೆ. ಕವಿ ಪ್ರತಿಭೆ ಕಾಣಬಲ್ಲ ಕಲ್ಪನಾ ಲೋಕಗಳ ಮಹದ್ದರ್ಶನ ಶೃಂಗಗಳ ಕಂಡರಣೆಗೆ ತಕ್ಕ ದ್ರವ್ಯ ಸಾಮಗ್ರಿ ವಸ್ತು ರಾಶಿಯಲ್ಲಿ ಲಭ್ಯವಿರಬೇಕು. ವಸ್ತುವಿನಲ್ಲಿ ಮೊದಲೇ ಸೊನ್ನೆಯಾಗಿರುವ ಸಾಮಗ್ರಿಯನ್ನು ಕವಿ ಕಾಳಿದಾಸನೇ ಆದರೂ ಹೊರಗಿನಿಂದ ತಂದು ಕೊಡಲಾರ. ಕವಿಯ ಪ್ರತಿಭಾ ಪ್ರಕಾಶವನ್ನು ಧಾರಣೆ ಮಾಡಿ ತಕ್ಕ ಸುಂದರ ಕಲಾ ಸೌಧ ನಿರ್ಮಾಣಕ್ಕೆ ವಸ್ತುವಿನಲ್ಲಿ ಅವಕಾಶವಿದ್ದರೆ ಮಾತ್ರ ಪ್ರತಿಭೆ ಕೃತಕೃತ್ಯತೆಯನ್ನು ಪಡೆಯಲು ಸಾಧ್ಯ. ತನ್ನ ಉದ್ದೇಶಕ್ಕೆ ತಕ್ಕ ವಸ್ತುವಿನ ಆಯ್ಕೆಯಲ್ಲೂ ಪ್ರತಿಭೆಯ ಕ್ಷಕಿರಣವೇ ಕವಿಗೆ ಮಾರ್ಗದರ್ಶಿಯಾಗಬಲ್ಲದೆಂಬುದೂ ಸತ್ಯವೇ ಆದರೂ ಇದೇ ಕವಿಯ ಸೋಲು ಗೆಲುವಿನ ಮರ್ಮಸ್ಥಾನವಾದ್ದರಿಂದ ಪ್ರತಿಭೆ ಇಲ್ಲಿ ಕಿಂಚಿತ್ ತೂಕಡಿಸಿದರೂ, ತೂಕ ತಪ್ಪಿದರೂ ಸಾಕು ಆತನು ಎಂದೆಂದೂ ಮೇಲೇಳಲಾರದ ಪ್ರಪಾತಕ್ಕೆ ಬಿದ್ದುಹೋಗುತ್ತಾನೆ. ಇದಕ್ಕೆ ಕಾಳಿದಾಸನ ರಘುವಂಶವೇ ಶ್ರೇಷ್ಠ ನಿದರ್ಶನ. ರಘುವಂಶದಲ್ಲಿ ಕಾವ್ಯಕ್ಕೆ ಹೊರ ಕವಚದಂತಿರುವ ರಸದ ಹಂತಕ್ಕೇ ತಲಪಲಾರದೆ ಹೋದ ಕವಿ ಇನ್ನು ಚಿಂತನಾಂಶ ದರ್ಶನಾಂಶಗಳ ಗಡಿಯಿಂದ ಎಷ್ಟೋ ದೂರವೇ ಉಳಿದಿರುವ ಕನಿಕರ ಕರಣೀಯಾವಸ್ಥೆಯನ್ನು ಕಾಣುತ್ತೇವೆ.*

ಬರಿಯ ರಸ-ಧ್ವನಿಗಳನ್ನಷ್ಟೇ ಪ್ರತೀತಗೊಳಿಸಬಲ್ಲ ವಸ್ತುವೂ ಸಹ ಮಹಾಕಾವ್ಯದ ಪೂರ್ಣ ತೇಜಸ್ಸನ್ನು ಆವಾಹನೆಗೈಯಲಾರದು. ಸೃಷ್ಟಿ ರಹಸ್ಯ, ವಿಧಿವೈಚಿತ್ರ್ಯ, ವಿಧಿಯ ಸಂಕಲ್ಪದ ಅನಿವಾರ್ಯತೆ, ಅದರ ಅಪ್ರತಿಹತ ಶಕ್ತಿ,

* ಅರ್ಧಮಾತ್ರ ಲಭ್ಯವಿರುವ ಕುಮಾರ ಸಂಭವವನ್ನು ಕುರಿತು ಕೂಲಂಕಷವಾಗಿ ಚರ್ಚಿಸಲು ಸಾಧ್ಯವಿಲ್ಲದ್ದರಿಂದ ರಘುವಂಶಕ್ಕೇ ನಮ್ಮ ಪರಿಶೀಲನೆಯನ್ನು ಮಿತಗೊಳಿಸಬೇಕಾಗುತ್ತದೆ.

ಭೂತ ಭವಿಷ್ಯತ್ ವರ್ತಮಾನಗಳ ರಹಸ್ಯವನ್ನು ಕುರಿತ ಚಿಂತನೆಗೆ ವಸ್ತುವನ್ನೊದಗಿ ಸುವಂತಿರಬೇಕು. ಜನ್ಮಾಂತರಗಳು, ಲೋಕಾಂತರಗಳು, ಪಾಪಪುಣ್ಯ ಪ್ರವಾಹಿಯಾದ ಕರ್ಮ ರಾಶಿಯ ಸ್ವರೂಪ ಮತ್ತು ಅದರ ಸಾಮರ್ಥ್ಯಗಳೆಲ್ಲವನ್ನೂ ಕುರಿತ ತತ್ತ್ವ ಜಿಜ್ಞಾಸೆ, ವಿಚಾರ ಮಂಥನಗಳೂ ಅಲ್ಲಿ ಮೈದಾಳಿ ಬಂದಿರಬೇಕು. ಸೃಷ್ಟಿ ರಹಸ್ಯವನ್ನಾಗಲೀ, ಅವ್ಯಕ್ತ ಶಕ್ತಿಯಾದ ಅತೀಂದ್ರಿಯ ತತ್ತ್ವವನ್ನಾಗಲೀ ಕುರಿತು ಪ್ರಶ್ನೋತ್ತರಗಳ ಮಳೆಗರೆಯಲಾರದವನು ಋಷಿಯಾಗಬಲ್ಲನೆ? ಋಷಿಯಾಗಲಾರದವನು ಇನ್ನು ಕವಿಯಾಗಬಲ್ಲನೆಂತು? ಆದ್ದರಿಂದ ಮಹಾ ಕವಿ ತನ್ನ ಕೃತಿಗೆ ಆರಿಸಿಕೊಳ್ಳುವ ವಸ್ತು ಆತನ ಪ್ರತಿಭಾವೈನತೇಯನ ಹಾರಾಟಕ್ಕೆ ವಿಪುಲಾವಕಾಶವನ್ನೊದಗಿಸಬಲ್ಲ ಆಕಾಶವಾಗಿರಬೇಕಾದದ್ದು ಅನಿವಾರ್ಯ. ಈ ತೆರನ ಪ್ರಸಂಗಗಳೆಲ್ಲವೂ ಒಟ್ಟುಗೂಡಿರದ ಕೃತಿ ಲೋಕತತ್ತ್ವದ ಸಮರ್ಪಕ ಪ್ರತಿನಿಧಿಯಾಗಲಾರದೆಂಬುದು ಗಮನಾರ್ಹವಾದ ಅಂಶ. ಏಕೆಂದರೆ ಇವುಗಳಿಲ್ಲದ ಲೋಕ ತತ್ತ್ವವು ತಿರುಳಿಲ್ಲದ ಬರಿಯ ತೊಗಟೆ ಮಾತ್ರವಾಗುತ್ತದೆ. ಮಹಾ ಕೃತಿ ತನ್ನಲ್ಲೇ ಸ್ವಯಂ ಪರಿಪೂರ್ಣವಾದ ಒಂದು ಲೋಕವಾಗಿರುತ್ತದೆಯೋ ಹೊರತು ಬಹಿರ್ಲೋಕದ ಯಾವುದೋ ಒಂದು ಮುಖದ ಪ್ರತಿನಿಧಿಯಾಗಿರುವುದಿಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯವಾದ ಅಂಶವೆಂದರೆ, ಮೇಲೆ ಸೂಚಿಸಿದ ವಿವರಗಳಲ್ಲಿ ಮುಕ್ಕಾಲು ಮೂರು ವೀಸಪಾಲು ಚಿಂತನಾಂಶ ದರ್ಶನಾಂಶಗಳ ಪ್ರಕಾಶ ಕಾರಣವಾದ ಸಾಮಗ್ರಿಯೇ ಹೊರತು ಭರತ ಸೂತ್ರದ ರಸಾಭಿವ್ಯಂಜಕ ಸಾಮಗ್ರಿಯಲ್ಲ ಎಂಬುದು.

ನಾವರಿಯದ ಶಕ್ತಿಗಳೆಷ್ಟೋ ಲೋಕದ ಕ್ರಿಯಾಪರಂಪರೆಗಳಿಗೆ ಕಾರಣ ಭೂತವಾಗಿ ವರ್ತಿಸುತ್ತವೆಂಬುದನ್ನು ಯಾವ ವಿಜ್ಞಾನಿ ತಾನೆ ಅಲ್ಲಗಳೆಯಬಲ್ಲ? ಇಂದಿನ ವಿಜ್ಞಾನದ ಕಾರ್ಯ ಕಾರಣವಾದದ ತೆಕ್ಕೆಗೊಗ್ಗದ ಎಷ್ಟೆಷ್ಟೋ ಶಕ್ತಿಗಳೂ ತತ್ತ್ವಗಳೂ ಅತೀತವಾದ ಮಹಾಕಾರಣದ ಆಣತಿಯಂತೆ ವರ್ತಿಸುವುದನ್ನು ಅನುಭವವು ಸಾಕ್ಷೀಭೂತವಾಗಿ ಸ್ವೀಕರಿಸುತ್ತದೆ, ಅವನ್ನು ಹಿಂಬಾಲಿಸುವ, ಅಂತಿಂತೆಂದು ಅವನ್ನು ವ್ಯಾಖ್ಯಾನಿಸುವ ಸಾಮರ್ಥ್ಯ ನಮ್ಮೀ ಭೌತ ವಿಜ್ಞಾನಕ್ಕಿಲ್ಲವಾದರೂ, ಈ ಸೂಕ್ಷ್ಮ ಶಕ್ತಿಗಳನ್ನೂ ಇವುಗಳ ಪೈಪೋಟಿಯಲ್ಲಿ ಸಿಕ್ಕು ಬಿರುಗಾಳಿಯಲ್ಲಿ ಸೆಳೆದತ್ತ ತೃಣದಂತೆ ತೇಲಿ ಹೋಗುವ ಈ ಜಗತ್ತನ್ನೂ ದರ್ಶನ ಸಾಹಸಿಯಾದ ಋಷಿ ಮಾತ್ರ ಪರಿಭಾವಿಸಬಲ್ಲನು. ಇದೆಲ್ಲದರ ತಾಕಲಾಟಗಳ ವಿಸ್ಮಯಕರ ಘಟನಾವಳಿಗಳನ್ನು ಚಿತ್ರಿಸಲು ನಮ್ಮ ದೈನಂದಿನ ಬದುಕು ಬಾಳುವೆಗಿಂತಲೂ ಕಲ್ಪನಾರಣ್ಯ ಸದೃಶವಾದ ಪುರಾಣ ಪ್ರಪಂಚವೇ ಸೂಕ್ತ ಸಾಮಗ್ರಿ ಎನಿಸಬಲ್ಲುದೆಂಬುದು ತಜ್ಞರ ಮತ. ಆದ್ದರಿಂದ ಮಹಾಕವಿಯ ಕಲ್ಪನೆ, ಚಿಂತನೆ

ದರ್ಶನ ದೀಧಿತಿಗಳ ಆವಾಹನೆಗೆ ಪುರಾಣ ಪ್ರಪಂಚವು ನಮ್ಮೀ ವ್ಯಾವಹಾರಿಕ ಜಗತ್ತಿಗಿಂತ ಹೆಚ್ಚು ಅರ್ಹವೆನಿಸುತ್ತದೆ. ಸಾಮಾಜಿಕ ಘಟನಾ ಪರಂಪರೆಗಳ ಆಗರವಾದ ಒಂದು ಕಾದಂಬರಿಯ ವಸ್ತುವನ್ನು ಮಹಾಕಾವ್ಯ ಭೂಮಿಕೆಗೇರಿಸ ಹೊರಡುವುದರಲ್ಲಿ ಎಂತಹ ಅಪಾಯವಿದೆ ಎಂಬುದನ್ನು ಅನುಭವಿಗಳು ಬಲ್ಲರು. ಸಾಮಾಜಿಕ ಕಾದಂಬರಿ ನೆಲವನ್ನು ಬಿಟ್ಟು ಮೇಲೇಳಲಾರದು. ನೆಲವನ್ನು ಬಿಟ್ಟು ಮೇಲೇರಬಲ್ಲ, ಗಗನಗಾಮಿಯಾಗಬಲ್ಲ ಸಾಮರ್ಥ್ಯವೇ ಆ ವಸ್ತುವಿನಲ್ಲಿದ್ದಂತೆ ತೋರುವುದಿಲ್ಲ ಎಂಬ ವಿಚಾರವಾದಿಗಳ ಅಭಿಪ್ರಾಯಕ್ಕೆ ಮೇಲಿನ ಅಂಶಗಳೇ ಕಾರಣ. ಏಕೆಂದರೆ ದೈನಂದಿನ ಬಾಳಿನಲ್ಲಿ ಚಿಂತನಾಂಶ ಪ್ರಚೋದಕವಾದ ಈ ಅಂಶಗಳ ವ್ಯವಹರಣೆ ಅತ್ಯಲ್ಪವಾಗಿರುವುದೇ ಇದಕ್ಕೆ ಪ್ರಬಲ ಕಾರಣ. ಆದ್ದರಿಂದ ವಸ್ತುವಿನಲ್ಲಿ ಸ್ವಯಂ ಭೂತವಾಗಿರುವ ಆಳವೈಶಾಲ್ಯಗಳೂ ಮುಗಿಲು ಮುಟ್ಟಬಲ್ಲ ಮಹೋನ್ನತಿಯೂ ಇದ್ದರೆ ಮಾತ್ರ ಕವಿಯು ಕಲಾ ಮಂದಿರ ನಿರ್ಮಿತಿಗೆ ಅಲ್ಲಿ ಅವಕಾಶವೊದಗಬಲ್ಲದು. ಈ ಕಾರಣದಿಂದಲೇ ಮಹಾಕವಿ ಮಹಾಕಾವ್ಯವನ್ನು ಸೃಷ್ಟಿಸುತ್ತಾನೆನ್ನುವುದಕ್ಕಿಂತ ಮಹಾಕಾವ್ಯವೇ ಮಹಾಕವಿಯನ್ನು ಸೃಷ್ಟಿಸುತ್ತದೆ ಎಂಬ ಮಾತು ಸಾರ್ಥಕತೆಯನ್ನು ಪಡೆಯುತ್ತದೆ. ಮಹತ್ತು ವಸ್ತುವಿನಲ್ಲಿ ರೂಢ ಮೂಲವಾಗಿಲ್ಲದಿದ್ದಲ್ಲಿ ಕವಿಯ ಪ್ರತಿಭಾ ದ್ಯುತಿ ಅವನ್ನು ಹೊರಗಿನಿಂದ ತಂದು ತುಂಬಲಾರದು. ಆದ್ದರಿಂದ ಕಲಾಸತ್ತೆಯ ಪರಮ ಗುರು ಶಿಲಾಸತ್ತೆಯೇ ಆಗಿರುತ್ತದೆಂಬುದು ಗಮನಾರ್ಹವಾದ ಅಂಶ. ಮೊದಲೇ ವಸ್ತುವಿನಲ್ಲಡಗಿರುವ ಗಗನೋನ್ನತಿ ವಿಯದ್ ವಿಸ್ತರತೆಗಳೂ ಸಮುದ್ರ ಗಾಂಭೀರ್ಯ ಗಭೀರತೆಗಳೂ ಕೃತಿಯಲ್ಲಿ ಮೈದೋರಬಹುದಾದರೆ ಮಾತ್ರ ಅದರಲ್ಲಿ ಮಹತ್ತು ಆವಿರ್ಭವಿಸಬಲ್ಲುದೆಂಬುದು ಇದರಿಂದ ಸಿದ್ಧಾಂತವಾಗುತ್ತದೆ.

ಈಗ ಜಾಗ್ರತ್ ಪ್ರಜ್ಞರಾಗಿ ಮತ್ತೊಮ್ಮೆ ಮೊದಲಿನ ಪ್ರಶ್ನೆಯನ್ನು ಅರಿಯ್ಯುವ ಮನಸ್ಸಾಗುತ್ತದೆ. ಕಾವ್ಯದ ಮಹತ್ತನ್ನು ಹೈಮಾಚಲೋನ್ನತವಾಗಿ ರಾಶಿಗೈಯುವ ಚಿಂತನ, ದರ್ಶನ, ಭವ್ಯತೆ, ಭೂಮತ್ವಗಳು "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್" ನಿಷ್ಪನ್ನವಾಗುವ ಭರತ ಸೂತ್ರದ ರಸದಿಂದ ಸಂಜನಿಸಬಲ್ಲವೆ ? ಲೌಕಿಕ ಭಾವ ಜನ್ಯವಾದ ಈ ರಸವು ಅಲೋಕ ಭವ್ಯವೆನಿಸುವ ಆ ಅನುಭೂತಿ ಪಾರಮ್ಯವನ್ನು ಪ್ರತೀತಗೊಳಿಸುವ, ರಾಶಿಗೈಯುವ ಸಾಧ್ಯತೆಯುಂಟೆ ? ಎಂಬೀ ಪ್ರಶ್ನೆಗಳು ರಸವನ್ನು ಸಾರ್ವಭೌಮತ್ವದ ಗದ್ದುಗೆಯಿಂದ ಚ್ಯುತಗೊಳಿಸಿ ಅದನ್ನು ಚಿಂತನ, ದರ್ಶನ, ಭವ್ಯತೆ, ಭೂಮತ್ವಗಳ ಕಿಂಕರ ಮಾತ್ರನನ್ನಾಗಿ ನಿಯಮಿಸುತ್ತವೆ. ಆಗ ಕಾವ್ಯ ಮೀಮಾಂಸೆಯು ನವೋ ನವ್ಯ ಭೂಮಿಕೆಯೊಂದರಲ್ಲಿ ನಾವು ಪದಾರ್ಪಣ ಮಾಡುತ್ತೇವೆ. ಈ ನೂತನ ಭೂಮಿಕೆಗೇರಿದ

ನಮಗೆ "ರಸವು ಸರ್ವ ಪ್ರಯೋಜನ ಮೌಲೀಭೂತ" ಎಂಬ ಸಿದ್ಧಾಂತವು ಸಮಂಜಸವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ಸಾವಿರ ವರ್ಷಗಳಿಂದ ಸಾರಸ್ವತ ಲೋಕವನ್ನು ಬೆಳಗುತ್ತಾ ಬಂದಿರುವ ಆನಂದವರ್ಧನ, ಅಭಿನವಗುಪ್ತ ಪಾದರ ರಸ-ಧ್ವನಿ ಸಿದ್ಧಾಂತವು ಈ ಹೊಸ ಸಿದ್ಧಾಂತದ ಹೊಂಬೆಳಗಿನಲ್ಲಿ ಈಗಲೀಗ ಗತಗಾಲಕ್ಕೆ ಸರಿದಂತೆ (out of date) ಆಗುತ್ತದೆ.

—0—

# ಶೀಲಾಂಕನ 'ಚಉಪ್ಪನ್ನ ಮಹಾಪುರಿಸ ಚರಿಯಂ'

—ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರಿ

ಶೀಲಾಂಕ (= ಶೀಲಾಚಾರ್ಯ) 'ಚಉಪ್ಪನ್ನ ಮಹಾಪುರಿಸ ಚರಿಯಂ' ಎಂಬ ಮಹಾಪುರುಷ ಚರಿತವ ಎಂದರೆ ಮಹಾ ಪುರಾಣದ ಕರ್ತೃ. ಇದರ ಕಾಲ ಕ್ರಿ. ಶ. ೮೬೮. ಕವಿ ತನ್ನ ಹೆಸರನ್ನು ಶೀಲಾಂಕ, ಸೀಲಂಕ, ವಿಮಲಮತಿ, ಸೀಲಾಯರಿಯ ಎಂದು ವಿವಿಧವಾಗಿ ಹೇಳಿಕೊಂಡಿದ್ದಾನೆ. ಈತನ ಗುರು ನಿರ್ವೃತಿ ಕುಲದ ಮಾನದೇವ ಸೂರಿಯೆಂದು ಗ್ರಂಥಾಂತ್ಯದ ಸಂಕ್ಷಿಪ್ತ ಭಾಗದಿಂದ ತಿಳಿಯುತ್ತದೆ. ಕವಿಯ ವಿಚಾರ ನಮಗೆ ಹೆಚ್ಚೇನೂ ತಿಳಿಯದು

ಚ.ಮ.ಚ. ಪ್ರಾಕೃತ ಭಾಷೆಯ ಪುರಾಣ ಜೈನ ಪುರಾಣವೆಂಬುದು ವಿದಿತ. ಕೃತಿ ಗದ್ಯ ಪದ್ಯಾತ್ಮಕವಾದುದು ; ಚಂಪುವೆಂದೇ ಹೇಳಬಹುದು. ಪದ್ಯಗಳಲ್ಲಿ ಹೆಚ್ಚು ಪಾಲು ಆರ್ಯಾ ಛಂದಸ್ಸಿನಲ್ಲಿದೆ. ಅಲ್ಲಲ್ಲಿ ದಂಡಕಾದಿಗಳೂ ಇವೆ. ಗದ್ಯ ಪದ್ಯಬಂಧಿಯಾಗಿ ಸಾಗುವುದುಂಟು. ಪದ್ಯ ಪ್ರಮಾಣ, ಒಂದು ಎಣಿಕೆಯಂತೆ ೧೦,೮೦೦. ಗ್ರಂಥದಲ್ಲಿ 'ವಿಬುಧಾನಂದ ನಾಟಕ' ಎಂಬ ಸಂಸ್ಕೃತ ನಾಟಕ ಕೃತಿಯ ಅಂಗವಾಗಿಯೇ ಸೇರಿಕೊಂಡು ಬಂದಿದೆ. ಇದು ಪ್ರಾಚೀನ ಸಾಹಿತ್ಯದಲ್ಲಿಯೇ ಅಪೂರ್ವವಾದುದು. ಅಲ್ಲಲ್ಲಿ ಅಪಭ್ರಂಶ ಭಾಷೆಯ ಸುಭಾಷಿತಗಳೂ ಇದ್ದು, ಪದ್ಯ ಭಾಗದ ಸುಭಾಷಿತ ಗಾದೆಗಳು ಅನೇಕ ವಿಷಯಗಳಿಗೆ ಸಂಬಂಧಿಸಿ ವಿಪುಲವಾಗಿವೆ. ಅಪೂರ್ವವಾಗಿ ಪ್ರಾಕೃತ ಭಾಷೆಯ ಚಿತ್ರ ಕಾವ್ಯದ ಮಾದರಿಗಳಿಗೂ ಇಲ್ಲಿ ಲಕ್ಷ್ಯಗಳುಂಟು (೨೦-೨೧)

ಜೈನ ಆಗಮದ ಸಮವಾಯಾಂಗದಲ್ಲಿಯ ಸೂತ್ರ ೫೪ ರಲ್ಲಿ ೫೪ ಮಂದಿ ಉತ್ತಮ ಪುರುಷರನ್ನು ಉಲ್ಲೇಖಿಸಿದ್ದು, ಅವರ ಚರಿತ್ರೆಯೇ ಶೀಲಾಂಕನ ಗ್ರಂಥದಲ್ಲಿ ಸಹ ಬರುತ್ತದೆ. ಆದರೆ ಕಥಾ ವಸ್ತು ಯಾವ ಮೂಲದಿಂದ ದೊರೆಯಿತೆನ್ನುವುದು ಖಚಿತವಾಗಿ ತಿಳಿಯದು. ಆ ಮಹಾಪುರುಷರೆಂದರೆ : ಋಷಭಸ್ವಾಮಿ, ಭರತ ಚಕ್ರವರ್ತಿ, ಅಜಿತ ಸ್ವಾಮಿ, ಸಗರ ಚಕ್ರವರ್ತಿ, ಸಂಭವ ತೀರ್ಥಂಕರ, ಅಭಿನಂದನಸ್ವಾಮಿ, ಸುಮತಿಸ್ವಾಮಿ, ಪದ್ಮಪ್ರಭಸ್ವಾಮಿ, ಸುಪಾರ್ಶ್ವಸ್ವಾಮಿ. ಚಂದ್ರಪ್ರಭಸ್ವಾಮಿ, ಪುಷ್ಪದಂತಸ್ವಾಮಿ, ಶೀತಲಸ್ವಾಮಿ, ಶ್ರೇಯಾಂಸಸ್ವಾಮಿ,

ತ್ರಿಪೃಷ್ಠ ವಾಸುದೇವ, ಅಚಲ ಬಲದೇವ, ವಾಸು ಪೂಜ್ಯಸ್ವಾಮಿ, ದ್ವಿಪೃಷ್ಠ ವಾಸುದೇವ, ವಿಜಯ ಬಲದೇವ, ವಿಮಲಸ್ವಾಮಿ, ಸ್ವಯಂಭು ವಾಸುದೇವ, ಭದ್ರ ಬಲದೇವ, ಅನಂತಜಿತ್ ತೀರ್ಥಂಕರ, ಪುರುಷೋತ್ತಮ ವಾಸುದೇವ, ಸುಪ್ರಭ ಬಲದೇವ, ಧರ್ಮ ತೀರ್ಥಕರ, ಪುರುಷಸಿಂಹ ವಾಸುದೇವ, ಸುದರ್ಶನ ಬಲದೇವ, ಮಘವ ಚಕ್ರವರ್ತಿ, ಸನತ್ಕುಮಾರ ಚಕ್ರವರ್ತಿ, ಶಾಂತಿಸ್ವಾಮಿ ತೀರ್ಥಕರ ಚಕ್ರವರ್ತಿ, ಕುಂಥುಸ್ವಾಮಿ ತೀರ್ಥಕರ ಚಕ್ರವರ್ತಿ, ಅರಸ್ವಾಮಿ ತೀರ್ಥಕರ ಚಕ್ರವರ್ತಿ, ಪುಂಡರೀಕ ವಾಸುದೇವ, ಆನಂದ ಬಲದೇವ, ಸುಭೂಮ ಚಕ್ರವರ್ತಿ, ದತ್ತವಾಸುದೇವ, ನಂದಿಮಿತ್ರ ಬಲದೇವ, ಮಲ್ಲಿಸ್ವಾಮಿ, ಮುನಿಸುವ್ರತಸ್ವಾಮಿ, ಮಹಾಪದ್ಮ ಚಕ್ರವರ್ತಿ, ರಾಮ ಬಲದೇವ, ಲಕ್ಷ್ಮಣ ವಾಸುದೇವ, ನಮಿಸ್ವಾಮಿ, ಹರಿಷೇಣ ಚಕ್ರವರ್ತಿ, ಜಯ ಚಕ್ರವರ್ತಿ, ಅರಿಷ್ಟನೇಮಿ, ಕೃಷ್ಣ ವಾಸುದೇವ, ಬಲದೇವ, ಬ್ರಹ್ಮದತ್ತ ಚಕ್ರವರ್ತಿ, ಪಾರ್ಶ್ವಸ್ವಾಮಿ, ವರ್ಧಮಾನಸ್ವಾಮಿ.

ಈ ಉತ್ತಮ ಪುರುಷರಲ್ಲಿ ಶಾಂತಿ, ಕುಂಥು ಮತ್ತು ಅರ ತೀರ್ಥಂಕರರು ಚಕ್ರವರ್ತಿಗಳೂ ಆಗಿದ್ದುದನ್ನು ನೆನೆವರೆ, ಸಂಖ್ಯೆಯ ದೃಷ್ಟಿಯಿಂದ ೫೧ ಜನರಾಗುತ್ತಾರೆ.

ಈ ಮಹಾ ಪುರುಷರ ವ್ಯೂಹದಲ್ಲಿ ವರ್ತಮಾನ ಕಾಲದ ಅವಸರ್ಪಿಣಿಯ ದುಷ್ಷಮ-ಸುಷಮ ಕಾಲದಲ್ಲಿ ಭರತ ಕ್ಷೇತ್ರದಲ್ಲಿ ಜನಿಸಿದ ೨೪ ಜನ ತೀರ್ಥಂಕರರು, ೧೨ ಜನ ಚಕ್ರವರ್ತಿಗಳು, ೯ ಜನ ಬಲದೇವರು ಮತ್ತು ೯ ಜನ ವಾಸುದೇವರು ಸೇರಿದ್ದಾರೆ. ೯ ಜನ ಪ್ರತಿ ವಾಸುದೇವರನ್ನು ಕೈಬಿಡಲಾಗಿದೆ. ಇವರ ಚರಿತ್ರೆಗಳಲ್ಲಿ ಕೆಲವು ತುಂಬ ದೊಡ್ಡವು ; ಇನ್ನು ಕೆಲವು, ಸ್ವಲ್ಪ ಸಾಲುಗಳಲ್ಲಿಯೇ ಮುಗಿದು ಹೋಗುವಷ್ಟು ಚಿಕ್ಕವು. ಉದಾಹರಣೆಗೆ ; ೪ನೆಯ ಪ್ರಕರಣವಾದ ಸಗರ ಚಕ್ರವರ್ತಿಯ ಚರಿತೆ ೧೪೯ ಪದ್ಯಗಳು ಮತ್ತು ಹಲವು ಸುದೀರ್ಘ ಗದ್ಯ ಭಾಗಗಳಿಂದ ಕೂಡಿ ವಿಸ್ತಾರವಾಗಿದ್ದರೆ, ೪೩ ನೆಯ ಮಹಾಪದ್ಮ ಚಕ್ರವರ್ತಿಯ ಚರಿತೆ ೮ ಗದ್ಯ ವಾಕ್ಯಗಳಲ್ಲಿ ಮುಗಿದು ಹೋಗಿದೆ. ೪೪-೪೫ ನೆಯ ರಾಮ ಬಲದೇವ, ಲಕ್ಷ್ಮಣ ವಾಸುದೇವರ ಚರಿತ್ರೆಗಳಂತಹ ಗಣ್ಯವಾದ ಭಾಗಗಳು ಒಟ್ಟಿಗೆ ೬ ಸಾಲು ಗದ್ಯ, ೨೯ ಪದ್ಯಗಳಲ್ಲಿ ಪೂರೈಸಿದೆ. ಈಗ ಹೇಳಿರುವುದಕ್ಕಿಂತ ಬಲು ದೊಡ್ಡ ಹಾಗೂ ಬಲು ಚಿಕ್ಕ ಕಥಾ ಭಾಗಗಳಿವೆಯೆಂಬುವುದೂ ಗಮನಿಸಬೇಕಾದುದು. ಕನ್ನಡದಲ್ಲಿ ಕವಿ ಜನಪ್ರಿಯವಾದ ನೇಮಿನಾಥ ತೀರ್ಥಂಕರನ ಕಥೆ ಕೃಷ್ಣ ಬಲದೇವರ ಕಥೆಯೊಡಗೂಡಿ (೪೯-೫೧) ಸಾಕಷ್ಟು ವಿಸ್ತಾರವಾಗಿರುವುದನ್ನು ವಿಶೇಷವಾಗಿ ಗಮನಿಸಬೇಕು. ಇಲ್ಲಿ ಹಲವು ಗದ್ಯ ಭಾಗಗಳ ಹಾಗೂ ೩೦

ಪದ್ಯಗಳಲ್ಲಿ ವ್ಯಾಪ್ತವಾದ ಕಥಾ ಪುಷ್ಟಿಯಿದೆ. ಈ ಮಹಾ ಪುರುಷರ ಕಥೆಗಳೊಡಗೂಡಿ ಅನ್ಯ ವ್ಯಕ್ತಿಗಳ ಸಂಬಂಧವಾದ ಅವಾಂತರ ಕಥೆಗಳೂ ನೀತಿ ಬೋಧೆಗಾಗಿ ಸೇರಿಕೊಂಡು ಬಂದಿವೆ.

ಕೃತಿ ಒಬ್ಬೊಬ್ಬ ಮಹಾ ಪುರುಷನ ಇಲ್ಲವೆ ತೀರ್ಥಂಕರ-ಬಲದೇವ ವಾಸುದೇವರ ಕಥೆಗಳೊಡಗೂಡಿ ಮೂವರು ಮಹಾ ಪುರುಷರ ಚರಿತ್ರೆಗಳಾಗಿ ವಿಭಜಿಸಲ್ಪಟ್ಟಿದೆ. ಆದರೆ ಸರ್ಗಗಳಾಗಿಯೋ ಸಂಧಿಗಳಾಗಿಯೋ ವಿಭಾಗಗೊಂಡಿಲ್ಲ. ಸಮೀಪ ಸಂಬಂಧವಿದ್ದಲ್ಲದೆ ಕಥೆಗಳನ್ನು ಬೆರಸುವುದಿಲ್ಲ. ಅನಂತರದ ಸಂಸ್ಕೃತ ಮಹಾಪುರಾಣ ಗ್ರಂಥಗಳಲ್ಲಿ ಕಂಡು ಬರುವಂತೆ ತೀರ್ಥಂಕರನ ಭವಾವಳಿಯ ಕಥೆಗಳು, ಪಂಚ ಕಲ್ಯಾಣಗಳು ಇವುಗಳ ನಿರೂಪಣೆಯಲ್ಲಿ ಒಂದು ಕ್ರಮ, ಅಚ್ಚುಕಟ್ಟು ಕಾಣಿಸುವುದಿಲ್ಲ. ಲೋಪಗಳಂತೂ ಸಾಮಾನ್ಯ. ಉದಾಹರಣೆಗೆ : ಪುಷ್ಪದಂತ ಶೀತಲನಾಥ ಮೊದಲಾದವರ ಪೂರ್ವಭವ ವೃತ್ತಾಂತಗಳೂ ಋಷಭದೇವನ ಪರಿನಿರ್ವಾಣ ಮತ್ತು ನೇಮಿನಾಥನ ಜನ್ಮಾಭಿಷೇಕ ಕಲ್ಯಾಣಗಳೂ ಬಿಟ್ಟು ಹೋಗಿವೆ. ಪಾತ್ರ ಸೃಷ್ಟಿಯಲ್ಲಿ ಸ್ವಭಾವಾವಿಷ್ಕರಣದ ದೃಷ್ಟಿ ಕೊಂಚ ಇದೆ ಎಂಬುದು ಮೆಚ್ಚತಕ್ಕುದಾದರೂ, ಕಥಾ ಸಂಬಂಧವಾದ ಇಂತಹ ಲೋಪಗಳ ಸಮರ್ಥನೆ ಕಷ್ಟವಾಗುತ್ತದೆ.

ಪ್ರಸ್ತುತ, ಚಿಕ್ಕದಾದ ಪುಷ್ಪದಂತ ತೀರ್ಥಂಕರನ ಕಥೆಯನ್ನು ಲಕ್ಷಿಸಿ, ಚ.ಮ.ಚ.ದ ಪ್ರತ್ಯೇಕತೆಯನ್ನು ಇಲ್ಲಿ ಗಮನಿಸಬಹುದು.

ಒಟ್ಟು ಕಥೆ ಒಂದು ಪದ್ಯ ಮತ್ತು ಕೆಲವು ಗದ್ಯವಾಕ್ಯಗಳಲ್ಲಿ ಮುಗಿದಿದೆ. ಈ ತೀರ್ಥಂಕರನು ಭಾರತ ವರ್ಷದ ಕಾಯಂದೀ ನಗರದ ರಾಜದ ದಂಪತಿಗಳಾದ ಸುಗ್ರೀವ-ರಾಮಾ ಮಹಾದೇವಿಯರಿಗೆ ಹುಟ್ಟಿದನೆಂದೂ ಜಿನ ಜನನಿ ಚತುರ್ದಶ ಸ್ವಪ್ನಗಳನ್ನು ಕಂಡ ಮೇಲೆ ವೈಜಯಂತಿ ವಿಮಾನದ ದೇವನು ಆಕೆಗೆ ಪುತ್ರನಾಗಿ ಜನಿಸಿದನೆಂದೂ ಕುಮಾರ ಕಾಲಾದಿಗಳನ್ನು ಯಥಾಕ್ರಮದಲ್ಲಿ ಕಳೆದ ಮೇಲೆ ಸಮ್ಮೇದ ಗಿರಿಯಲ್ಲಿ ಭಾದ್ರಪದ ಶುದ್ಧ ನವಮಿಯಂದು ಮೃಗಶಿರಾ ನಕ್ಷತ್ರವಿದ್ದಾಗ ಪರಿ ನಿರ್ವಾಣ ಪೈದಿದನೆಂದೂ ಇಲ್ಲಿ ಹೇಳಿದೆ. ಹೆಚ್ಚಿನ ಕಥಾಂಶಗಳೇನೂ ಇಲ್ಲ. ಆದರೆ ಗುಣಭದ್ರರ 'ಉತ್ತರ ಪುರಾಣ'ದಲ್ಲಿ ಇದೇ ಕಥೆ ೬೨ ಪದ್ಯಗಳಲ್ಲಿ ಬಂದಿದೆ. ಪುಷ್ಪದಂತನ ಪೂರ್ವಭವದ ಮಹಾ ಪದ್ಮರಾಜನ ಕಥೆ ಉಚಿತ ಕಥಾಂಶಗಳಿಂದ ಇಲ್ಲಿ ನಿರೂಪಿತವಾಗಿದೆ. ಅಲ್ಲದೆ ಪುತ್ರನಾಗಿ ಜನಿಸಿದವನು ಪ್ರಾಣತೇಂದ್ರನೆಂದಿದೆ. ತಾಯಿ ಜಯರಾಮಾದೇವಿಯೆಂದೂ ಆಕೆ ಷೋಡಶ ಸ್ವಪ್ನ ಕಂಡಳೆಂದೂ ಹೇಳಿದೆ. ಚ.ಮ.ಚ.ದಲ್ಲಿ ಪುತ್ರೋತ್ಪತ್ತಿ ಮಾರ್ಗಶಿರ ಬಹುಲ ಪಂಚಮಿ ಮೂಲ ನಕ್ಷತ್ರದಲ್ಲಿ

ಎಂದಿದ್ದರೆ, ಉತ್ತಪು.ದಲ್ಲಿ ಮಾರ್ಗಶಿರ ಶುಕ್ಲ ಚೈತ್ರಯೋಗದಲ್ಲಿ ಎಂದಿದೆ ಜನನ ಪರಿನಿಷ್ಕ್ರಮಣ, ಹೇಮವಾದ ಉಲ್ಕಾಪಾತವೂ ವೈರಾಗ್ಯ ಪರಿಭಾವನೆಯೂ ಉತ್ತಪು.ದಲ್ಲಿ ಮಾತ್ರವೇ ಇದೆ. ಹೇಮಚಂದ್ರನ ತ್ರಿಷಷ್ಟಿ ಶಲಾಕಾ ಪುರುಷ ಚರಿತ'ದಲ್ಲಿ ಕೆಲವು ಕಥಾಂಶಗಳ ವ್ಯತ್ಯಾಸವಿದ್ದೂ ಚ.ಮ.ಚ ದ ನಿರೂಪಣೆಯೊಂದಿಗೆ ಇಲ್ಲಿ ಹೆಚ್ಚಿನ ಸಾಮ್ಯವಿದೆ. ಸುವಿಧಿನಾಥ ಚರಿತ್ರವೆಂದು ಇಲ್ಲಿ ಇದನ್ನು ಕರೆದಿದೆ.

ಇಲ್ಲಿಯೇ ಸೂಚಿಸಬಹುದಾದರೆ, ಕನ್ನಡ ಚಾವುಂಡರಾಯ ಪುರಾಣದಲ್ಲಿ ಇದೇ ಕಥೆ ಸಣ್ಣ ಪುಟ್ಟ ವ್ಯತ್ಯಾಸಗಳು ಹೊರತು ಉತ್ತಪು.ದ ದಾರಿಯಲ್ಲೇ ಇದೆ. ಆದರೆ ಸಂಕ್ಷೇಪವಾಗಿದೆ, ಅಷ್ಟೆ. ಇಮ್ಮಡಿ ಗುಣವರ್ಮನಾದರೋ ಉತ್ತಪು.ದ ಕಥಾ ಮೂಲದ ಜಿನುಗನ್ನು ಸ್ಫೋತವಾಗಿ ವಿಶಾಲಗೊಳಿಸಿ ೧೪ ಆಶ್ವಾಸಗಳ ಮಹಾಕಾವ್ಯವಾಗಿ ಪರಿವರ್ತಿಸಿದ್ದಾನೆ. ಇಲ್ಲಿ ಪೂರ್ವಭವದ ಮಹಾಪದ್ಮನ ಕಥೆ ಪುಷ್ಟವಾಗಿದ್ದು, ಆದರ ಮೂಲ ಪದ್ಯದಲ್ಲಿ ಕುತೂಹಲಕರ ಸಂಶೋಧನೆಯ ವಿಷಯವಾಗಿದೆ.

ಇನ್ನು ನೇಮಿಚರಿತ್ರೆಯನ್ನು ಗಮನಿಸಿದರೆ, ಹೇಮಚಂದ್ರಾದ್ಯರಲ್ಲಿ ಕಂಡು ಬರುವ ಕೆಲವು ನೇಮಿಕಥಾಂಶಗಳು ಶೀಲಾಂಕನಲ್ಲಿಲ್ಲ ಅವುಗಳಲ್ಲಿ ಮುಖ್ಯವಾದವು ಕೃಷ್ಣನ ಉಪಾಖ್ಯಾನ, ಪ್ರದ್ಯುಮ್ನ ಶಾಂಬರ ಚರಿತ್ರೆಗಳು. ವಸುದೇವ ಲೀಲಾ ವಿಚಾರ ಕಥನ, ದ್ವಾರವತೀ ನಿರ್ಮಾಣ ಪರ್ಯಂತವಾದ ಕೃಷ್ಣಕಥೆ ಇವು ಕ್ರಮವಾಗಿ ೧ ಚೂರು ಗದ್ಯ ಮತ್ತು ೯ ಗಾಥೆ, ಹಾಗೂ ೨೪ ಗಾಥೆಗಳಲ್ಲಿ ಮುಗಿದು ಹೋಗಿವೆ. ಕೊನೆಯ ಭಾಗವನ್ನುಳಿದು, ಹರಿವಂಶ ಕಥಾ ನಿರೂಪಣೆಯಲ್ಲಿ ಶೀಲಾಂಕ ಹೇಮಚಂದ್ರರಿಗೆ ಗಮನಾರ್ಹ ವ್ಯತ್ಯಾಸಗಳಿವೆ. ಕೆಲವೆಡೆಗಳಲ್ಲಿ ಚ.ಮ ಚ. ಶ್ವೇತಾಂಬರ ಸಂಪ್ರದಾಯವನ್ನು ಬಿಟ್ಟು ಒಂದೋ ಹಲವೋ ದಿಗಂಬರ ಸಂಪ್ರದಾಯದ ಕೃತಿಗಳನ್ನು ಅನುಸರಿಸಿದ್ದರೂ, ಒಟ್ಟನಲ್ಲಿ ಆದರ ಹರಿವಂಶ ಭಾಗ ಶ್ವೇತಾಂಬರ ಸಂಪ್ರದಾಯದ್ದೆಂದು ಕ್ಲಾಸ್ ಬ್ರೂನ್ ಭಾವಿಸುತ್ತಾರೆ.

—o—

# ವೇದ-ಪುರಾಣ-ಮಹಾಕಾವ್ಯ

— ಶಂಕರಮೊಕಾಶಿ ಪುಣೇಕರ

ಇಪ್ಪತು-ಮೂವತ್ತು ವರ್ಷಗಳ ಕೆಳಗೆ ಹರಪ್ಪಾಮೊಹೆಂಜೊದಾರೋ ಸಂಸ್ಕೃತಿಯ ಕಾಲ ಸುಮಾರು ಕ್ರಿ. ಪೂ 2000 ವೆಂದು ಉತ್ಖನನ ಶಾಸ್ತ್ರಜ್ಞರು ನಂಬಿದ್ದರು. ಆಗ ರೇಡಿಯೋಕಾರ್ಬನ್ ಪದ್ಧತಿ ಬಳಕೆಯಲ್ಲಿ ಬಂದಿದ್ದಿಲ್ಲ. 1946ರಲ್ಲಿ ಉತ್ಖನನ ಮಾಡಿದ ಮಾರ್ಟಿಮರ ವ್ಹೀಲರರು ಹರಪ್ಪಾ ಸಂಸ್ಕೃತಿಯ ಕಾಲವನ್ನು ಕ್ರಿ. ಪೂ. 2500-1500 ಎಂದು ನಿರ್ಣಯಿಸಿದ್ದರು. ಅದಕ್ಕೂ ಮುಂಚೆ ಜಾನ್ ಮಾರ್ಷಲರು ಕ್ರಿ. ಪೂ. 33250-2750 ಎಂದು ನಿರ್ಣಯಿಸಿದ್ದರು. ರೇಡಿಯೋ ಕಾರ್ಬನ್ ಪದ್ಧತಿ ಬಂಧ ಮೇಲೆ ನಡೆದ ಉತ್ಖನನವ ಪ್ರಕಾರ ಹರಪ್ಪಾ-ಮೊಹೆಂಜೊದಾರೋ ಕಾಲವು ಕ್ರಿ. ಪೂ 7000 ವೆಂದು ನನಗೆ ಅನಿಸುತ್ತದೆ. ಬಲೂಚಿಸ್ತಾನದ ಮೆಹರಘರ್ ಎಂಬ ಸ್ಥಾನದಲ್ಲಿ ಸಿಕ್ಕಿದ ಪ್ರಾಚೀನ ವಸ್ತುಗಳ ಪರೀಕ್ಷಣರಿಂದ ಇದರ ಕಾಲವನ್ನು ಸು. ಕ್ರಿ. ಪೂ. 11000 ವರ್ಷವೆಂದೂ, ಆಗ ಮಣ್ಣಿನ ಪಾತ್ರೆ ಮಾಡುವ ಕಲೆ ಇನ್ನೂ ಬೆಳೆದಿರಲಿಲ್ಲವೆಂದೂ (aceramic) ಇದೇ ಬೆಳೆದು ಹರಪ್ಪಾ-ಮೊಹೆಂಜೊದಾರೋ ಸಂಸ್ಕೃತಿಯಾಗಿ ಕ್ರಿ. ಪೂ. 3½ ಸಾವಿರ ವರ್ಷಕ್ಕೆ ರೂಪುಗೊಂಡಿತೆಂದೂ ಜಾರಿಜ್ (Jarrige) ಎಂಬ ಸಂಶೋಧಕನು ಪ್ರತಿಪಾದಿಸಿದ್ದಾನೆ. ಅವನ ಅಭಿಪ್ರಾಯ ವ್ಯಾಪಕವಾಗಿ ಇತ್ತೀಚೆಗೆ ಸರ್ವ ಸಮ್ಮತವಾಗಿದೆ. "ಪಶ್ಚಿಮದಿಂದ ಪೂರ್ವಕ್ಕೆ" ಎಂಬ ಅಭಿಪ್ರಾಯ ಬದಲಾಗಿ ಪೂರ್ವದಿಂದ ಪಶ್ಚಿಮಕ್ಕೆ ಸಂಸ್ಕೃತಿ ವಿಸ್ತಾರಗೊಂಡುದಕ್ಕೆ ಇತ್ತೀಚೆಗೆ ಸಾಕಷ್ಟು ಆಧಾರಗಳು ಸಿಕ್ಕತೊಡಗಿವೆ. ಬಿಡಿಸಲಾಗದ ಒಗಟೆಂದರೆ, ಮೊಹೆಂಜೊದಾರೋ ಹರಪ್ಪಾಗಳು ನಷ್ಟವಾಗಲಿಕ್ಕೆ ಕಾರಣವೇನು ? ಮಾರ್ಟಿಮರ ವ್ಹೀಲರರು ಪ್ರತಿಪಾದಿಸಿದ್ದೇನೆಂದರೆ, ಹರಪ್ಪಾ-ಮೊಹೆಂಜೊದಾರೋ ದ್ರಾವಿಡ ಅಥವಾ ಮತ್ತೆ ಯಾವುದೋ ಸಂಸ್ಕೃತಿಯ ಕೇಂದ್ರವಾಗಿದ್ದವೆಂದೂ, ಆರ್ಯರ ದಾಳಿಯಿಂದ ಅವು ನಷ್ಟವಾದುವೆಂದೂ ಹೇಳಿಬಿಟ್ಟರು. ಅದಕ್ಕೆ ಯಾವ ಆಧಾರವಿಲ್ಲವೆಂದು ಇತ್ತೀಚೆಗೆ ನಂಬಲಾಗುತ್ತದೆ.

ಶ್ರೀ ವಾಲ್ಮೀಕಿ ರಾಮಾಯಣದಲ್ಲಿ ನಮೂದಿಸಲಾದ ಶ್ರೀ ರಾಮಚಂದ್ರನ ಪಟ್ಟಾಭಿಷೇಕದ ಮುಹೂರ್ತದ ಆಧಾರದ ಮೇಲೆ ಅದು ಜರುಗಿದುದು ಕ್ರಿ. ಪೂ 4200ರಲ್ಲಿ ಎಂದು ಶ್ರೀಕೋಟಾ ವೆಂಕಟಾಚಲಂ ಮತ್ತು ಇತರರು ನಿರ್ಣಯಿಸಿದ್ದಾರೆ. ಈ ತಾರೀಖು ನಂಬಲರ್ಹವಾದುದೆಂಬುದು ಕೆಳಗಿನ ವಿವರಗಳಿಂದ ಗೊತ್ತಾಗುತ್ತದೆ

—2—

ಪುರಾಣಗಳು ಕೇವಲ ಕಲ್ಪನೆಯಲ್ಲ; ಅವುಗಳಲ್ಲಿ ಕನಿಷ್ಠ ಪಕ್ಷಕ್ಕೆ ರಾಜರ ವಂಶಾವಳಿಗಳು ಸಿಕ್ಕುತ್ತವೆ, ಎಂಬ ತತ್ತ್ವವನ್ನು ಪಾರ್ಗಿಟರ ಪ್ರತಿಪಾದಿಸಿದನು. ವ್ಯಾಡೆಲ್ ಎಂಬ ಕುಸು ವಿಕ್ಷಿಪ್ತ ಸಂಶೋಧಕನು ಹಿಂದೂ ಪುರಾಣಗಳಲ್ಲಿ ನಡೆದ ಘಟನೆಗಳು ಸತ್ಯವೇ; ಆದರೆ ಅವು ಜರುಗಿದ ಸ್ಥಳಗಳು. ಮಧ್ಯ ಪ್ರಾಚ್ಯದಲ್ಲಿ; ಅವುಗಳ ಕತೆಗಳು ಪುರಾಣಗಳಲ್ಲಿ ಭಾರತದ ಅದ್ಭುತರಮ್ಯ (Mythified) ರೂಪದಲ್ಲಿ ವರ್ಣಿತ ಎಂದು ಪ್ರತಿಪಾದಿಸಿದನು. ಈಗ ಇಬ್ಬರೂ ಚಾಲ್ತಿಯಲ್ಲಿ ಇಲ್ಲ-ತೀರ ಇತ್ತೀಚಿಗೆ ಪಾರ್ಗಿಟರನ ಅಭಿಪ್ರಾಯಗಳ ಸತ್ಯತೆ ಕೆನಡಾದ ಟೊರಂಟೋ ವಿಶ್ವವಿದ್ಯಾಲಯದ ಡಾ|| ಕಾರ್ಡರ ಮತ್ತು ಅವರ ವಿದ್ಯಾರ್ಥಿ ಡಾ|| ಸ್ಮಿತ್ ಅರಿತು ಹೆಚ್ಚು ಪುರಾಣಗಳ ಆಧಾರದ ಮೇಲೆ ಭಾರತದ ಪ್ರಾಚೀನ ಇತಿಹಾಸವನು ಪುನಾರಚಿಸತೊಡಗಿದ್ದಾರೆ.

ಪಾರ್ಗಿಟರನೂ ರಾಮಾಯಣವನ್ನು, "ನಂಬಿಕೆಗೆ ಅರ್ಹವಲ್ಲದ ಕಾವ್ಯ" ಎಂದು ನಂಬಿದ್ದನು. ಉಳಿದ ಪುರಾಣಗಳಿಗಿಂತ ರಾಮಾಯಣದಲ್ಲಿ ಹೆಚ್ಚು ಅದ್ಭುತರಮ್ಯ ಘಟನೆಗಳು ಬರುವವೆಂದಿಷ್ಟೇ ಅಲ್ಲ; ಅದರಲ್ಲಿ ಬರುವ ವಂಶಾವಳಿಗಳು ಉಳಿದ ಪುರಾಣಗಳಲ್ಲಿ ಬರುವ ವಂಶಾವಳಿಗಿಂತ ಭಿನ್ನವೆಂಬ ಕಾರಣದಿಂದ ತನ್ನ ಕೃತಿಯಿಂದ ದೂರವಿಟ್ಟನು. ನಮಗೆ ಆ ದೀರ್ಘ ವಂಶಾವಳಿ ಬೇಡ. ದಶರಥನ ಮಕ್ಕಳು ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಈ ನಿರ್ವಿವಾದ ಆಧಾರವಷ್ಟೇ ನಮ್ಮ ಪ್ರಬಂಧದ ಮಟ್ಟಿಗೆ ಸಾಕು.

ಹಾಗೆಯೇ ಉತ್ಖನನದ ಆಧಾರದ ಮೇಲೆ ಬೆಳೆಯುತ್ತಿದ್ದ ಪ್ರಾಚೀನ ಸಂಸ್ಕೃತಿ ಶಾಸ್ತ್ರ (Archaeology) ಸ್ವಭಾವವೂ ಇತ್ತೀಚಿಗೆ ಬದಲಾಗಿದೆ. ಆರ್ಕಿಯೋಲಿಜಿಯು ಮಾನವ ಶಾಸ್ತ್ರದತ್ತ (Anthropology) ವಾಲುತ್ತಿದೆ. ಸಂಸ್ಕೃತಿಯ ಶಿಖರಗಳು ಒಮ್ಮೆಲೇ ಏಳುವುದಿಲ್ಲ; ಅದರ ಸುತ್ತಲೂ ಚಿಕ್ಕ ಸಂಸ್ಕೃತಿಯ ಅನೇಕ ತಪ್ಪಲುಗಳು ಇರಬೇಕಾಗುತ್ತದೆ. ಸಂಸ್ಕೃತಿ-ನಾಗರೀಕತೆಗಳು ಹಾಕಿಕೊಟ್ಟ ಉದಾಹರಣೆಗಳಿಂದ ಚಿಕ್ಕ ಸಂಸ್ಕೃತಿಗಳು ಹದವಾಗುತ್ತದೆ; ಇವಿಲ್ಲದಿದ್ದರೆ ಅವು ಇಲ್ಲ; ಅವು ಇಲ್ಲದಿದ್ದರೆ ಇವು ಬೆಳೆಯಲಾರವು ಎಂಬ ವ್ಯಾಪಕ ದೃಷ್ಟಿಕೋನ ಬರತೊಡಗಿರುವುದು ಜ್ಞಾನಕ್ಕೆ ಹೊಸ ತಿರುವು ಕೊಟ್ಟಿದೆ. ಹರಪ್ಪನ್ ಸಂಸ್ಕೃತಿಯ ವಿಶಿಷ್ಟ ಅವಶೇಷಗಳು ಭಾರತದ ಹೊರಗೆ ಅಫಘಾನಿಸ್ತಾನ, ತುರ್ಕಮೆನಿಸ್ತಾನ, ಇರಾನ್‌ಗಳಲ್ಲಿ ಸಿಕ್ಕಿವೆ. ಗುಜರಾಥ-ಮಧ್ಯಪ್ರದೇಶ, ದಕ್ಷಿ-

ಹರಿಯಾಣಗಳಲ್ಲೂ ಸಿಕ್ಕಿವೆ. ಹರಪ್ಪ–ಮೊಹೆಂಜೊದಾರೋ ಸಂಸ್ಕೃತಿ ಸಿಂಧ್–ಪಂಜಾಬ್–ಬಲೂಚಿಸ್ಥಾನಗಳಲ್ಲೇ ಸೀಮಿತವಾಗಿರಲಿಲ್ಲ, ಎಂಬುದಾಗಿ ಕಂಡು ಬಂದಿದೆ. ಮೆಸೊಪೊಟೇಮಿಯಾದಿಂದಲೇ ಎಲ್ಲ ಕಡೆಗೆ ಸಂಸ್ಕೃತಿ ಹಬ್ಬಿತೆಂಬ ನಿಲುವು ಈಗ ಹಳತಾಗಿದೆ.

—3—

ರಾಮಾಯಣದ ಉತ್ತರ ಕಾಂಡದ 100ನೇ ಸರ್ಗದಲ್ಲಿ ಬಂದ ಕತೆ ಇಷ್ಟು.

ಕೇಕಯ ದೇಶದ ರಾಜ ಯುಧಾಜಿತ್ ತನ್ನ ಗುರುಪುತ್ರ ಗಾರ್ಗ್ಯನ ಮುಖಾಂತರ ಶ್ರೀರಾಮನಿಗೆ ವಿಪುಲ ಕಾಣಿಕೆಯೊಡನೆ ಸಂದೇಶ ಕಳಿಸಿಕೊಟ್ಟನು. "ಸಿಂಧೂ ನದಿಯ ಇಬ್ಬದಿಯಲ್ಲಿ ಗಂಧರ್ವ ರಾಜ ಶೈಲೂಷನ ಎರಡು ಮಹಾನಗರಿಗಳು ಇವೆ. ಮೂರು ಕೋಟಿ ಗಂಧರ್ವರ ಸೇನೆ ಅವನ್ನು ರಕ್ಷಿಸುತ್ತಿವೆ. ಈ ಗಂಧರ್ವನಗರಿಗಳ ಸುತ್ತಲೂ ಫಲವತ್ತಾದ ಜಮೀನಿದೆ. ನಗರಗಳೂ ಶ್ರೀಮಂತವಿವೆ. ಗಂಧರ್ವರನ್ನು ಸೋಲಿಸಿ ನಿನ್ನವೆರಡು ಪಟ್ಟಣಗಳನ್ನು ಸ್ಥಾಪಿಸು....

ಸೋದರ ಮಾವನ ಸಂದೇಶವನ್ನು ಶಿರಸಾ ವಹಿಸಿ ಶ್ರೀರಾಮನು ತಮ್ಮ ಭರತನೊಂದಿಗೆ ಅವನ ಇಬ್ಬರು ಮಕ್ಕಳು ತಕ್ಷ–ಪುಷ್ಕಳರನ್ನೂ ಬಲಾಢ್ಯ ಸೇನೆಯನ್ನೂ ಕಳಿಸಿಕೊಟ್ಟನು. ಅಯೋಧ್ಯೆಯ ಸೇನೆಯು ಒಂದೂವರೆ ತಿಂಗಳ ನಂತರ ಕೇಕಯ ನಗರವನ್ನು ತಲುಪಿ ಯುಧಾಜಿತನ ಬಲಾಢ್ಯ ಸೇನೆಯೊಡಗೂಡಿ ಗಂಧರ್ವರ ಮೇಲೆ ದಾಳಿ ಮಾಡಿತು ಗಂಧರ್ವರೂ ಬಲಾಢ್ಯರು–ಏಳು ದಿನ ಯುದ್ಧವಾದರೂ ಯಾರದೂ ಜಯವಾಗಲಿಲ್ಲ. ಸಂತಪ್ತನಾದ ಭರತನು ಗಂಧರ್ವರ ಮೇಲೆ 'ಕಾಲದ ಸಂವರ್ತ'ವೆಂಬ ಆಯುಧವನ್ನು ಎಸೆದನು ಅರೆಚಣದಲ್ಲಿ ಸಂವರ್ತಪಾಶದಲ್ಲಿ ಸಿಲುಕಿ ಮೂರು ಕೋಟಿ ಗಂಧರ್ವರು ವಿಲಿವಿಲಿ ಒದ್ದಾಡಿ ಪ್ರಾಣ ಬಿಟ್ಟರು.

'ಅದೇ ಸ್ಥಾನದಲ್ಲಿ' ಭರತನು ತನ್ನವೆರಡು ನಗರಗಳನ್ನು ಸ್ಥಾಪಿಸಿದನು–'ಗಂಧರ್ವ' ದೇಶದಲ್ಲಿ ತಕ್ಷಶಿಲೆಯೆಂಬ ನಗರ ಸ್ಥಾಪಿಸಿ ಅಲ್ಲಿ ಮಗನನ್ನು ಇರಿಸಿದನು. ಗಾಂಧಾರ ದೇಶದಲ್ಲಿ ಪುಷ್ಕರಾವರ್ತವೆಂಬ ನಗರ ಸ್ಥಾಪಿಸಿ ಅಲ್ಲಿ ಮಗ ಪುಷ್ಕಳನನ್ನು ಇರಿಸಿದನು. ಪರಸ್ಪರ ಸ್ಪರ್ಧೆಯಿಂದಲೂ ನಿಷ್ಕಪಟ ವ್ಯಾಪಾರ–ವ್ಯವಹಾರಗಳಿಂದಲೂ ಎರಡೂ ನಗರಗಳು ಶ್ರೀಮಂತಿಕೆಯಿಂದ ತುಳುಕ ತೊಡಗಿದವು. ಉದ್ಯಾನ–ವನಗಳಿಂದಲೂ, ಬಿಡಿಬಿಡಿಯಾದ ಅಂಗಡಿಗಳಿಂದಲೂ, ಜಲಾಶಯಗಳಿಂದಲೂ ಸುಶೋಭಿತವಾದವು. ಇಂಥ ನಗರಗಳನ್ನು ಐದು ವರ್ಷಗಳಲ್ಲಿ ಸ್ಥಾಪಿಸಿ ಭರತನು ಅಣ್ಣನ ಸೇವೆಗಾಗಿ ಅಯೋಧ್ಯೆಗೆ ಮರಳಿದನು.


ಈ ವಿವರಗಳನ್ನು ಅರ್ಥೈಸೋಣ :—

ಗಂಧರ್ವರು ಯಾರು ? ಅಫಘಾನ-ಬಲೂಚಿ-ಹಿಂದೂ ಮಿಶ್ರ ತಳಿ ಇರಬಹುದು. ಇವರು ಸಂಗೀತ-ನಾಟ್ಯಗಳಲ್ಲಿ ಪ್ರವೀಣರು ಇವರ ಅರಸು "ಶೈಲೂಷ"- ಅಂದರೆ ನಟ. ಹರಪ್ಪ (ಹರಿಯೂಪಿಯಾ ಎಂದು ಋಗ್ವೇದದಲ್ಲಿ ನಮೂದಿಸಲ್ಪಟ್ಟ ನಗರ) ಮಧುರಾ (ಮೊಹೆಂಜೋದಾರೊ)ಗಳ ಶ್ರೀಮಂತಿಕೆಯು ಕಾರಣಕರ್ತರು ಮೊಹೆಂಜೊದಾರೋ ಸಮೀಪದಲ್ಲೇ ಇದ್ದ ಔದ್ಯಮಿಕ ನೆಲೆಯಾದ ಚನ್ಹುದಾರೊ ಎಂಬ ಊರಿನ ಕಾರಾಗೀರರು ಚನ್ಹುದಾರೋ ಸಾಧಾರಣಪ್ರತಿಯು ಕೆಲಸಗಾರರ ಊರು ಹರಪ್ಪ-ಮಧುರಾಗಳಲ್ಲಿ ಸಿಕ್ಕುವ ತಾಮ್ರ-ಲೋಹಗಳ, ಮಣ್ಣಿನ ಕಲಾ ಕೃತಿಗಳು ತಯಾರಾಗುವುದು ಚನ್ಹುದಾರೋದಲ್ಲಿ. ಚನ್ಹುದಾರೋದಲ್ಲಿ ತಾಮ್ರ ಭಟ್ಟಿಗಳು ಅಸಂಖ್ಯ. ಹರಪ್ಪದಲ್ಲಿ ಇಂಥ ಭಟ್ಟಿಗಳಿಲ್ಲ ಚೀನಾಮಣ್ಣಿನ ಮಣಿಗಳನ್ನು ತಯಾರಿಸುವ ಕಾರ್ಖಾನೆ ಚೆನ್ಹುದಾರೋದಲ್ಲಿದೆ. ಇವುಗಳನ್ನೇ ಮಾರಿ ಅಫಘಾನಿಸ್ತಾನ, ತುರ್ಕಮೆನಿಸ್ತಾನ, ಇರಾನ್‌ಗಳ ವರೆಗೊಯ್ದು ಗಂಧರ್ವರು ತಮ್ಮ ಹರಪ್ಪಾ ಸಂಸ್ಕೃತಿಯ ಶ್ರೀಮಂತಿಕೆಯನ್ನು ಗಳಿಸಿದರು. ಚನ್ಹುದಾರೋದಲ್ಲಿ ತಾಮ್ರದ ನಾಣ್ಯಗಳನ್ನು ತಯಾರಿಸುವ ಟಂಕಶಾಲೆ ಕೂಡ ಸಿಕ್ಕಿದೆ.

ಹರಪ್ಪ ರಾವಿ ನದಿಯ ದಂಡೆಯಲ್ಲಿ ಇದೆ. ಇದನ್ನು ನಷ್ಟಮಾಡಿ ಭರತನು ಸ್ಥಾಪಿಸಿದ ಎರಡು ನಗರಗಳ ಸ್ಥಾನವೂ ಮಹತ್ವದ್ದು ; ತಕ್ಷಶಿಲೆಯೆಂಬ ತಕ್ಷನ ರಾಜಧಾನಿ ಕುಭಾ (ಕಾಬೂಲಿ) ನದಿ ಸಿಂಧು ನದಿಗೆ ಕೂಡುವ ಸಂಗಮ ಸ್ಥಾನದಲ್ಲಿ ಇದೆ ಪುಷ್ಕರಾವತ ಎಂಬ ಪುಷ್ಕಲನ ರಾಜಧಾನಿ ಕುಭಾ ಮತ್ತು ಸುವಾಸ್ತು (ಶುಭವತಿ) ನದಿಗಳ ಸಂಗಮ ಸ್ಥಾನದಲ್ಲಿ ಇದೆ. ಗಾಂಧಾರಿಗಳು (ಅಸಘನ) ತಮ್ಮ ರಕ್ತ ಸಂಬಂಧಿಗಳ (ಗಂಧರ್ವ)ರ ಸಹಾಯದಿಂದ ಭಾರತದ ಒಳನಾಡಿನಲ್ಲಿ ಶ್ರೀಮಂತ ರಾಜ್ಯಗಳನ್ನು ಸ್ಥಾಪಿಸಿದ್ದರು. ಅವರನ್ನು ಸೋಲಿಸುವುದಷ್ಟೇ ಅಲ್ಲ, ಭಾರತದ ಗಡಿಯನ್ನು ನಿರ್ಣಯಿಸಿ ಗಡಿನಾಡನ್ನು ಭದ್ರಪಡಿಸುವುದೇ ಭರತನು ಮಾಡಿದ ದೊಡ್ಡ ಕಾರ್ಯ-ಅದಕ್ಕಾಗಿಯೇ ಭಾರತವಾಯಿತು. ಈ ಕಾರ್ಯದಲ್ಲಿ ಎಷ್ಟು ಯಶಸ್ವಿಯಾದನೆಂದರೆ, ಮುಂದೆ ಮೂರು ಸಾವಿರ ವರ್ಷಗಳ ತರುವಾಯ ಪಾಣಿನಿ ತಕ್ಷಶಿಲೆಯಲ್ಲೇ ಹುಟ್ಟಿದನು. ಇದು ಭಾರತೀಕರಣದ ಉಜ್ವಲ ಉದಾಹರಣೆ-'ಗೆರೆ ಎಳದಿದ್ದೇನೆ, ಇದರ ಮುಂದೆ ನಮ್ಮ ನಾಡು ಬರುತ್ತದೆ. ನೀವು ನಿಮ್ಮ ನಾಡಿನಲ್ಲೇ ಇರುವುದು ವಿಹಿತ' ಎಂದು ಹೇಳಿದಂತಾಯ್ತು. ಚನ್ಹುದಾರೋ ಚಂದ್ರಭಾಗ (ಅಸಿಕ್ನಿ) ನದಿಯ ದಂಡೆಯ ಮೇಲೆ ಇದೆ. ಅದರ ಹೆಸರೂ ನದಿಯ ಮೇಲಿಂದಲೇ ಬಂದಿರಬೇಕು.

ಮೊಹೆಂಜೋದಾರೊ ಬಹಳ ದೂರವಿದ್ದು ಆದರ ಮೇಲೆ ದಾಳಿ ಮಾಡುವುದು ಅಸಂಭವ. ಕೇಕಯು ನಾಡಿನ ಸಮೀಪವರ್ತಿಯಾದ ಹರಪ್ಪ ಚನ್ಹುದಾರೋದ ಮೇಲೆಯೇ ದಾಳಿ ಮಾಡಿದ್ದು ಇನ್ನೊಂದು ಮಹತ್ತ್ವದ ಪುರಾವೆ ಇದೆ.

ಚನ್ಹುದಾರೋದ ಉತ್ಖನನ ಮಾಡಿದ ಮಾಕೇ ಸಾಹೇಬನು ಅಲ್ಲಿನ ಸೀಲು ಗಳನ್ನು ಸಂಗ್ರಹಿಸಿದ್ದಾನೆ. (ನೋಡಿ : E.J.E. Mackey-Chanhu-Daro Excavations Plate LI No. 28) ಸೀಲಿನ ಮೇಲೆ ಅಶ್ವ ಮೇಧದ (ಕುದುರೆಯು) ಚಿಹ್ನೆ ಇದೆ. ಮೇಲಿನ ಬರಹದ ಒಕ್ಕಣಿಕೆ 'ಭಾರತ್ಯ ಕಯೋ' ಎಂದಿದೆ ಭರತನ ಇಬ್ಬರು ಪುತ್ರರು ಎಂದು ಅರ್ಥ.



—5—

ಲಕ್ಷ್ಮಣನ ಇಬ್ಬರು ಮಕ್ಕಳು ಅಂಗದ ಮತ್ತು ಚಂದ್ರಕೇತುಗಳ ತಾತ್ವಿಕ ವಿವೇಕಶೀಲ ನಡತೆಗೆ ಮೆಚ್ಚಿ ಅವರಿಗಾಗಿ ಕಾರುಪಥ ಮತ್ತು ಮರುಭೂಮಿಗಳನ್ನು ವಶಕ್ಕೆ ತೆಗೆದುಕೊಂಡು, ಅಲ್ಲಿ ಅಂಗದೀಯ ಮತ್ತು ಚಂದ್ರಕಾಂತಾ ಎಂಬ ನಗರ ಗಳನ್ನು ಕಟ್ಟಿ ಪಟ್ಟಕ್ಕೆ ಕೂರಿಸಿದನು. ಅಂಗರಾಜ್ಯ ಪ್ರಸಿದ್ಧವಾಗಿದೆ-ಕಾರುಪಥದ ಬಗ್ಗೆ ಸಂಶಯ. ಒಂದು ಕಾರುಪಥ ಬಲುಚಿಸ್ತಾನದಲ್ಲಿ ಇದೆ ಬಂಗಾಲ ಕೊಲ್ಲಿಗೆ ಕೂಡುವ ಕರತೋಷ ಎಂಬ ನದಿ ಇದೆ. ಭರತನ ಸಲಹೆಯಂತೆ ಈ ರಾಜ್ಯಗಳು ಸುದೃಢ ನೀರೋಗ, ಶಾಂತಿ ಪ್ರಿಯ ಜನರ ನಡುವೆ ಕಟ್ಟಲ್ಪಟ್ಟವು. ಒಂದು ಮಲ್ಲ ದೇಶ ಪಂಜಾಬಿನತ್ತ ಇದೆ ಒಂದು ಬಂಗಾಲದಲ್ಲಿ ಇದೆ ಈಗಾಗಲೆ ಪಂಜಾಬಿನ ಅನುಭವ ಪಡೆದ ಭರತನು ಪಂಜಾಬನ್ನೇ ಆಯ್ಕೆ ಮಾಡಿದನೋ ಅಯೋಧ್ಯೆಗೆ ಸಮೀಪವರ್ತಿಯಾದ ಪೂರ್ವದೇಶವನ್ನು ಆಯ್ಕೆ ಮಾಡಿದನೋ ಸ್ಪಷ್ಟವಾಗುವುದಿಲ್ಲ ಪೂರ್ವದೇಶ ಆಯ್ಕೆ ಮಾಡಿದ್ದರೆ ಮೊಹೆಂಜೊದಾರೋ ಸಂಬಂಧವೇ ಬರುವದಿಲ್ಲ- ಪಂಜಾಬ ಆಯ್ಕೆ ಮಾಡಿದ್ದರೆ ಸಿಂಧದಲ್ಲಿನ ಮೊಹೆಂಜೊದಾರೋದ ಮೇಲೆ ನಿಯಂತ್ರಣ ಇಡುವದಕ್ಕಾಗಿ ಎಂದು ಅರ್ಥೈಸಬಹುದು ಲಕ್ಷ್ಮಣನು ಅಂಗದ ನನ್ನು ಹಿಂಬಾಲಿಸಿ ಒಂದು ವರ್ಷ ಇದ್ದು ಅವನ ರಾಜ್ಯ ಭದ್ರಗೊಳಿಸಿ ಬಂದನಂತೆ. ಭರತನೂ ಎರಡು ವರ್ಷ ಇದ್ದು ಚಂದ್ರಕೇತುವಿನ ರಾಜ್ಯ ಭದ್ರಗೊಳಿಸಿ ಬಂದನಂತೆ. ಹಾಗಾದರೆ ಚನ್ಹುದಾರೋ ಚಂದ್ರಕಾಂತಾನಗರವಿರಬಹುದು. 'ಅಸು' ಎಂಬ ಈಗಾಗಲೇ ಸ್ಥಾಪಿಸಲ್ಪಟ್ಟ ಮಲ್ಲದೇಶದ ಪಟ್ಟಣ ಅಂಗದೀಯ ಇರಬಹುದು. ಅನಂತರ ಇಬ್ಬರೂ ಅನುಜರು ಅಯೋಧ್ಯೆಗೆ ಮರಳಿದರು.

—6—

ಶತ್ರುಘ್ನನ ಕತೆ ಇದಕ್ಕಿಂತ ಮುಂಚೆ 60ನೇ ಸರ್ಗದಲ್ಲಿ ಬರುತ್ತದೆ : ಚ್ಯವನ ಭಾರ್ಗವ ಋಷಿ ಬಂದು ಲವಣಾಸುರ ತಮ್ಮ ಯಜ್ಞಕರ್ಮಗಳಿಗೆ ವ್ಯತ್ಯಯ ಮಾಡುತ್ತಿದ್ದ ಬಗ್ಗೆ ದೂರು ಸಲ್ಲಿಸುತ್ತಾರೆ. ಲವಣಾಸುರ ಮಧು ಎಂಬ ಸಾತ್ವಿಕ ದೈತ್ಯನ ಕ್ರೂರ ಮಗ. ಶಿವನ ವರಪ್ರಸಾದಿಂದ ಅವನದೇ ಶೂಲನಿರ್ಮಿತ ಇನ್ನೊಂದು ಬಲಾಢ್ಯ ಶಸ್ತ್ರ ಅವನ ಬಳಿ ಇರುತ್ತದೆ. ಆ ಅಜೇಯಶೂಲ ತಮ್ಮ ಕುಲದಲ್ಲೇ ಇರಬೇಕೆಂದು ಮಧು ಬೇಡಿಕೊಂಡನು. ಮಗ ಲವಣಾಸುರನ ನೀಚ ಪ್ರವೃತ್ತಿಗಳನ್ನು ನೋಡಿ ನಿರಾಶನಾಗಿ ಮಗನಿಗೆ ಶೂಲ ಒಪ್ಪಿಸಿ ತಾನು ನಿಧನ ಹೊಂದುತ್ತಾನೆ. ಮಗ ಲವಣಾಸುರ ತನ್ನ ಕುಕೃತ್ಯ ಮುಂದುವರಿಸಿದನು. ಯಾವ ರಾಜನೂ ತಮಗೆ ಪರಿಹಾರ ನೀಡಲಿಲ್ಲ. ಲವಣಾಸುರನ ರಾಜಧಾನಿ ಮಧುವನ. ಶತ್ರುಘ್ನ ತನ್ನ ಅಣ್ಣಂದಿರು ಸಾಕಷ್ಟು ಶ್ರಮ ಹೊತ್ತಿದ್ದಾರೆ, ತಾನೇ ಲವಣಾಸುರನ ಶಾಸ್ತಿಗಾಗಿ ಹೋಗುವೆನು. ಎಂದು ಬೇಡಿಕೊಳ್ಳುತ್ತಾನೆ.

ಶತ್ರುಘ್ನನಿಗೆ ರಾಜ್ಯಾಭಿಷೇಕ ಮಾಡಿ ಯುದ್ಧ ತಂತ್ರದ ಬಗ್ಗೆ ಶ್ರೀರಾಮಚಂದ್ರನು ಉಪದೇಶಿಸಿದನು. 'ಅವನು ಊರಲ್ಲಿ ಇಲ್ಲದಾಗ ಅವನ ಬಾಗಿಲ ಹತ್ತಿರ ನಿಲ್ಲು, ಮನೆಯಲ್ಲಿ ಶೂಲ ಇಟ್ಟಿದ್ದಾನೆ. ಅದು ಅವನ ಕೈಗೆ ಬರಕೂಡದು. ಹೊರಗೇ ಯುದ್ಧಮಾಡಿ ಜಯಿಸಬೇಕು' ಎಲ್ಲ ಶತ್ರುನಾಶಕ ವಿಷ್ಣುಬಾಣವನ್ನು ಕೊಟ್ಟನು. ಅತ್ಯವಸ್ಥೆ ಬರುವವರೆಗೆ ಈ ಬಾಣವನ್ನು ಬಳಸಬೇಡ, ಎಂದು ಎಚ್ಚರಿಕೆ ನೀಡಿದನು. ಸೈನ್ಯ ಬೇಸಗೆಯ ದಿನಗಳಲ್ಲಿ ಗಂಗಾನದಿ ದಾಟಿ ಒಂದು ತಿಂಗಳ ತರುವಾಯ ಯಮುನಾ ತೀರದ ಚ್ಯವನ ಋಷಿಗಳ ಆಶ್ರಮದ ಸಮೀಪ ನೆಲೆ ನಿಂತಿತು. ರಾಮನ ಆಜ್ಞೆಯಂತೆ ಸೈನಿಕರೆಲ್ಲರನ್ನು ಸಂತೋಷದಲ್ಲಿ ಇಡಲಾಗಿತ್ತು. ಆದಕ್ಕಾಗಿ ಶತ್ರುಘ್ನನಿಗೆ ಒಂದು ಲಕ್ಷ ನಾಣ್ಯಗಳನ್ನು ಶ್ರೀರಾಮನು ನೀಡಿದನು. ಖಾಯಂ ವಸತಿಗಾಗಿ ಮನೋರಂಜನೆಯ ಸಾಧನಗಳೂ ಇದ್ದವು.

ಒಂದು ತಿಂಗಳ ತರುವಾಯ ಶತ್ರುಘ್ನ ವಾಲ್ಮೀಕಿ ಆಶ್ರಮದಲ್ಲಿ ಒಂದು ದಿನ ವಿದ್ದು ಪಶ್ಚಿಮಕ್ಕೆ ವೇಗವಾಗಿ ಪ್ರಯಾಣ ಬೆಳೆಸಿ ಚ್ಯವನಾಶ್ರಮದಲ್ಲಿ ತನ್ನ ಪೂರ್ವಜ ಮಾಂಧಾತನ ವಧೆ ಲವಣನಿಂದಲೇ ಆಯಿತು ಎಂಬ ಕತೆ ಕೇಳಿ, ಲವಣಾಸುರನ ಮನೆಯ ಮುಂದೆ ಒಬ್ಬನೇ ನಸುಕಿನಲ್ಲಿ ಹೋಗಿ ನಿಂತನು. ಮಾಂಸಕ್ಕಾಗಿ ಹೊರಗೆ ಹೋದ ಲವಣಾಸುರನನ್ನು ಹಾದಿಯಲ್ಲೇ ತಡವಿದನು.

ಯುದ್ಧದಲ್ಲಿ ಲವಣಾಸುರ ಎಸೆದ ವೃಕ್ಷ ತಾಕಿ ಶತ್ರುಘ್ನ ಮೂರ್ಛೆ ಹೋದನು.

ಅವನು ಸತ್ತನೆಂದೇ ಭಾವಿಸಿ ಲವಣಾಸುರ ಊರಿಗೆ ಹೋಗುವಾಗ ಎಚ್ಚರಗೊಂಡ ಶತ್ರುಘ್ನನು ವಿಷ್ಣುಬಾಣದಿಂದ ಅವನ ವಧೆ ಮಾಡಿದನು.

—7—

ಲೋಥಲ ಎಂಬ ಸೌರಾಷ್ಟ್ರದ ನಗರವು 'ಲವಣಸ್ಥಲ' ಎಂಬ ಶಬ್ದದ ಪ್ರಾಕೃತ ರೂಪವೆಂದು ಭಾವಿಸಿದರೆ ಈ ಯುದ್ಧದ ಸ್ಥಳದ ಬಗ್ಗೆ ಸಂದೇಹ ಉಳಿಯು ವುದಿಲ್ಲ. ಲೋಥಲ್ ಉತ್ಖನನ ಮಾಡಿದವರು ಶ್ರೀ ಎಸ್. ಆರ್. ರಾವ್ ಲೋಥಲ್ ಹರಪ್ಪನ್ ಸಂಸ್ಕೃತಿಯ ಹೊರಕೂಸು ಎನ್ನುವಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಇಲ್ಲಿರುವ ಒಂದು ಚಿಕ್ಕ ಚೌಕು ಹಾಲನ್ನು ರಾವ್ ಹಡಗು ನಿಲ್ದಾಣ (Dry Dock) ಎಂದು ಹೇಳಿದ ಬಗ್ಗೆ ಎಲ್ಲರಿಗೂ ಸಂದೇಹ. ಕದಾಚಿತ್ ಸಮುದ್ರದ ನೀರನ್ನು ಸಂಗ್ರಹಿಸುವ ಹೌದು ಇರಬಹುದು. ಲವಣಾ ಸುರನ ಪ್ರಜಾಜನರಲ್ಲಿ ಉಪ್ಪು ಮಾಡುವ ವಿದ್ಯೆ ಬೆಳೆದಿರಬಹುದು. ಶತ್ರುಘ್ನ ಒಬ್ಬನೇ ಹೋಗುವಲ್ಲಿ ಸೈನ್ಯ–ಮನೋರಂಜನೆಯ ಸಿಬ್ಬಂದಿ ಏಕೆ ಬೇಕು ? ಶತ್ರುಘ್ನ ಅಲ್ಲಿಯೇ ನೆಲಸಿ ರಾಜ್ಯವಾಳುವ ಉದ್ದೇಶದಿಂದಲೇ ಅವನಿಗೆ ಅಯೋಧ್ಯೆ ಯಲ್ಲಿಯೇ ಪಟ್ಟಕಟ್ಟಲಾಗಿತ್ತು. ಮಧುಪುರಿಯಲ್ಲೇ ಅವನ ಅರಮನೆಯಲ್ಲೇ ಶತ್ರುಘ್ನ ನೆಲಸಿದನು. 12 ವರ್ಷ ಅಲ್ಲಿದ್ದು ಶ್ರೀರಾಮನ ದರ್ಶನಕ್ಕಾಗಿ ಒಂದು ವಾರ ಅಯೋಧ್ಯೆಗೆ ಮರಳಿದನು.

ಲವಣಾಸುರನ ಪಟ್ಟಣ ಲೋಥಲ್ ಎನ್ನುವದಕ್ಕೆ ಮುಖ್ಯ ಆತಂಕ ಒಂದು ಇದೆ. ಲವಣಾಸುರನ ಊರು ಮಧುರಾ, ಮಥುರಾ, ಮದವನ, ಮಧುಪುರವೆಂದು ರಾಮಾಯಣದಲ್ಲಿ ಸ್ಪಷ್ಟ ನಿರ್ದೇಶವಿದೆ. ನಂತರ ಶತ್ರುಘ್ನ ಮರಳಿದುದು ರಾಮಾವಸಾನಕಾಲದಲ್ಲೇ. ಆಗ ತನ್ನ ನಿರ್ಣಯದ ಪೂರ್ವತಯಾರಿಗಾಗಿ ಸುಬಾಹು ವಿಗೆ ಮಧುರೆಯಲ್ಲೂ. ಮಗ ಶತ್ರುಘಾತಿಗೆ ವೈದಿಶ ನಗರದಲ್ಲೂ ಪಟ್ಟಕಟ್ಟಿ ಸೈನ್ಯ ಧನಕನಕಗಳನ್ನು ವಿಭಾಜಿಸಿ ತಾನು ಅಯೋಧ್ಯೆಗೆ ಮರಳಿದನು

ಹರಪ್ಪನ್ ಸಂಸ್ಕೃತಿ ಹಬ್ಬಿದ ಇತರ ಪ್ರದೇಶಗಳಲ್ಲಿ (ಅವು ಎಷ್ಟು ದೂರ ವಿದ್ದರೂ) ಶತ್ರುಘ್ನ ಹೋಗಿರಬಹುದೇ ವಿಚಾರಿಸುವಾ :

ಹರಪ್ಪನ್ ಅವಶೇಷಗಳಿರುವ ಕೋತುರ್ಘಾಯಿ ಎಂಬ ಒಂದು ಸ್ಥಾನವು ತುರ್ಕಮೆನಿಸ್ತಾನದಲ್ಲಿ ಇದೆ. ಶತ್ರುಘ್ನನ ಮಗನ ಹೆಸರು 'ಶತ್ರುಘಾತಿ' ಕೋತುರ್ಘಾಯಿ ಸಮೀಪದಲ್ಲೇ ಬದಕ್ಷನ್ ಎಂಬ ವಾಪಿನ್. ವಾರ್ಘೋಲಿ ಶಿಲೆಯ ಗಣಿಗಳುಳ್ಳ ಊರಿದೆ. ಇಲ್ಲಿಯೂ ಹರಪ್ಪನ್ ಸಂಸ್ಕೃತಿಯ ಅವಶೇಷಗಳು ಸಿಕ್ಕುತ್ತವೆ. ಇದು 'ವೈದಿಶ' ವಿರುವ ಸಂಭವವಿದೆ. ಇವೆರಡೂ ಖೈಬರ್ ಕಣಿವೆಯ ಸಮೀಪದಲ್ಲಿವೆ ಸಾಧಾರಣ ವ್ಯಾಪಾರದ ಮಾರ್ಗವೆಂದರೆ–ಗುಮ್‌ಲಾ ಕಣಿವೆ. ಆದರೆ ಶತ್ರುಘ್ನನ ಗುರಿ ವ್ಯಾಪಾರವಲ್ಲ ಖೈಬರ್ ಕಣಿವೆ ಅನಂತರದ ಇತಿಹಾಸದಲ್ಲಿ ವಿದೇಶಿಯರ ದಾಳಿಗೆ ಪ್ರಸಿದ್ಧವಾಯಿತು. ಆದರೆ ಮೊದಲು ದಾಳಿ ಮಾಡಿದವರು ಭಾರತೀಯರು. ಮಧುವನ-ಮುಂಡಿರಕ ಎಂಬ ಇನ್ನೊಂದು ನಗರ. ಲವಣಾಸುರನ ವಧೆ ಆದದ್ದು ಇಲ್ಲಿ ; ಇಲ್ಲಿ ಹೊಳೆಯೂ ಇದೆ. ಕೋತುರ್ಘಾಯಿ ಬದಕ್ಷನ್ ಸಮೀಪ ನದಿ ಯಾವುದೂ ಇಲ್ಲವಾದರೂ ಕಾಲುವೆಗಳು ಇವೆ ಇವು ಇಂಜನಿಯರಿಂಗ್ ಅದ್ಭುತಗಳೆಂದು ತಿಳಿಯಲ್ಪಡುತ್ತವೆ.

ಇದು ಖಂಡಿತ ವಸಾಹತುವಾದವಲ್ಲ. ಬೀಳುಬಿದ್ದ ಜಾಗೆಯಲ್ಲಿ ಹಸನು ಬಾಳುವೆ ಮಾಡಿ ಅದನ್ನು ಅಭಿವೃದ್ಧಿಪಡಿಸಿ, ಭಾರತೀಯರನ್ನು ನೆಲಸಿ ಆದರ್ಶ ಸಮಾಜ ಕಟ್ಟುವುದು ಗುರಿ. ಏನು ಕಾರಣವೋ, ಆಗ ಮಾಡಿದ ನೀರಾವರಿ ಜಮೀನು ಫಲ ಕೊಡಲಿಲ್ಲ ಶತ್ರುಘಾತಿ ಭಾರತಕ್ಕೆ ಮರಳಿ ಬಂದ ಉಲ್ಲೇಖವಿಲ್ಲ. ವಿದೇಶಿಯರ ದಾಳಿ ಎದುರಿಸುವುದಕ್ಕಾಗಿ ಭಾರತವು ನಿರ್ಮಿಸಿದ (Check Post) ಎಂದು ಕೋತುರ್ಘಾಯಿಯನ್ನು ಗುರುತಿಸಬಹುದು. ವಾಯುವ್ಯ ಸರಹದ್ದನ್ನು ಭರತನ ಮಕ್ಕಳು ಭದ್ರಪಡಿಸಿದಂತೆ, ಉತ್ತರದಿಂದ ದಾಳಿ ಬರದಂತೆ ಶತ್ರುಘಾಯಿ ಕೆಲಸ ಮಾಡಿರಬಹುದು. ಶ್ರೀರಾಮನ ದೂರದೃಷ್ಟಿಗೆ ಇದು ಉದಾಹರಣೆ.

— —

ಟೀಕೆ—ಟಿಪ್ಪಣಿ

# ಕನಕದಾಸರ ಮೂರು ಅಪ್ರಕಟಿತ ಕೀರ್ತನೆಗಳು

—ಶ್ರೀ ಶ್ರೀಧರ ಎಚ್. ಜಿ.

ನಡುಗನ್ನಡ ಸಾಹಿತ್ಯದಲ್ಲಿ ವೈವಿಧ್ಯವಿದೆ, ಏಕತಾನತೆಯಿಲ್ಲ. ಭಾರತ, ರಾಮಾಯಣ ಭಾಗವತ ಕವಿಗಳ ಮೂಲಕ ದೇಸಿ ಛಂದಸ್ಸಿನಲ್ಲಿ ಪುನರ್ಜನ್ಮ ಪಡೆದು ಮತ್ತೊಮ್ಮೆ ಬಂದಿತು. ದಾಸರು ಇವನ್ನೆಲ್ಲ ಆಡುಮಾತಿನಲ್ಲಿ ಹಾಡಿಗೆ ಪರಿವರ್ತಿಸಿದರು; ಇವರು ವಚನಕಾರರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಸಾಹಿತ್ಯಕ್ಕೆ ಸಂಗೀತದ ಸಾಂಗತ್ಯವನ್ನು ಒದಗಿಸಿದರು : ಈ ಅಪೂರ್ವ ಸಂಗಮದಿಂದ ಕೀರ್ತನ ಕನ್ನಡಿಗರ ಬದುಕಿನಲ್ಲಿ ಬೆರೆಯಿತು; ಮಹಿಳೆಯರ ನಾಲಿಗೆಯಲ್ಲಿ ನಲಿದು ಉಳಿದು ಬಂದಿತು. ಎಲ್ಲ ಸಾಹಿತ್ಯಿಕ ಪರಂಪರೆ ನಡುಗನ್ನಡ ಕಾಲದಲ್ಲಿದ್ದರೂ ಜನಸಾಮಾನ್ಯರ ಮನೋಭಾವ ಈ ಕಾಲದಲ್ಲಿ ಪ್ರಧಾನ ಪಾತ್ರ ವಹಿಸಿದ್ದು ಸ್ಪಷ್ಟವಾಗಿ ಕಾಣುತ್ತದೆ.

ಪುರಂದರದಾಸರ ಸಮಕಾಲೀನ ವ್ಯಕ್ತಿ ಕನಕದಾಸ. ಭಾಗವತ ಮನೋಧರ್ಮ ಈತನದು. ಕಾವ್ಯ ಹಾಗು ಕೀರ್ತನೆಗಳನ್ನು ರಚಿಸಿದ ಸ್ವತಂತ್ರ ಮನೋಧರ್ಮದ ಹಿರಿಯ ಕೀರ್ತನಕಾರ ದೇಶಿಯ ಬಂಧಗಳಾದ ಷಟ್ಪದಿ, ಸಾಂಗತ್ಯಗಳೆರಡರಲ್ಲೂ ಕಾವ್ಯ ಬರೆದ ಪ್ರಜ್ಞಾವಂತ ವ್ಯಕ್ತಿ. ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ನಳಚರಿತ್ರೆ, ಹರಿಭಕ್ತಿಸಾರ ಈತನ ಕೃತಿಗಳು. ಈಗಾಗಲೇ ಕನಕದಾಸರ ಕೀರ್ತನೆಗಳು ಸಾಕಷ್ಟು ಪ್ರಕಟಗೊಂಡಿವೆ. ಬೆಳಕಿಗೆ ಬಾರದವು ಇನ್ನೂ ಇರಬಹುದು. ಪ್ರಸ್ತುತ ಕನಕದಾಸರ ಮೂರು ಅಪ್ರಕಟಿತ ಕೀರ್ತನೆಗಳು ಇಲ್ಲಿವೆ.

ಕಾಗಿನೆಲೆಯಾದಿಕೇಶವನಲ್ಲಿ ಸರ್ವಾರ್ಪಣ ಮನೋಭಾವ ಇಲ್ಲಿನ ಕೀರ್ತನೆಗಳ ಅಂತಿಮ ಆಶಯ. ಜಗತ್ತಿನ ಎಲ್ಲ ಚಟುವಟಿಕೆಗಳು ಹರಿಚಾಲಿತ, ಆತ ನಮ್ಮನ್ನೆಲ್ಲ ರಕ್ಷಿಸುವ ಬಂಧು ಎಂಬ ತಿಳುವಳಿಕೆ ಇಲ್ಲಿನ ಎಲ್ಲ ಕೀರ್ತನೆಗಳಲ್ಲಿ ಸಾಮಾನ್ಯವಾಗಿದೆ. ಮೃಗ ಸಂಕುಲ ಮಾನವ ಕೋಟಿಯನ್ನೆಲ್ಲ ಕಷ್ಟದಿಂದ ಪಾರುಮಾಡುವ ಸಮರ್ಥ, ಅಜ್ಞಾನದ ಅಳಿವು, ಮಂತ್ರದ ಅರ್ಥ, ಪೂಜೆ, ಪುನಸ್ಕಾರ ಉಪವಾಸದ ಫಲ ಮೋಕ್ಷ ಸುಖ ಎಲ್ಲವೂ ಹರಿದಾಸರಿಗೆ ಸುಲಭದಲ್ಲಿ ದೊರೆಯುತ್ತವೆ ಆದರೆ ಲೌಕಿಕ ಸುಖದಿಂದ ಬಿಡುಗಡೆ ಪಡೆಯುವುದು ಸುಲಭವಲ್ಲವೆಂಬ ಎಚ್ಚರ ಇಲ್ಲಿದೆ ಅರಿಯಂತೆ

ಮುಂದೆನ್ನ ನಡೆವಳಿಯಲ್ಲಿ ಸ್ವಾನದುರಿತಂಗಳೆಲ್ಲ ಬಂದು ಕಾಡುತ್ತವೆ ಎಂಬ ಆತ್ಮ ವಿಮರ್ಶೆ ಕನಕದಾಸರದು. ಆತ್ಮಕಲ್ಯಾಣವನ್ನು ಸಾಧಿಸಿ ಪುನೀತನಾಗಬೇಕೆಂಬ ಹಂಬಲವಿದ್ದು ಮಾರ್ಗ ದರ್ಶನಕ್ಕಾಗಿ ಭಕ್ತನ ಆರ್ತ ಮೊರೆ ಇಲ್ಲಿದೆ.

ಕನಕದಾಸರು ಒಂದು ಪದದ ಸಮರೂಪವನ್ನು ಹಿಡಿದು ಅದರ ಹಿಂದೆ ಮುಂದೆ ಜೇರೆ ಬೇರೆ ಅಕ್ಷರ ಪದವನ್ನಿಟ್ಟು ವಿಭಿನ್ನ ಅರ್ಥವನ್ನು ಪಡೆಯುವ ಕೀರ್ತನಕಾರ. ನೆಗಳ ಕೈಯ್ಯಲ್ಲಿ ಎಂಬಲ್ಲಿ ಈ ತಂತ್ರವಿದೆ. ತಂದೆಯ ಮುಂದೆ ಹೆಂಡತಿಯ ಪಿಡಿವೆಳೆಯಲು ಕಂಡು ಗಂಡಗಲ್ಲದೆ ಹೆಂಡತಿಗುಂಟೆ ? ನಿಂದನೆ ಎಂಬಲ್ಲಿ ಸಾಂಸಾರಿಕ ಬದುಕಿನ ಅನುಭವದ ರಹಸ್ಯ ಹೆರಳುಗಟ್ಟಿದೆ. ಗಂಡ ಹೆಂಡಿರ ಜಗಳ ಬೀದಿಗೆ ಬರಬಾರದೆಂಬ ನೀತಿಯಿದೆ. ಈ ಮಾತು ಸ್ತ್ರೀಯರ ಸಾಮಾಜಿಕ ಬದುಕಿನತ್ತ ಒಳನೋಟ ಬೀರುವಂತಿದೆ. ಜನಭಾಷೆ, ಚಿತ್ರಣ ಶಕ್ತಿ, ಸಂಗೀತದ ಲೇಪ, ಭಕ್ತಿಯ ಪರವಶತೆ ಈ ಕೀರ್ತನೆಗೆ ಭಾವಗೀತದ ಸೊಬಗು ತಂದಿದೆ. ಇಲ್ಲಿನ ಮೂರನೆಯ ಕೀರ್ತನೆಯನ್ನು ಚೌಪದವೆಂದು ಕರೆದಿರುವುದು ಗಮನಾರ್ಹ. ಗ್ರಾಮ್ಯ ಭಾಷೆಯ ಸೊಗಡು ಇದರಲ್ಲಿದೆ.

೧

ಬಂಧುಗಳದಾರಿಗಾರಿದ್ದರೇನು |. ಇಷ್ಟ
ಬಂಧು ತ್ರೈಜಗಕೆ ಶ್ರೀ ಹರಿಯಲ್ಲದೆ ಮಿಕ್ಕ
ಬಂಧುಗಳದಾರಿಗಾರಿದ್ದರೇನು ||

ನೆಗಳ ಕೈಯ್ಯಲ್ಲಿ ಮಾತಂಗವು ಸಿಕ್ಕಿ | ಒದರಲಾಗಿ ಆ
ನೆಗಳೇನ ಮಾಡುತಿರ್ದವಡವಿಯಲ್ಲಿ
ನಗಜೆಯಾಳ್ದನ ಬ್ರಹ್ಮೇತಿ ಬಂದು ಕಾಡಲಾಗಿ ರುದ್ರಾ
ದಿಗಳೇನ ಮಾಡುತಿರ್ದರಾ ಶೈಲದೊಳಗೆ ||

ದಿಂಡೆಯು ಮಾರ್ಗದಿ ಮಲತಾಯಿ ಮಗನ | ಹೊಡೆಯಲು
ಮಂಡಲಪತಿಯೇನ ಮಾಡುತಿರ್ದನು
ಮಿಂಡಿಪೆಣ್ಣನು ಸಭೆಯಲ್ಲಿ ಸೀರೆ ಸುಲಿಯಲು
ಗಂಡರೈವರು ನೋಡಿಯೇನ ಮಾಡುತಿರ್ದರೈಯ್ಯಾ||

ನೃಗಚಕ್ರವರ್ತಿ ಬಹುಮರನಾಗಿ | ಪೋಗುತ್ತಿರೆ
ಮಿಗೆಸತಿಸುತರೇನಮಾಡುತಿರ್ದರು
ನೃಗ ಮಾನವಾಕಾರ ಕಾಗಿನೆಲೆಯಾದಿ ಕೇಶವನಲ್ಲದೆ ಮಿಕ್ಕಬಂ
ಧುಗಳದಾರಿಗಾರಿದ್ದರೇನು ||

೨

ನಿನ್ನ ನಾಮ ವಾಲ್ಮೀಕಿಯ ಕುಲವನುದ್ಧರಿಸಿದೆ
ನಿನ್ನ ನಾಮ ಘಂಟಾಕರಣನ ಸಲಹಿದೆ
ದೇವ ನಿನ್ನ ನಾಮ ||

ತಂದೆಯ ಮುಂದೆ ಮಗನನು ಬೈದು ಬಂಜಿಸಲು
ತಂದೆಯ ಮುಂದೆ ಹೆಂಡತಿಯ ಪಿಡಿದೆಳೆಯಲು
ಕುಂದು ಗಂಡಗಲ್ಲದೆ ಹೆಂಡತಿಗುಂಟೆ
ನಿಂದನೆ ಎಲೆ ದೇವ ||

ದೊರೆಯನು ನೋಡೆ ಬಂಟನ
ಪರರು ಹೊಯ್ಯಲು ಕುಂದು
ಅರಸಿಗಲ್ಲದೆ ಆಳಿಗೇನು
ಅರಿಯಂತೆ ಮುಂದೆನ್ನ ನಡವಳಿಯಲ್ಲಿ ಸ್ವಾನ
ದುರಿತಂಗಳೆಲ್ಲ ಬಂದೆನ್ನ ಕಾಡುತಿವೆ
ಪರಿಹರಿಸು ಎಲೆ ದೇವ ||

ಊದುವ,ಕಾಳೆಯ ದನ್ನಕ
ವಾದಲ್ಲಿ ನುಡಿಸುವ ಬಿರುದು ಒಡೆಯಂಗಲ್ಲವೆ
ಮಾಧವನೆ ಎನ್ನ ನಡವಳಿಯಲ್ಲಿ ಹುರುಳಿಲ್ಲ
ಓಡುವುದು ಸಿನ್ನ ನಾಮಸ್ಮರಣೆಯೆ ಎಲೆ ದೇವ
ಆಧರಿಸು ನಿನ್ನಲೆಂಕನ ಪ್ರತಿಲೆಂಕನ
ಭೇದವೇತಕೆ ನಿನ್ನ ದಾಸ ನಾನು ಬಾಡ
ದಾದಿ ಪ್ರಸನ್ನ ಕೇಶವನೆ ಎನ
ಗಾದ ದುರ್ಮತಿಯನು ಪರಿಹರಿಸು ಎಲೆ ದೇವ ||

೩

ಚೌಪದ ರಾಗ : ವಸಂತ ಭೈರವಿ

ಭಯ ಭಕ್ತಿ ಮಂತ್ರಗಿಂತ್ರಗಳು ವಾದ
ಬಯಲು ದೈವಂಗಳೌಷಧಿಗಿವುಷಧಿ
ಜಯಗಳಪಜಯವೆಂಬ ಜನ್ಮಪ್ರಕೃತಿ ತಾಪ

ತ್ರಯಂಗಳೆಂಬ ತಾಮಸಗೀಮಸ
ವಯಸಿಗೆ ಬಾರದ ಜ್ಞಾನಗಿಜ್ಞಾನ ನಿ
ನ್ನಯುಗಳಾಗದ ಮಂತ್ರದರ್ಥಗಿರ್ಥ
ನಯದಿಂದ ನರಹರಿಯ ಹೊಗಳುವರಿಗೆ ಶೇಷ
ಶಯನನೊಲಿದೀವ ಭಾಗವತ ಜನರಿಗೆ

ಕಾಲ ಮೃತ್ಯುಗಳು ಕಂಟಕ ಕಷ್ಟಗಿಷ್ಟ ಸುಖ
ದಾರಿದ್ರ ದುಃಖಾಲ ದುಃಖಗಿಃಖ
ಮೇಲೆ ಬಹನಿಂದೆ ನಿಷ್ಠೂರ ಭೂ
ಪಾಲಕಟ್ಟಳೆವಾಕು ವಾದಗೀದ
ಶೀಲ ಸೂತಕ ನೇಮಗೀಮ ದೇವತಾ ಪ್ರಸ್ತ
ಕಾಲದಲಿ ಮಾಳ್ಪ ಉಪವಾಸ ಗಿಪವಾಸ
ನಾಲಗೆಯ ಮೇಲೆ ಅನವರತ ಹೊಗಳುವ ಗೋ
ಪಾಲಕೃಷ್ಣ ಭಾಗವತ ಜನರಿಗೆ

ಹಿಡಿತಬಿಡಿತಗಳೆಂಬ ಹಿಂಚುಮುಂಚುಗಳು ಪರ
ರೊಡವೆ ಮೇಲಣಾಸೆಗೀಸೆ
ನಡವಳಿಕೆ ದೋಷಪ್ರಾಯ ದ್ವಿತಗಿತ್ತದು
ನುಡಿಗಳಾಡಿದರೆಂಬ ನೋವುಗೀವು
ಮಡದಿ ಮಕ್ಕಳು ಭೂಮಿಕ್ಷೇತ್ರ ದೋಹಮಾನ ಒಂ
ದೆಡರು ಬಂದೀತೆಂಬ ಚಿಂತೆಗಿಂತೆ
ಪೊಡವಿಪತಿ ನರರುಲಿಯೆ ಜಿಹ್ವಾಗ್ರ ಮಧ್ಯದಲಿ
ಪಡದು ಪಾಡುವ ಭಾಗವತ ಜನರಿಗೆ

ತೀರ್ಥಯಾತ್ರೆಯು ಗಮನಗಿಮನ ಮನ್ನಣೆಯುವರ
ಕೂರ್ತು ಫಲವೀವ ಕೋರಿಕೆ ಗೀರಿಕೆ
ಪ್ರಾರ್ಥನೆಯ ಹರಕೆ ಹರಿದಿನಗಿನಗಳೆಂಬ ಬಹು
ವಾರ್ತೆಯುನ್ನತಿಸುವ ದಿವಸಗಿವಸ
ದೂರ್ತ ಪ್ರಭಾವನಿಗಳಂ ಮತ್ತೆಯು ಮೋ
ಕ್ಷಾರ್ತ ಬೇಕೆಂಬ ಸಂದೇಹ ಗಿಂದೇಹ
ದೂರ್ತಭಂಜನ ಲಕ್ಷ್ಮೀಮನೋಹರನ ಸಂ
ಕೀರ್ತಿಸುತಿಹ ಭಾಗವತ ಜನರಿಗೆ

ಎಲ್ಲಿಹುದು ಸರ್ವಸಂಗವು ಪರಿತ್ಯಾಗವು ಮ
ತ್ತೆಲ್ಲಿಹುದು ಸುಜ್ಞಾನ ಯೋಗಿಗಳಿಗೆ
ಎಲ್ಲಿಹುದು ಯಾತ್ರಾ ರಂಚಾಲಂಗಳಿತರರಿಗೆ
ಎಲ್ಲಿಹುದು ನಿತ್ಯ ಸಿರ್ಮಳ ಹರಿಗೆ
ಎಲ್ಲಿಹುದು ಹರಿಯು ದಾಸಾನುದಾಸರಿಗೆ ಮ
ತ್ತೆಲ್ಲಿಹುದು ಪರಬ್ರಹ್ಮ ಪುತ್ಥಳಿಗೆ
ಬಲ್ಲಿದನು ಕಾಗಿನೆಲೆಯಾದಿ ಕೇಶವನಲ್ಲ
ದಿಲ್ಲನುತಿಹ ಭಾಗವತ ಜನರಿಗೆ

— o —

# ಕುಂಭಿನೀ : ಒಂದು ಟಿಪ್ಪಣಿ

—ಶ್ರೀ ಯು. ಕೃಷ್ಣಶರ್ಮಾ

ಕನ್ನಡದ ಕಾವ್ಯಗಳು ಹಾಗೂ ಯಕ್ಷಗಾನ ಕೃತಿಗಳಲ್ಲಿ 'ಭೂಮಿ' ಎಂಬ ಅರ್ಥದಲ್ಲಿ ಕುಂಭಿನೀ ಶಬ್ದವು ಪ್ರಯುಕ್ತವಾಗಿರುವುದು ಸರಿಯಷ್ಟೆ. ತತ್ಸಮದಂತೆ ಕಂಡುಬರುವ ಈ ಶಬ್ದವು ಸಂಸ್ಕೃತ ಮೂಲದ್ದೇ ಇರಬೇಕು. ಕುಂಭಿನೀ ಶಬ್ದವು ಸಂಸ್ಕೃತದಲ್ಲಿದೆಯಾದರೂ 'ಭೂಮಿ' ಎಂಬ ಅರ್ಥದಲ್ಲಿ ಪ್ರಸಿದ್ಧವಾಗಿಲ್ಲ. ಹಾಗಾದರೆ ಕನ್ನಡದ ಕುಂಭಿನೀ ಶಬ್ದವು 'ದೇಶಿ'ಯೇ ಇರಬಹುದೇ ? ಕನ್ನಡ ಕೋಶದಲ್ಲಿ 'ಕುಂಭಿನೀ=ಭೂಮಿ, ಹೆಣ್ಣಾನೆ, ಪಿಡಿ' ಎಂಬುದಾಗಿ ಅರ್ಥವಿವರಣೆ ಕಂಡುಬರುತ್ತದೆ. ಅಮರಕೋಶದಲ್ಲಾಗಲಿ, 'ಶಬ್ದಾರ್ಥ ಕೌಸ್ತುಭ'ದಲ್ಲಾಗಲಿ ಭೂಮಿ ಎಂಬ ಅರ್ಥದಲ್ಲಿ ಕುಂಭಿ ಶಬ್ದ ಕಂಡು ಬರುವುದಿಲ್ಲ. ವಾಚಸ್ಪತ್ಯಾದಿ ಕೋಶಗಳನ್ನು ನಾನು ನೋಡಲಾಗಲಿಲ್ಲ.

ವಿದ್ವಾನ್ ಎನ್. ರಂಗನಾಥ ಶರ್ಮಾ ಅವರು ಈ ಶಬ್ದದತ್ತ ವಾಚಕರ ಗಮನ ಸೆಳೆದಿದ್ದಾರೆ. 'ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಪದವನ್ನು ಕನ್ನಡ ಕಾವ್ಯಗಳಲ್ಲಿ ಪ್ರಯೋಗಿಸಿದ್ದುಂಟು. ಇದರ ಬಗೆಯೇನೆಂಬುದು ವಿಚಾರಣೀಯ. ಸಂಸ್ಕೃತ ಸಾಹಿತ್ಯದಲ್ಲಾಗಲಿ, ಕೋಶದಲ್ಲಾಗಲಿ ಈ ಪದವನ್ನು ಇದುವರೆಗೆ ನಾನು ಕಂಡಿಲ್ಲ' ಎನ್ನುತ್ತಾರೆ ಶ್ರೀಮಾನ್ ಶರ್ಮಾ ಅವರು. ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಶಬ್ದದ ವ್ಯುತ್ಪತ್ತಿ ಹಾಗೂ ಈ ಶಬ್ದ–ಶಬ್ದಾರ್ಥಗಳು ಸಂಸ್ಕೃತದ ಯಾವ ಕೋಶದಲ್ಲಿ ಉಲ್ಲಿಖಿತವಾಗಿದೆಯೆಂಬುದನ್ನು ಬಲ್ಲ ವಿದ್ವಾಂಸರು ತಿಳಿಸಿದಲ್ಲಿ ಜಿಜ್ಞಾಸುಗಳಿಗೆ ಉಪಕಾರವಾದೀತು.

ಶ್ರೀ ಟಿ. ಕೇಶವಭಟ್ಟರ 'ಶ್ರೀ ಗುರುಚರಿತಾಮೃತಂ' ಕಾವ್ಯದಲ್ಲಿ ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಶಬ್ದದ ಬಳಕೆಯಾಗಿದೆ. ಈ 'ಗುರುಚರಿತಾಮೃತಂ' ಗ್ರಂಥ ವಿಮರ್ಶೆಯ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಈ 'ಕುಂಭಿನೀ' ಶಬ್ದಕ್ಕೆ ಭೂಮಿಯೆಂಬ ಅರ್ಥದ ಬಗೆಗೆ ಮೂಲವನ್ನು ಹುಡುಕಬೇಕೆಂದು ಶ್ರೀಮಾನ್ ರಂಗನಾಥ ಶರ್ಮಾ ಅವರು ಸೂಚಿಸಿದ್ದಾರೆ. (ಕರ್ನಾಟಕ ಲೋಚನ : [illegible] 1990)

ಶ್ರೀ ಕೇಶವ ಭಟ್ಟರ ಆ ಪದ್ಯ ಹೀಗಿದೆ :—

ದಿನಕರನು ಪಡುವೆಟ್ಟಗಳ ಮರೆ
ಮನೆಗಿಳಿದು ಧರೆಯರೆಯನೊಂದಿರು
ಳಿನಲಿ ಚರಿಸುತ ನಾಳೆ ಮೂಡಣಗಿರಿಯ ತುದಿಯೇರಿ |
ಘನತೆ ಮಿಗೆ ಖರಕರಸಮುಜ್ವಲ
ನೆನಿಸಿ ತೇಜಃ ಪುಂಜದಿಂ ಕುಂ
ಭಿನಿಗೆ ಕಾಣಿಪೆನೆಂಬ ಧೃತಿಯಿಂದಸ್ತಮಯನಾದ ||

ಶ್ರೀ ಗುರುಚರಿತಾಮೃತಂ : ೪–೨೬

'ಕುಂಭಿನೀ ಎಂದರೆ ಭೂಮಿ' ಎಂದು ಹಿರಿಯರು ಹೇಳುವುದನ್ನು ನಾನು ಕೇಳಿದ್ದೇನೇ ಹೊರತು ಅದರ ವ್ಯುತ್ಪತ್ತಿ, ಮೂಲ ಹಾಗೂ ಸಾಧುತ್ವದ ಬಗೆಗೆ ಏನೂ ಆಲೋಚಿಸಿರಲಿಲ್ಲ. ಶ್ರೀಮಾನ್ ಶರ್ಮರ ಒಕ್ಕಣಿಕೆಯನ್ನು ನೋಡಿದ ನಂತರ ಪ್ರಾಸಂಗಿಕವಾಗಿ ನನಗೆ ನೆನಪಾದ ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಶಬ್ದದ ಬಳಕೆಯಿರುವ ಸಂಸ್ಕೃತ ಪದ್ಯವೊಂದನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಉದಾಹರಿಸಬಯಸುತ್ತೇನೆ.

'ಹೃದಯಾಮೃತಂ' ಎಂಬುದೊಂದು ಸಂಸ್ಕೃತ ಸ್ತೋತ್ರ ಕಾವ್ಯ. ಇದರ ಕರ್ತೃ ಜಗನ್ನಾಥ ಎಂಬ ಕವಿ (ಪಂಡಿತರಾಜ ಜಗನ್ನಾಥನಿಂದ ಇವನು ಭಿನ್ನ) ಕಾಲ ಕ್ರಿ. ಶ. 18ನೇ ಶತಮಾನದ ಮಧ್ಯಭಾಗ, ಮಹಾರಾಷ್ಟ್ರದ ದೇಶಸ್ಥ ಬ್ರಾಹ್ಮಣನಾದ ಇವನು ತಂಜಾವೂರಿನ ಎರಡನೇ ಏಕೋಜೀ ರಾಜನ ಆಸ್ಥಾನದಲ್ಲಿ ದ್ದಂತೆ ತಿಳಿದು ಬರುತ್ತದೆ. ಮಂತ್ರದೀಕ್ಷೆಯನ್ನು ಹೊಂದಿದ ನಂತರ ಈ ಜಗನ್ನಾಥನೇ ಉಮಾನಂದ ನಾಥನೆಂಬ ಹೆಸರಿನಿಂದ ಪ್ರಸಿದ್ಧನಾದನೆಂದು ಹೇಳು ತ್ತಾರೆ ಈ ಜಗನ್ನಾಥನ ಅನೇಕ ಕೃತಿಗಳಲ್ಲಿ 'ನಿತ್ಯೋತ್ಸವ' ಎಂಬ ತಾಂತ್ರಿಕ ಗ್ರಂಥವೂ ಒಂದು. ಪ್ರಕೃತ 'ಹೃದಯಾಮೃತಂ' ಎಂಬುದು ಶ್ರೀಮತ್ ಶಂಕರಾ ಚಾರ್ಯರ ಸೌಂದರ್ಯಲಹರಿಯಂತೆಯೇ ಶ್ರೀಲಲಿತಾಂಬಿಕೆಯನ್ನು ಕುರಿತ ಸ್ತೋತ್ರ ಕಾವ್ಯ. (ನೋಡಿ ಹೃದಯಾಮೃತಂ : ಸಂ : ವಿದ್ವಾನ್ ಎಚ್. ವಿ. ನಾಗರಾಜರಾವ್ ಎಂ. ಎ ; ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು ; 1980) ಇದರ ಪದ್ಯವೊಂದರಲ್ಲಿ ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಶಬ್ದವು ಕಂಡು ಬರುತ್ತದೆ. ಉದಾಹರಣೆಗೆ–

ಕ್ಷಮಾಗುಣೇನ ಕುಂಭಿನೀ ಗತೇನ ಮತ್ತಕುಂಭಿನೀ
ದಯಾರಸೋಪಲಂಭಿನೀ ಸಮೀಹಿತಾರ್ಥಲಂಭಿನೀ |
ತ್ರಿಷಾ ಜಪಾವಿಡಂಬಿನೀ ನತಾವನಾವಿಲಂಬಿನೀ
ಪುರದ್ವಿಷಃ ಕುಟುಂಬಿನೀ ಮಮಾಸ್ತು ಚಿತ್ತಚುಂಬಿನೀ ||

ಹೃದಯಾಮೃತಂ : ಶಬ್ದಾಸ್ವಾದ : ೩೪

'ಕುಂಭಿನೀ=ಭೂಮಿ' ಎಂದು ಸಂಪಾದಕರ ಟಿಪ್ಪಣಿಯಿದೆ. ಶಬ್ದಾಲಂಕಾರದ ನೇಯ್ಗೆಗಾಗಿ ಅಳವಡಿಸಿದ ಈ ಕುಂಭಿನಿಗೆ ಭೂಮಿ ಎಂಬ ಅರ್ಥವು 'ಕ್ಷಮಾಗುಣೇ ನ ಎಂಬ ವಿಶೇಷಣದಿಂದ ಸ್ಪಷ್ಟ. ಕುಂಭಿನೀ ಶಬ್ದಕ್ಕೆ ತಾಂತ್ರಿಕ ಪರಿಭಾಷೆಯಲ್ಲೇ ನಾದರೂ ಭೂಮಿಯೆಂಬ ಅರ್ಥವಿದೆಯೇ ? ಎಂಬುದು ಪರಿಶೀಲನಾರ್ಹ. ಒಂದಿ ಲ್ಲೊಂದು ಬಗೆಯಲ್ಲಿ ಈ ಶಬ್ದವು ಸಂಸ್ಕೃತ ಮೂಲದ್ದೇ ಇರಬೇಕೆಂದು ನನ್ನ ಅನಿಸಿಕೆ.

ಕುಂಭವೆಂದರೆ ಮಡಕೆ ಭೂಮಿಯಲ್ಲಿ ಕೆಲವು ಕಡೆ ಕಲಶದ, ತಂಬಿಗೆಯ ಆಕಾರದ ಕುಂಭಗಳು (ಕುಡಿಕೆಗಳು) ಕಂಡು ಬರುತ್ತವೆ. ಇವು ಪ್ರಾಕೃತಿಕವಾದ ಕುಡಿಕೆಗಳೇ ಹೊರತು ಕೃತ್ರಿಮವಲ್ಲ ಕುಂಭ (ಕುಡಿಕೆ) ಗಳುಳ್ಳದ್ದು 'ಕುಂಭಿನೀ' ಎಂದು ಕೆಲವರಿಲ್ಲಿ ಸಮಾಧಾನ ಹೇಳುತ್ತಾರೆ ಕ್ವಚಿತ್ತಾಗಿ ಕಂಡುಬರುವ ಈ ಬಗೆಯ ಕುಡಿಕೆಗಳು ಕೃತ್ರಿಮವೇ ಹೊರತು ಪ್ರಾಕೃತಿಕವಲ್ಲವೆಂದು ಕೂಡ ಇನು ಕೆಲವರು ವಿಚಾರವಾದಿಗಳು ಹೇಳುತ್ತಾರೆ. ಕುಂಭಿನಿಯ ಒಡಲಲ್ಲಿ ಏನಿದೆ ಏನಿಲ್ಲ ವೆಂಬುದನ್ನು ಖುದ್ದಾಗಿ ನೋಡಿದವರಾರು ?

—0—

# ಗ್ರಂಥ ವಿಮರ್ಶೆ

ಯು. ಕೃಷ್ಣಶರ್ಮರ "ಕವಿರಾಜ ಮಾರ್ಗದ ಅಲಂಕಾರಾಂತರ್ಭಾವವಾದ" ಎಂಬ ಸಂಕಲನವನ್ನು ಸಂಪಾದಕರು ಮೊದಲು ನನಗೆ ತೋರಿಸಿ ವಿಮರ್ಶೆಯನ್ನು ಬಯಸಿದರು. ಇಲ್ಲಿ ಸಂಕಲ್ಪಿಸಿರುವ ಅಭಿಪ್ರಾಯಗಳನ್ನು ವ್ಯಕ್ತಪಡಿಸುವವರೆಲ್ಲ ತಜ್ಞರು. ಅಧ್ಯಯನ ಅಧ್ಯಾಪನೆಗಳನ್ನೇ ವೃತ್ತಿಯಾಗಿಸಿಕೊಂಡವರು. ಇಂಥವರ ಅಭಿಪ್ರಾಯಗಳನ್ನು ವಿಮರ್ಶಿಸುವ ಅಧಿಕಾರ ನನಗಿಲ್ಲ. ಆದರೂ ವಿಷಯ ಕುತೂಹಲಕಾರಿಯಾಗಿದೆ ಎಂದು ಓದಿ ನೋಡಿದೆ. ಅದರ ಮುನ್ನುಡಿಯಲ್ಲಿ "ಧ್ವನಿಯೆಂಬುದುಳಂಕಾರಂ" ಎಂಬ ಇನ್ನೊಂದು ಸಂಕಲನದ ಉಲ್ಲೇಖವಿರುವುದನ್ನು ಕಂಡು ಅದನ್ನೂ ತರಿಸಿ ನೋಡಿದೆ. ಎರಡನೆಯ ಸಂಕಲನದ ಮುನ್ನುಡಿಯಲ್ಲಿ "ಇನ್ನಷ್ಟು ಅಂಶಗಳನ್ನು ಪರಿಕರ ಬಂಧದ ರೂಪದಲ್ಲಿ ಇಲ್ಲಿ ಅಳವಡಿಸಲಾಗಿದೆ" ಎಂದಿರುವುದರಿಂದ ಮೊದಲನೆಯದರಲ್ಲಿ ಆರಂಭವಾದ ಅನ್ವೇಷಣವನ್ನೇ ಎರಡನೆಯದರಲ್ಲೂ ಮುಂದುವರಿಸಲಾಗಿದೆ ಎನ್ನಬಹುದು ಮತ್ತು ಇದು ಕೊನೆಗಾಣಲಾರದ ಅನ್ವೇಷಣವೆಂಬಂತೆ ತೋರುತ್ತದೆ.

ಇಂತಹ ಅನ್ವೇಷಣಗಳಲ್ಲಿ ನನಗೆ ಕಾಣುವ ಸಾರ್ಥಕತೆ, "ಕಾವ್ಯ ಶಾಸ್ತ್ರ ವಿನೋದೇನ ಕಾಲೋಗಚ್ಛತಿ ಧೀಮತಾಮ್" ಎಂಬ ಸುಭಾಷಿತವಲ್ಲಿ ಹೇಳಿದ್ದಷ್ಟೋ ಅಷ್ಟೇ. ಪ್ರತಿಯೊಂದು ಅನ್ವೇಷಣಕ್ಕೂ ಒಂದು ಕೊನೆ ಇರಲೇಬೇಕು. ಪ್ರತಿಯೊಂದು ವಾದಕ್ಕೂ ಒಂದು ನಿರ್ಣಯವಿರಲೇಬೇಕು ಎಂಬ ಆಗ್ರಹ ನನಗೆ ವ್ಯಾವಹಾರಿಕವೆಂದು ತೋರುವುದಿಲ್ಲ.

ಇಲ್ಲಿ ಉದಾಹರಿಸಲಾಗಿರುವ ಆಕರ ಗ್ರಂಥಗಳನ್ನು ನಾನು ಕ್ರಮವಾಗಿ ಅಧ್ಯಯನ ಮಾಡಿದವನಲ್ಲ. ನಾನು ಕ್ರಮವಾಗಿ ಅಧ್ಯಯನ ಮಾಡಿದ್ದು ಕಾಲೇಜುಗಳಲ್ಲಿ ಕಾವ್ಯ, ಅಪರ ವಯಸ್ಸಿನಲ್ಲಿ ವೇದಾಂತ. ಸಂದರ್ಭಾನುಸಾರವಾಗಿ ಅವಶ್ಯವೆನಿಸಿದಷ್ಟು ಅಲಂಕಾರ ವ್ಯಾಕರಣ ನ್ಯಾಯಮೀಮಾಂಸೆಗಳ ತಿಳುವಳಿಕೆಯನ್ನು "ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಿಂ ಕೇಳುತ" ಎಂಬಂತೆ ಮಧುಕರ ವೃತ್ತಿಯಿಂದ ಸಂಗ್ರಹಿಸಿದ್ದಷ್ಟೋ ಅಷ್ಟೇ. ಅಷ್ಟೇ ತಿಳುವಳಿಕೆಯಿಂದ ನೋಡಿದಾಗ ಇಲ್ಲಿ ವ್ಯಕ್ತವಾಗದೆ ಉಳಿದ ಮತ್ತು ಸೂಚಿತವಾಗಿದ್ದರೂ ಹೆಚ್ಚಾಗಿ ಗಮನ ಸೆಳೆಯದ ಕೆಲವೇ ಅಂಶಗಳನ್ನು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ.

"ಕಾವ್ಯಸ್ಯಾತ್ಮ ಧ್ವನಿರಿತಿ ಬುಧೈರ್ಯಸ್ಸಮಾಮ್ನಾತ ಪೂರ್ವಃ" ಎಂಬ ಆನಂದವರ್ಧನನ ಮಾತಿನಲ್ಲಿ "ಸಮಾಮ್ನಾತ" ಮತ್ತು "ಆತ್ಮಾ" ಎಂಬ ಪದಗಳ ಅರ್ಥವನ್ನು ಇಲ್ಲಿ ಸ್ಥೂಲವಾಗಿ ವಿವರಿಸಿರುವರೇ ಹೊರತು ಅವುಗಳ ವಿಶಿಷ್ಟಾರ್ಥ ಗಳನ್ನು ನೋಡಿದರೆ ಕೆಲವು ಚರ್ಚೆಗಳು ಅನವಶ್ಯವೆಂದು ತೋರಬಹುದು. "ಸಮಾಮ್ನಾತ" ಎಂದರೆ ವೇದದಂತೆ ಕೂಟಸ್ಥ ನಿತ್ಯವಾದ ಅಪೌರುಷೇಯವಾದ ವಾಕ್ಯ ಎಂಬುದನ್ನು ಗಮನಿಸಿದರೆ ಆ ಸಿದ್ಧಾಂತ ಆನಂದವರ್ಧನನಿಗಿಂತ ಮೊದಲೇ ಇದ್ದಿತೇ ಇಲ್ಲವೇ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. ಅವನ ಅನಂತರದಲ್ಲಿ ಆ ಸಿದ್ಧಾಂತ ವನ್ನು ಬೆಳಸಿದವರು ಹೆಚ್ಚಾಗಿ ಬೌದ್ಧರೂ ಜೈನರೂ ಆಗಿದ್ದ ಕಾರಣ ಈ ವಿಶಿಷ್ಟ ಅರ್ಥವನ್ನು ಅವರು ಹೇಳಿರಲಿಕ್ಕಿಲ್ಲ. ಆದರೆ ಇಂದು ನಾವು ಅದರ ಬಲದಿಂದ ಇದು ಆನಂದವರ್ಧನನ ಕಲ್ಪನೆಯಲ್ಲಿ ಅನಾದಿಕಾಲದಿಂದಲೂ ಇದ್ದುದು ಅದರ ಕರ್ತೃ ವನ್ನಾಗಲಿ ಪ್ರವರ್ತಕರನ್ನಾಗಲಿ ಶೋಧಿಸಬೇಕಾಗಿಲ್ಲ ಎಂದು ಹೇಳಬಹುದು.

ಇದರಂತೆ "ಆತ್ಮಾ" ಶಬ್ದ. ಇದರ ಯೌಗಿಕ ಅರ್ಥ 'ಸರ್ವತ್ರವ್ಯಾಪ್ತ' "ಎಲ್ಲೆಲ್ಲಿಯೂ ಗೋಚರಿಸುವ" ಎಂಬುದು. ಪರಮಾತ್ಮನು ವಿಶ್ವಕಾಯವನ್ನು ವ್ಯಾಪಿಸಿರುವಂತೆ ಜೀವಾತ್ಮನು ಪ್ರಾಣಿಕಾಯವನ್ನು ವ್ಯಾಪಿಸಿರುವಂತೆ ಧ್ವನಿಯು ಶಬ್ದಕಾಯವನ್ನು ವ್ಯಾಪಿಸಿರುತ್ತದೆ. ಹೀಗೆ ನೋಡಿದರೆ ಇದು ಅಲಂಕಾರವಲ್ಲ ಎಂಬ ಸಂಕಲನಕಾರರ ಅಭಿಪ್ರಾಯ ಸರಿ ಎಂದು ನನಗೆ ತೋರುತ್ತದೆ.

ಅಲಂಕಾರವಲ್ಲವಾದರೆ ಅದೇನು ಎಂಬುದನ್ನು ಕೇವಲ ದೃಷ್ಟಾಂತಗಳಿಂದ ತೋರಿಸಬಹುದೇ ಹೊರತು ಒಂದು ಲಕ್ಷಣರೂಪ ವ್ಯಾಖ್ಯೆಯಲ್ಲಿ ಹೇಳುವದು ಎಂದಿಗೂ ಸಾಧ್ಯವಾಗಿಲ್ಲವೆಂದು ತೋರುತ್ತದೆ. "ತತ್ಕಾವ್ಯಂ ಧ್ವನಿನಾ ಸಮನ್ವಿತಮಿತಿ ಪ್ರೀತ್ಯಾ ಪ್ರಶಂಸನ್ ಜಡೋ | ನೋ ವಿದ್ಮೋಽಭಾವಧಾತು ಕಿಂ ಸುಮತಿನಾ ಪೃಷ್ಟಃ ಸ್ವರೂಪಂ ಧ್ವನೇಃ" ಎಂಬ ಮನೋರಥನ ವಾಕ್ಯ ಅದನ್ನೇ ಹೇಳುತ್ತದೆ.

"ಸ್ಫೋಟ"ದ ಸಾದೃಶ್ಯವನ್ನು ಕೆಲವರು ಸೂಚಿಸಿದ್ದರೂ ಅದನ್ನು ಹೆಚ್ಚಾಗಿ ವಿವರಿಸಿದ್ದು ಇಲ್ಲಿ ತೋರುವುದಿಲ್ಲ. ಮತ್ತು "ಶಬ್ದ" ಎಂಬುದನ್ನು "ಪದ" ಎಂಬುದಕ್ಕೆ ಸಮಾನಾರ್ಥವಾಗಿ ಎಲ್ಲರೂ ಬಳಸಿರುವದು ಸೋಜಿಗದ ವಿಷಯವಾಗಿದೆ. ಅವನ್ನು ಬೇರ್ಪಡಿಸದೆ ಸ್ಫೋಟವನ್ನು ವಿವರಿಸುವುದೂ ಸಾಧ್ಯವಿಲ್ಲ, ಧ್ವನಿಯನ್ನು ವಿವರಿಸುವುದೂ ಸಾಧ್ಯವಿಲ್ಲ. ಶಬ್ದ ಎಂಬುದನ್ನು ಕೇವಲ ಸದ್ದು, ಆಕಾಶಗುಣ, ಎಂಬರ್ಥಕ್ಕೆ ಸೀಮಿತಗೊಳಿಸಿ, ವಾಕ್ಯದ ಅಂಗವಾಗಬಲ್ಲದ್ದನ್ನು ಯಾವಾಗಲೂ "ಪದ" ಎಂದೇ ಕರೆಯುವುದು ಸರಿಯಾದ ಕ್ರಮ. ವರ್ಣನೆಗಳಿಂದ ಪದ ನಿರ್ಮಾಣ

ನಾಗುವ ಕ್ರಮವೇ ಸ್ಫೋಟ. ಘ ಒಂದು ವರ್ಣ ಟ ಇನ್ನೊಂದು ನ ಮತ್ತೊಂದು ಇ ಮತ್ತೊಂದು. ಇಲ್ಲಿ 'ಘ' ಜತೆಗೆ 'ಟ' ಸೇರಿದಾಗ ಆಗುವ ಸ್ಫೋಟ ಕೊಡುವ ಅರ್ಥ ಬೇರೆ. 'ನ' ಸೇರಿದಾಗ ಬೇರೆ ಇತ್ಯಾದಿ. ಈ ಪ್ರಕ್ರಿಯೆಯನ್ನೇ ವಿಸ್ತರಿಸಿ "ವರ್ಣಾಶ್ರಾನಿ ಪದಾನ್ಯಾಹುಃ ಪಾದಾಶ್ಚತದಧೀಶ್ವರಾಃ ಪಾದಾಶ್ಚಾರ್ಥ ಋಚಾಧೀನಾಃ...." ಇತ್ಯಾದಿಯಾಗಿ ಋಕ್, ಮಂತ್ರ, ಅಧ್ಯಾಯ ಹೀಗೆ ಸಂದರ್ಭಗಳು ಪದ, ಪಾದ, ಋಚಗಳ ಅರ್ಥಗಳನ್ನು ಹೇಗೆ ನಿಯಂತ್ರಿಸುವವೆಂದು ವಿವರಿಸಿದರು. ಇಲ್ಲಿ ಪ್ರತಿಯೊಂದು ಹಂತದಲ್ಲಿಯೂ ನಡೆಯುವುದು ಸ್ಫೋಟವೇ. ಆದರ ಆಶ್ರಯ ಯಾವುದು ? ವರ್ಣವೊ ಪದವೋ ಋಕ್ಕೋ ಮಂತ್ರವೊ ಎಂದು ಕೇಳಿದರೆ ಅದರ ಆಶ್ರಯ ಪದದ ಅಂಗವಲ್ಲ ಪಾದದ ಅಂಗವಲ್ಲ ಋಕ್ಕಿನ ಅಂಗವಲ್ಲ ಸಮಗ್ರ ಪದ, ಪಾದ, ಋಕ್, ಆಯಾ ಸ್ಫೋಟ ಕೊಡುವ ಅರ್ಥಕ್ಕೆ ಆಶ್ರಯ. ಅದು ಆ ಶಬ್ದ ಶರೀರವನ್ನು ವ್ಯಾಪಿಸಿರುವ ರೀತಿ ಆತ್ಮ ಶರೀರವನ್ನು ವ್ಯಾಪಿಸಿದಂತೆ. ಹಾಗೆ ಧ್ವನಿಯೂ ಸಮಗ್ರ ಕೃತಿಯನ್ನು ಆಶ್ರಯಿಸಿರುತ್ತದೆ. ಅದು ಸ್ಫುಟವಾಗುವುದು (ಸ್ಫೋಟ) ಕೊನೆಯ ಮಾತಿನಿಂದ. ಉದಾ ಬೇಂದ್ರೆಯವರ ಯುಗಾದಿ ಎಂಬ ಕವನವನ್ನು ಹೇಳುವವರು ಅದು ಹೊಸ ವರ್ಷದ ಉತ್ಸಾಹವನ್ನು ವರ್ಣಿಸುವದೆಂಬಂತೆ ಹೇಳುತ್ತಾರೆ. ಆದರ ಕಡೆಯ ಚರಣವನ್ನು ಹೇಳುವುದಿಲ್ಲ. ಅದು "ನಮ್ಮನಷ್ಟೆ ಮರೆತಿದೆ" ಎಂದಿದೆ. ಈ ಚರಣವನ್ನು ನುಡಿದಾಗ ಆಗುವ ಸ್ಫೋಟ ಇಡಿಯ ಕವನವನ್ನು ವ್ಯಾಪಿಸಿ ಅಲ್ಲಿ ಉತ್ಸಾಹದ ಬದಲು ವಿಷಾದದ ಛಾಯೆಯನ್ನು ಕವಿಸುತ್ತದೆ. ಇದು ಸ್ಫುಟವಾದ ಮೇಲೆ ಅದೇ ಕೃತಿಯನ್ನು ಮತ್ತೆ ಹೇಳಿದರೆ ಅದನ್ನು ಹೇಳುವ ರೀತಿಯೇ ಬದಲಾಗುತ್ತದೆ. ವರ್ಣ ಪದ ಪದ್ಯಗಳು ಅವೇ ಆದರೆ ಸುಳಿಯುವ ಭಾವ ಅದನ್ನು ಸೂಚಿಸುವ ನುಡಿತ ಬೇರೆ. ಧ್ವನಿಯಿಸುಗುಂ ಶಬ್ದದಿಂದ" ಅಂಪರೆ ಇದೇ ಅತಿಶಯೋಕ್ತಿಯಿಂದಲ್ಲ, ವಕ್ರೋಕ್ತಿಯಿಂದಲ್ಲ, "ಅರ್ಥದೆ ದೂಷ್ಯಂ' ಅರ್ಥದಲ್ಲಿ, ಅದು ಅಭಿಧಾವೃತ್ತಿಯಿಂದೇ ಆಗಲಿ ಲಕ್ಷಣಾವೃತ್ತಿಯಿಂದೇ ಆಗಲಿ, ವ್ಯಂಜನಾ ವೃತ್ತಿಯಿಂದಲೇ ಆಗಲಿ ಅದನ್ನು ಕಾಣುವುದು ತಪ್ಪು ಎಂಬುದೇ ಮಾರ್ಗಕಾರನ ಅಭಿಪ್ರಾಯ. ಕಮಲದೊಳ ನಿಮಿಷ ಯುಗವೊಪ್ಪಿ ತೋರ್ಪುದು ಎಂಬುದು ಅರ್ಥದೆ ದೂಷ್ಯಂ ಎನ್ನುವುದಕ್ಕೆ ದೃಷ್ಟಾಂತ, ಧ್ವನಿನಿಯಿಸುಗುಂ ಶಬ್ದದಿಂದ ಎನ್ನುವದಕ್ಕಲ್ಲ. "ಅರ್ಥಃ ಶಬ್ದೋ ವಾ" ಎಂದಿರುವುದರಿಂದ ಎರಡೂ ಅಂಶಗಳು ಒಂದೇ ದೃಷ್ಟಾಂತದಲ್ಲಿ ಕಾಣಬೇಕೆಂಬ ಆಗ್ರಹ ನಿರಾಧಾರವಾದ್ದು. ಇಲ್ಲಿ ನಾನು ಸಂಕಲನಕಾರರ ಮತವನ್ನು ಅನುಮೋದಿಸುತ್ತೇನೆ.

ಶಾಸ್ತ್ರಾಭ್ಯಾಸ ಜಡರಾದ ಆಲಂಕಾರಿಗರಿಗೆ ಅರ್ಥವಾಗದ ಈ ಮಾತು ಸಂಪನ್ನ ಕವಿಗೆ ಸಹಜವೆಂಬಂತೆ ಹೊಳೆಯುತ್ತದೆ.

ಧ್ವನಿಯೆನಿಸಿದಳಂಕಾರ = ಧ್ವನಿ ಎಂಬ ಕಾವ್ಯಶೋಭಾಕರ ಧರ್ಮ
ಧ್ವನಿಯೆಸೆವಿನಂ = ವ್ಯಾಪ್ತವಾಗಿ ಶೋಭಿಸುವಂತೆ
ಎಸೆವುದಲ್ಲಿ = ಅಲ್ಲಿ ಶೋಭಿಸುತ್ತದೆ, ಯಾವುದು ? ಎಲ್ಲಿ ? ಮಧುರ ವಿಪಂಚೀಧ್ವನಿಯೊಡನೆ
ಏಕರಾಗಧ್ವನಿಯೆನೆ = ವೀಣೆಯ ಮದುರ ಸ್ವರದಲ್ಲಿ ಬೇರೆಯಲ್ಲವೆಂಬಂತೆ ಬೆರೆತು
ಸೊಗಯಿಪುದು ಕಿನ್ನರ ಧ್ವನಿ ನಗದೊಳ್ = ಕಿನ್ನರ ಧ್ವನಿಯು ಆ ಪರ್ವತದಲ್ಲಿ ಶೋಭಿಸುತ್ತದೆ.

ಇಲ್ಲಿ ಉಪಮಾನಗಳು ಕಾವ್ಯಶರೀರ ಮತ್ತು ಧ್ವನಿ. ಉಪಮೇಯಗಳು ವೀಣೆಯ ಸ್ವರ ಮತ್ತು ಕಿನ್ನರ ಧ್ವನಿ. ಎರಡೂ ಮನೋಹರವಾದುವೇ. ಅವು ವಿವರಿಸುವದಕ್ಕೆ ಬೇರೆ ಬೇರೆಯಾದರೂ ವಸ್ತುತಃ ಒಂದೇ. ಕಾಳಿದಾಸನು "ವಾಗರ್ಥಾವಿವ ಸಂಪೃಕ್ತೌ" ಎಂಬಲ್ಲಿ ಹೇಳುವುದೂ ಇದನ್ನೇ ಜಗತಃ ಪಿತರೌ ಪಾರ್ವತೀ ಪರಮೇಶ್ವರೌ ಹೆಸರು ಎರಡು ವಸ್ತು ಒಂದೇ. ವೈಷ್ಣವರು ಅದನ್ನೇ ಶ್ರೀಃ ಸಾಕ್ಷಾತ್ ಹರೇರಪಮ್ ಎಂದರು ಹಾಗೆಯೇ ವಾಗರ್ಥ, ಹಾಗೆಯೇ ಕಾವ್ಯ ಶರೀರ ಮತ್ತು ಧ್ವನಿ. ಹಾಗೆಂದರೆ ವಿಪಂಚೀ ಧ್ವನಿ ಕಿನ್ನರ ಧ್ವನಿ ಬೇರೆ ಬೇರೆ ಅಲ್ಲವೆ? ಆದ್ದರಿಂದಲೇ "ಎಸೆವಿನಂ" ಎಂಬ ಪದ ; ಸಾಧರ್ಮ್ಯ ಮುಪಮಾ ಭೇದೇ, ಒಂದೇ ಎಂಬಂತೆ.

ಹಾಗಾದರೆ ಆನಂದವರ್ಧನನು "ಅರ್ಥ? ಶಬ್ದೋ ವಾ ವ್ಯಂಕ್ತಃ" ಎಂದರೆ ಅರ್ಥವೂ ವ್ಯಂಜಿಸಬಲ್ಲದು ಎಂದದ್ದೇಕೆ ? ನಿಜ, ಅರ್ಥವೂ ವ್ಯಂಜಿಸಬಲ್ಲದು ಉದಾ: ವೇಣೀಸಂಹಾರ ನಾಟಕದಲ್ಲಿ ದುಂದುಭಿಯ ಶಬ್ದವನ್ನು ಕೇಳಿ ಭೀಮನು ನುಡಿಯುವ ಮಾತು—

ಮಂಥಾಯ ಸ್ತಾರ್ಣವಾಂಭಃ ಪ್ಲುತ ಕುಹರವಲನ್ಮಂದರ ಧ್ವಾನ ಧೀರಃ
ಕೋಣಾಘಾತೇಷು ಗರ್ಜತ್ ಪ್ರಲಯ ಘನಘಟಾನ್ಯೋನ್ಯ ಸಂಘಟ್ಟ ಚಂಡಃ
ಕೃಷ್ಣಾ ಕ್ರೋಧಾಗ್ರದೂತಃ ಕುರುಪತಿ ನಿಧನೋತ್ಪಾತ ನಿರ್ಘಾತ ವಾತಃ
ತೇನಾಸ್ಮತ್ ಸಿಂಹನಾದ ಪ್ರತಿರಸಿತ ಸಯೋ ದುಂದುಭಿಸ್ತಾಡಿತೋಯಮ್?

ಇಲ್ಲಿಯ ಪದಗಳ ಅರ್ಥಾಲಂಕಾರಗಳು ಭೀಮನ ಬಲ ಕ್ರೋಧ ದರ್ಪಗಳನ್ನು ವ್ಯಂಜಿಸುವಂತೆಯೇ ಅಲ್ಲಿ ನುಡಿಯುವ ವ್ಯಂಜನಗಳೂ ಒತ್ತಕ್ಷರಗಳೂ ಅದೇ ವ್ಯಂಜನ ಶಕ್ತಿಯನ್ನು ಘೋಷಿಸುತ್ತವೆ. ಇಲ್ಲಿ ಒಂದು ಕಿನ್ನರರ ಹಾಡು. ಇನ್ನೊಂದು

ವಿಪಂಚೀಧ್ವನಿ. "ಅರ್ಥಃ ಶಬ್ದೋ ವಾ ವ್ಯಂಕ್ತಃ" ಎಂಬ ಆನಂದವರ್ಧನನ ವಿವರಣ ಇದನ್ನೇ ಹೇಳುತ್ತದೆ. ಹಾಗಾದರೆ "ಅರ್ಥದೆ ದೂಷ್ಯಂ" ಎನ್ನುವುದು ಹೇಗೆ ಸಮಂಜಸ ? ಹೀಗೆ : ಇಲ್ಲಿಯ ಅರ್ಥಾಲಂಕಾರಗಳನ್ನೇ ಧ್ವನಿ ಎಂದು ತಿಳಿಯುವುದು ತಪ್ಪು. ಆ ಅರ್ಥಾಲಂಕಾರಗಳ ಒಟ್ಟು ಪರಿಣಾಮ ಧ್ವನಿ. ಆದ್ದರಿಂದ ಅತಿಶಯೋಕ್ತಿ ವಕ್ರೋಕ್ತಿಗಳೇ ಸಾಕು ಎಂದು ಭಾವಿಸಿದ ಆಲಂಕಾರಿಕರೇ ಜಡರಲ್ಲದೆ ಧ್ವನಿ ಎಂಬ ಕಾವ್ಯದ ಆತ್ಮಗುಣವೊಂದಿದೆ ಎಂದು ಪ್ರತಿಪಾದಿಸುವವರಲ್ಲ

ಸಂಕಲನಕಾರರು ಸಂಗ್ರಹಿಸಿ ಹೇಳಿರುವ ಕೆಲವು ಅಭಿಪ್ರಾಯಗಳಲ್ಲಿ "ಧ್ವನ್ಯಾಲಂಕಾರವು ಆಡುನುಡಿ ಸೊಗಡಿನ ಜಾನಪದ ಮೂಲದ್ದು" ಎಂಬ ಅಭಿಪ್ರಾಯ ಯಾರದೆಂಬದನ್ನು ಹೇಳಿಲ್ಲ. ಅದನ್ನು ಹೆಚ್ಚಾಗಿ ವಿವರಿಸುವುದು ಅವಶ್ಯ. ಧ್ವನ್ಯಾಲೋಕದಲ್ಲಿ ದೃಷ್ಟಾಂತಗಳೆಂದು ಉದಾಹರಿಸಿರುವ ಪದ್ಯಗಳು ಹೆಚ್ಚಾಗಿ ಪ್ರಾಕೃತದಲ್ಲಿ ಇರುವುದು ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಏಕೆಂದರೆ ಪ್ರಾಕೃತದಲ್ಲಿ (ಆಡು ಮಾತಿನಲ್ಲಿ) ಸಹಜವಾದ ವಾಗರ್ಥಗಳ ಐಕ್ಯ ಸಂಸ್ಕೃತದಲ್ಲಿ (ಗ್ರಂಥಸ್ಥ ಭಾಷೆಯಲ್ಲಿ) ವ್ಯಕ್ತವಾಗುವುದು ಸಾಧ್ಯವಿಲ್ಲ. ಏಕೆಂದರೆ ಸ್ಥಳೀಯವಾದ ಅನೇಕ ಆಡುನುಡಿಗಳನ್ನಾಡುವ ವಿಸ್ತಾರವಾದ ಸಮುದಾಯಕ್ಕೆ ಅರ್ಥವಾಗಬೇಕಾದರೆ ಅರ್ಥವನ್ನು ಶಬ್ದದಿಂದ ಬೇರ್ಪಡಿಸಿ ಶಬ್ದಕ್ಕೆ ಸಾಧಾರಣ ರೂಪವನ್ನು ಕೊಡಬೇಕಾತ್ತದೆ. ಆದ್ದರಿಂದಲೇ ಶಾಸ್ತ್ರಗ್ರಂಥಗಳಲ್ಲಿ ಧ್ವನಿಗಾಗಲಿ ವ್ಯಂಜನಾ ವೃತ್ತಿಗಾಗಲಿ ಸ್ಥಳವಿಲ್ಲ. ಸಂಸ್ಕೃತವು ವ್ಯಾಪಕವಾಗಿ ಬೆಳೆದ ಮುಂದಿನ ಕಾಲದಲ್ಲಿ ಅದು ಬೇರೆ ಮೂಲ ಭಾಷೆಗಳೊಡನೆ ಬೆರೆತಾಗ ಚಂಪೂ ಪ್ರಬಂಧಗಳು ಉದ್ಭವಿಸಿದವೆಂದು ನನ್ನ ಭಾವನೆ. ಅಲ್ಲಿ ಗದ್ಯ ಪದ್ಯ ಕಂದ ವೃತ್ತಗಳ ವ್ಯತ್ಯಾಸದಿಂದ ಶಬ್ದಗಳ ಧ್ವನಿ ವ್ಯಾಪಾರವನ್ನು ಸಾಧಿಸುವುದು ಸಾಧ್ಯವೆಂದು ಅವರಿಗೆ ತೋರಿರಬಹುದು.

ಖಳದುಃಶಾಸನವಕ್ಷಸ್ಥಳೋಚ್ಚಳತ್
ಕೃಷ್ಣರಕ್ತ ಜಳದಿಂ ಕೋಪಾನಳನಂ ಮನ್ನಿಸದಿನ್ನುಂ
ಗಳಗಳಿತ ಸುಕೋಪನಿರ್ಝ ತೆರದಿಂದಿರ್ದೈ

ಇಲ್ಲಿ ವ್ಯಂಜನಗಳ ಧ್ವನಿ ಅರ್ಥದಲ್ಲಿ ಕಾಣುವ ದ್ರೌಪದಿಯ ಎದೆಯಲ್ಲಿ ಕುದಿಯುವ ಸಂತಾಪವನ್ನು ಧ್ವನಿಸುತ್ತದೆ.

ಆಧುನಿಕ ಕಾವ್ಯದಲ್ಲಿ ಧ್ವನಿಯ ಉದಾಹರಣೆಗಳು ಬೇಂದ್ರೆಯವರ ಕವಿತೆಗಳಲ್ಲಿ ವಿಪುಲವಾಗಿ ದೊರೆಯುವುದಕ್ಕೆ ಕಾರಣ ಅವರ ಭಾಷೆ ಜಾನಪದಕ್ಕೆ ಹತ್ತಿರವಾಗಿರುವುದೇ. "ಮುಗಿಲ ಮಾರಿಗೆ ರಾಗ ರತಿಯ ನಂಜ ಏರಿತ್ತss" ಎಂಬಲ್ಲಿರುವುದು ಕೇವಲ ಶಬ್ದ ಮೂಲವಾದ ಧ್ವನಿಯೇ. ಪದಗಳಿಗೆ ಸಮಂಜಸವಾದ ಅರ್ಥ ಹೇಳುವುದು ಕಷ್ಟ. ಹಾಗೆಯೇ "ಏನೊ ಏನೊ ಜೇನೊ ಜೇನೋ ಏನೊ ಗುಂ ಗುಂ ನಾದ"

"ಅರ್ಥಃ ಶಬ್ದೋ ವಾ ವ್ಯಂಕ್ತಃ", ಅರ್ಥವೇ ಧ್ವನಿಯಾಗಬಹುದು. ಮೇಲೆ ಉದಾಹರಿಸಿದ "ಯುಗಾದಿ" ಕವನದಂತೆ, ಶಬ್ದವೇ ಧ್ವನಿಯಾಗಬಹುದು, ಈ ಪಂಕ್ತಿಗಳಲ್ಲಿಯಂತೆ. ಎರಡರಲ್ಲೂ ಆಗಬಹುದು ; ಮೇಲೆ ಉದಾಹರಿಸಿದ ವೇಣೀ ಸಂಹಾರ ಮತ್ತು ಗದಾಯುದ್ಧಗಳ ಪದ್ಯಗಳಂತೆ. ಕಿನ್ನರ ಧ್ವನಿ ವಿಪಂಚೀ ಧ್ವನಿಗಳು ಬೇರೆ ಬೇರೆಯಾಗಿಯೂ ರಂಜಿಸಬಹುದು, ಒಂದಾಗಿಯೂ ರಂಜಿಸಬಹುದು.

ಸಂಕಲನಕಾರರು ಬಡಿಸಿದ ಕಾವ್ಯಶಾಸ್ತ್ರ ವಿನೋದದಲ್ಲಿ ಸ್ವಲ್ಪ ಎಡಚಾಗುವ ಅಂಶಗಳೂ ಎರಡಿವೆ. ಒಂದು : ಅಭಿಪ್ರಾಯಗಳ ವಿನ್ಯಾಸಕ್ರಮ ಸ್ಪಷ್ಟವಾಗಿಲ್ಲ. ಅದನ್ನು ತಿಳಿಯುವುದಕ್ಕೆ ಒಂದು ವಿಷಯಾನುಕ್ರಮಣಿಕೆಯನ್ನು ಮಾಡಬೇಕೆಂಬ ನನ್ನ ಯತ್ನ ಸಫಲವಾಗಲಿಲ್ಲ. ಇಂತಹ ಗ್ರಂಥಗಳಿಗೆ ವಿಷಯ ಸೂಚಿ (ಇಂಡಕ್ಸ್) ಇರುವುದು ದೊಡ್ಡ ಅನುಕೂಲ. ಎರಡೂ ಇಲ್ಲದಿರುವುದು ವಿನೋದದ ಆಸ್ವಾದನೆಗೆ ವಿಘ್ನವಾಗುತ್ತದೆ. ಎರಡು : ಅಚ್ಚಿನ ಸ್ಖಾಲಿತ್ಯಗಳು ಸ್ಪಷ್ಟವಾಗಿರುವಲ್ಲಿ ಅವನ್ನು ಓದುಗರು ತಿದ್ದಿಕೊಳ್ಳಬಹುದು. ಆದರೆ "ಶ್ರುತಿ" ಎಂಬ ಪದವನ್ನು ಉದ್ದಕ್ಕೂ "ಶೃತಿ" ಎಂದು ಬರೆದಿರುವುದು ಅಚ್ಚಿನ ಸ್ಖಾಲಿತ್ಯವಲ್ಲ. ಲೇಖಕರ ದೋಷವೇ, ವೇದ ಅಥವಾ ಕರ್ಣೇಂದ್ರಿಯ ಗೋಚರವಾದ ಗುಣ ಎಂಬಲ್ಲಿ ಸರಿಯಾದ ಶಬ್ದ "ಶ್ರುತಿ", ಮೂಲ ಧಾತು "ಶ್ರು", ಕ್ರಿಯಾಪದ ರೂಪ ಶೃಣೋತಿ ಆದರೂ ನಾಮ ಪದ ರೂಪ "ಶ್ರುತಿ" ಎಂದೇ ಆಗುತ್ತದೆ. "ಶೃತಿ" ಎಂದು ಬರೆದರೆ ಅದರ ಅರ್ಥ "ಕುದಿಸುವ ಕ್ರಿಯೆ" ಎಂದಾಗಬಹುದು. ಕನ್ನಡದಲ್ಲಿ ದೀರ್ಘ ಋಕಾರ ಬಳಕೆಯಲ್ಲಿಲ್ಲ. ಆದರಲ್ಲಿ ಮೂಲವನ್ನು ಹುಡುಕಿದರೆ "ಎಳೆ ಎಳೆಯಾಗಿ ಸೀಳುವ ಕತ್ತರಿಸುವ ಕ್ರಿಯೆ" ಎಂದಾಗಬಹುದು. ಇಂತಹ ರೂಪವನ್ನು ಇಲ್ಲಿ ಸಂಸ್ಕೃತ ತಿಳಿದವರು ಬಳಸಿರುವುದು ವಿಷಾದಕರ. ಇದನ್ನು ಇಷ್ಟು ವಿಸ್ತರಿಸಿರುವುದಕ್ಕೆ ಕಾರಣ ಕನ್ನಡ ಬರೆಯುವವರೆಲ್ಲರಲ್ಲಿಯೂ ನನಗೆ ಸಾಮಾನ್ಯವಾಗಿ ಕಂಡ ಸ್ವರ ವ್ಯಂಜನ ವಿನ್ಯಾಸ (ಸ್ಪೆಲ್ಲಿಂಗ್)ದಲ್ಲಿ ಒಂದು ಪ್ರಮಾಣಿತ ರೂಪವನ್ನು ಅಂಗೀಕರಿಸದಿರುವುದು. ಇಂಗ್ಲಿಷ್ ಸಂಸ್ಕೃತ ಬರೆಯುವಲ್ಲಿ ಅವರೇ ವಹಿಸುವ ಕಾಳಜಿಯನ್ನು ಇಲ್ಲೇಕೆ ವಹಿಸುವುದಿಲ್ಲ ? ತಾಯ್ನುಡಿ ಎಂದು ಸದರವೆ ? ಸರಸ್ವತಿ ವಿದ್ಯಾದೇವಿ ಎಂದು ಗೌರವಿಸುವುದು ವಿಹಿತವಲ್ಲವೆ ?

—0—

# ವಸ್ತು ಸಂಗ್ರಹ

## ಡಾ|| ಎಂ. ಚಿದಾನಂದ ಮೂರ್ತಿ ಅಭಿನಂದನ ಸಮಾರಂಭ

ಸಾಹಿತ್ಯ ಸಂಶೋಧನೆ, ಭಾಷಾವಿಜ್ಞಾನ, ಸಮಾಜ ವಿಜ್ಞಾನ, ಶಾಸನಾಧ್ಯಯನ, ಇತಿಹಾಸ, ಜಾನಪದ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ನುಡಿದು ದುಡಿದು ಹೆಸರು ಮಾಡಿರುವ ಡಾ|| ಎಂ. ಚಿದಾನಂದ ಮೂರ್ತಿಯವರಿಗೆ ಅರುವತ್ತು ವರ್ಷ ತುಂಬಿದ ಸಂದರ್ಭ, ಅವರ ಅಭಿಮಾನಿಗಳಿಂದ ದಿನಾಂಕ : ೩-೮-೧೯೯೧ ಶನಿವಾರ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಂದನ ಸಮಾರಂಭ ಏರ್ಪಟ್ಟಿತು. ಶ್ರೀ ಸಿದ್ಧಗಂಗಾಮಠಾಧೀಶರ ಅಧ್ಯಕ್ಷತೆಯಲ್ಲಿ ಶ್ರೀ ಎ. ಎನ್. ಮೂರ್ತಿರಾವ್ ಮತ್ತು ಡಾ|| ಎಂ. ಎಂ. ಕಲಬುರ್ಗಿ ಇವರು ಅಭಿನಂದನ ಭಾಷಣಗಳನ್ನು ಮಾಡಿದರು. 'ಕ್ರಿಯಾ ಚೇತನ' ಎಂಬ ಸ್ಮೃತಿ ಸಂಚಿಕೆ ಮತ್ತು 'ಸಂಶೋಧನ' ಎಂಬ ಮೌಲಿಕ ಗೌರವ ಸಂಪುಟಗಳನ್ನು ಬಿಡುಗಡೆ ಮಾಡಲಾಯಿತು. ಅಭಿನಂದನ ಸಮಿತಿಯ ಅಧ್ಯಕ್ಷರಾದ ಡಾ|| ಸಾ. ಶಿ. ಮರುಳಯ್ಯ ಅವರು ಯೋಜನೆಯ ಯಶಸ್ಸಿಗೆ ನೆರವಾದವರೆಲ್ಲರನ್ನು ಸ್ಮರಿಸಿ ಕೆಲವು ಪ್ರಶಸ್ತಿಗಳನ್ನು ಸ್ಥಾಪಿಸುವ ಆಶಯವನ್ನು ವ್ಯಕ್ತಪಡಿಸಿದರು.

**ಮಿಥಿಕ್ ಸೊಸೈಟಿ ಸಾಹಿತ್ಯ ಸನ್ಮಾನ :**

ಬೆಂಗಳೂರಿನ ಮಿಥಿಕ್ ಸೊಸೈಟಿಯ ಆಸರೆಯಲ್ಲಿ ದಿನಾಂಕ : ೧೯-೮-೯೧ ರಂದು ಜರುಗಿದ ಡಾ|| ಎಂ. ಎಚ್. ಕೃಷ್ಣ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಮೂವರು ವಿದ್ವಾಂಸರನ್ನು ಗೌರವಿಸಲಾಯಿತು. ಪ್ರೊ|| ಟಿ ಕೇಶವ ಭಟ್ಟರನ್ನು ಭಾಷಾಶಾಸ್ತ್ರ, ವ್ಯಾಕರಣ, ಛಂದಸ್ಸು, ನಿಘಂಟು ರಚನೆ, ಗ್ರಂಥ ಸಂಪಾದನೆ, ವಿಮರ್ಶೆ, ಕಾವ್ಯ ರಚನೆಗಳಲ್ಲಿ ವೈಚಕ್ಷಣ್ಯವನ್ನೂ, ಯಕ್ಷಗಾನ-ಗಮಕ ಪರಿಣತೆಯನ್ನೂ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನೂ ಅನುಲಕ್ಷಿಸಿ ಸನ್ಮಾನಿಸಲಾಯಿತು

ಶ್ರೀ ಎನ್. ಬಸವಾರಾಧ್ಯರನ್ನು ಕನ್ನಡ-ಕನ್ನಡ ನಿಘಂಟು ರಚನೆಗೆ, ಪ್ರಾಚ್ಯ ವಿದ್ಯಾಸಂಶೋಧನೆಗೆ, ಗ್ರಂಥಸಂಪಾದನೆಗೆ, ಹಲವಾರು ಉದ್ಗ್ರಂಥಗಳ ಪ್ರಕಟನೆಗೆ ಸಲ್ಲಿಸಿದ ಸೇವೆಗಾಗಿ ಸನ್ಮಾನಿಸಲಾಯಿತು.

ಡಾ|| ಎ. ಎ. ನರಸಿಂಹಮೂರ್ತಿಯವರನ್ನು ಪ್ರಾಚೀನ ಇತಿಹಾಸ, ಪುರಾತತ್ವ ಇಲಾಖೆಯಲ್ಲಿ ಪ್ರಾಧ್ಯಾಪಕತೆ, ವಾಸ್ತುಶಿಲ್ಪ, ಶಾಸನ ಶಾಸ್ತ್ರಗಳಲ್ಲಿ

ಪರಿಣತಿ, ನೂರಕ್ಕೂ ಮಿಕ್ಕಿ ಪ್ರಕಟಿಸಿದ ಸಂಶೋಧನ ಪ್ರಬಂಧಗಳು, ಬಹು ಭಾಷಾ ಪಾಂಡಿತ್ಯ ಇವನ್ನು ಪರಿಗಣಿಸಿ ಸನ್ಮಾನಿಸಲಾಯಿತು.

ಪೂರ್ವೋಕ್ತ ಅಭಿನಂದಕರಿಗೆ, ಪ್ರಶಸ್ತಿ ವಿಜೇತರಿಗೆ, ಸನ್ಮಾನಿತರಿಗೆ ಬಿ. ಎಂ. ಶ್ರೀ ಪ್ರತಿಷ್ಠಾನ ಕರ್ನಾಟಕ ಲೋಚನ ಮುಖೇನ ಗೌರವ ಶುಭಾಷಯ ಗಳನ್ನು ಸಲ್ಲಿಸುತ್ತದೆ.

## ಬೆಳಗಾವಿಯಲ್ಲಿ ಕನ್ನಡ ಶಕ್ತಿ ಕೇಂದ್ರದ ಮಹಾಧಿವೇಶನ :

ಕನ್ನಡ ಶಕ್ತಿ ಕೇಂದ್ರ ರಾಜ್ಯಮಟ್ಟದಲ್ಲಿ ಬೆಳೆಯುತ್ತಿರುವ ಕನ್ನಡ ಪರ-ಸಂಘಟನೆ. ಇದು ಪ್ರತಿ ವರ್ಷ ವಾರ್ಷಿಕ ಅಧಿವೇಶನಗಳನ್ನು ನಡೆಸುತ್ತ ಬಂದಿದೆ. ಇತ್ತೀಚೆಗೆ (ಡಿಸೆಂಬರ್ 7, 8) ಬೆಳಗಾವಿಯಲ್ಲಿ ಅಲ್ಲಿಯ ಜಿಲ್ಲಾ ಕೇಂದ್ರದ ಸಹಯೋಗದಲ್ಲಿ ಅರ್ಥಪೂರ್ಣವಾದ ಅಧಿವೇಶನವನ್ನು ನಡೆಸಿದೆ. ಕನ್ನಡ ವಾತಾವರಣವನ್ನು ಬೆಳಸಬೇಕಾದ ಅಗತ್ಯವಿರುವ ಬೆಳಗಾವಿಯಲ್ಲಿ ಇಂಥ ಕಾರ್ಯಕ್ರಮ ನಡೆದದ್ದು ಸೂಕ್ತವಾಗಿತ್ತು. 'ಬೆಳಗಾವಿ : ಪರಂಪರೆ ಮತ್ತು ಪ್ರಗತಿ, ಭಾಷಾವಾರು ಪ್ರಾಂತಗಳು, ಪ್ರಾದೇಶಿಕ ಸ್ವಾಯತ್ತತೆ ಮತ್ತು ಭಾರತದ ಅಖಂಡತೆ', 'ಕನ್ನಡ ಪರ ಆದೇಶಗಳು, ಹುಸಿಯಾದ ಭರವಸೆಗಳು' ಎಂಬ ವಿಚಾರ ಗೋಷ್ಠಿಗಳ ಜೊತೆಗೆ ಎಲ್ಲ ಸಮ್ಮೇಳನಗಳಂತೆ ಉದ್ಘಾಟನೆ, ಕವಿಗೋಷ್ಠಿ, ಸಮಾರೋಪಗಳನ್ನು ವ್ಯವಸ್ಥೆ ಮಾಡಿತು. ಅಧ್ಯಕ್ಷ ಭಾಷಣ ಮಾಡಿದ ಡಾ|| ಅನಂತಮೂರ್ತಿ ಅವರು ಇಂಗ್ಲಿಷ್ ಪ್ರಭಾವದಿಂದ ಕನ್ನಡದ ಮಕ್ಕಳು ಪರಕೀಯರಾಗುತ್ತಿರುವುದರ ಬಗೆಗೆ ಆತಂಕ ವ್ಯಕ್ತಪಡಿಸಿದರು.

## ಐತಿಹಾಸಿಕ ಪರಂಪರೆ ಉಳಿಸಿ ದಿನಾಚರಣೆ :

ಕರ್ನಾಟಕ ಇತಿಹಾಸ ಅಕಾಡೆಮಿ ಕಳೆದ ವರ್ಷದಿಂದ ಸೆಪ್ಟೆಂಬರ್ 30 ಅನ್ನು ಐತಿಹಾಸಿಕ ಪರಂಪರೆ ಉಳಿಸಿ ದಿನವನ್ನಾಗಿ ಆಚರಿಸುತ್ತಿದೆ. ಆಕರ್ಷಣೀಯ ಭಿತ್ತಿ ಚಿತ್ರವನ್ನು ಹೊರತಂದಿದ್ದು, ಅನೇಕ ಕಾರ್ಯಕ್ರಮಗಳನ್ನು ತಾನೂ ನಡೆಸಿ ಇತರ ಸಂಘಸಂಸ್ಥೆಗಳಿಗೂ ಕರೆಕೊಟ್ಟು, ಪ್ರಾಚೀನ ದೇವಾಲಯ, ಶಿಲ್ಪ, ಶಾಸನ, ಹೊಸಪ್ರತಿ, ಓಲೆಗರಿಗ್ರಂಥ ಇತ್ಯಾದಿಗಳನ್ನು ಉಳಿಸುವತ್ತ ಸಾರ್ವಜನಿಕರ ಆಸಕ್ತಿಯನ್ನು ಸೆಳೆಯುವ ಪ್ರಯತ್ನವನು ಮಾಡುತ್ತಿರುವುದು ಅಗತ್ಯವಾದ ಕಾರ್ಯವಾಗಿದೆ.

**ಮಾತೃಭಾಷೆಯಲ್ಲೇ ಶಿಕ್ಷಣ  ಸಮಿತಿ ಶಿಫಾರಸು**

ಸರ್ಕಾರದಿಂದ ನೇಮಕಗೊಂಡಿದ್ದ ಶಿಕ್ಷಣ ತಜ್ಞರ ಸಮಿತಿ ನೀಡಿರುವ ಕೆಲವು ಪ್ರಮುಖ ಶಿಫಾರಸುಗಳನ್ನು ಇತ್ತೀಚೆಗೆ ಪ್ರಕಟಿಸಲಾಗಿದೆ. ಮಾತೃಭಾಷೆಯ ಮಾಧ್ಯಮದಲ್ಲಿಯೇ ಪ್ರಾಥಮಿಕ ಶಿಕ್ಷಣ ಇರಬೇಕು, ಅನಧಿಕೃತ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ರದ್ದು ಮಾಡಬೇಕು. ಹಾಲಿ ಇರುವ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಸಕ್ತ ವರ್ಷದಿಂದಲೇ ಮಾತೃಭಾಷಾ ಮಾಧ್ಯಮವನ್ನಾಗಿ ಪರಿವರ್ತಿಸಬೇಕು. ನೇಮಕಾತಿಗಳಲ್ಲಿ ಕನ್ನಡ ಪ್ರಥಮ ಭಾಷೆಯಾಗಿ ಕಲಿತವರಿಗೇ ಕಡ್ಡಾಯಗೊಳಿಸಬೇಕು ಎಂಬ ಹಲವಾರು ಶಿಫಾರಸ್ಸುಗಳನ್ನು ನೀಡಿರುವ ಸಮಿತಿಯಲ್ಲಿ ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ|| ಎಲ್. ಎಸ್. ಶೇಷಗಿರಿ ರಾವ್ ಇದ್ದರು. ಮಕ್ಕಳು ತಮ್ಮ ತಮ್ಮ ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣವನ್ನು ಅಭ್ಯಾಸ ಮಾಡುವುದು ಲೋಕ ರೂಢಿ ಮತ್ತು ಶಿಕ್ಷಣವೇತ್ತರ ಅಭಿಮತ, ಸಕ್ರಮ. ಆದರೆ ನಮ್ಮಲ್ಲಿ ಅದು ತದ್ವಿರುದ್ಧವಾಗಿ ಶಿಕ್ಷಣ ವ್ಯವಸ್ಥೆ ಸೋತಿದೆ. ಇದನ್ನು ಪುನಃ ಚೇತನಗೊಳಿಸುವಲ್ಲಿ ಈ ಸಮಿತಿಯ ಶಿಫಾರಸ್ಸುಗಳು ಸೂಕ್ತ ಮಾರ್ಗದರ್ಶಕಗಳಾಗ ಬಲ್ಲವು

# ಪ್ರತಿಷ್ಠಾನದ ವಾರ್ತೆ

**ಸಹೃದಯ ಗೋಷ್ಠಿ :**

ಪ್ರತಿಷ್ಠಾನದ ಆಶ್ರಯದಲ್ಲಿಯೇ ನಡೆಯುವ ಯುವ ಸಾಹಿತ್ಯ ವೇದಿಕೆಯಾದ ಸಹೃದಯ ಗೋಷ್ಠಿಯಲ್ಲಿ ದಿನಾಂಕ 2-8-91 ರಂದು ಡಾ|| ಎಚ್. ಎಸ್. ಗೋಪಾಲರಾವ್ ಅವರು "ಶಾಸನೋಕ್ತದಾನ ಪ್ರಭೇದಗಳು" ಎಂಬ ವಿಷಯವಾಗಿ ಮಾತನಾಡಿದರು.

**ಸಂಗಮರ ಕಾಲದ ವಿಜಯ ಗ್ರಂಥ ಬಿಡುಗಡೆ ಮತ್ತು ಎಂ. ವಿ. ಸಿ. ಸ್ಮರಣೆ**

ಎಂ. ವಿ ಸೀ ಅವರ 82 ನೇ ಜನ್ಮದಿನದ ಸಂಸ್ಮರಣೆಗಾಗಿ 21-9-91 ರಂದು ನಡೆದ ಕನ್ನಡದಲ್ಲಿ ಸಂಶೋಧನೆ-ಇಂದು-ಮುಂದು ಎಂಬ ವಿಚಾರ ಗೋಷ್ಠಿಯಲ್ಲಿ ಡಾ|| ಎಂ ಚಿದಾನಂದ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಡಾ|| ಟಿ.ವಿ ವೆಂಕಟಾಚಲ ಶಾಸ್ತ್ರಿಗಳು "ಸಂಶೋಧನೆ ಇಂದು" ಎಂಬ ವಿಷಯವಾಗಿ ಮತ್ತು ಡಾ|| ಎನ್. ಎಸ್. ತಾರನಾಥ ಅವರು "ಸಂಶೋಧನೆ ಮುಂದು" ಎಂಬ ವಿಷಯವಾಗಿ ಮಾತನಾಡಿದರು.

ಗೋಷ್ಠಿಯು ಅನಂತರ ನಡೆದ ಕಾರ್ಯಕ್ರಮದಲ್ಲಿ ಪ್ರತಿಷ್ಠಾನವು ಪ್ರಕಟಿಸಿದ 'ಸಂಗಮರ ಕಾಲದ ನಗರ' ಎಂಬ ಗ್ರಂಥವನ್ನು ಡಾ|| ಸೂರ್ಯನಾಥ ಕಾಮತ್ ಅವರೂ ಸಂಸ್ಮರಣ ಸಮಿತಿ ಪ್ರಕಟಿಸಿದ 'ಕಲಾರಾಧನ' ಎಂಬ ಎಂ. ವಿ. ಸೀ. ಸಂಸ್ಮರಣ ಸಂಚಿಕೆಯನ್ನು ಮೇಯರ್ ಶ್ರೀ ಕೆ. ನಾರಾಯಣ ಸ್ವಾಮಿ ಅವರೂ ಬಿಡುಗಡೆ ಮಾಡಿದರು. ಎಂ. ಎಚ್. ಕೃಷ್ಣಯ್ಯ ಹಾಗೂ ಶ್ರೀ ನಾಗಭೂಷಣ ಎಂ.ವಿ.ಸೀ. ಸಂಸ್ಮರಣ ಉಪನ್ಯಾಸಗಳನ್ನು ನೀಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ|| ಎಲ್. ಎಸ್. ಶೇಷಗಿರಿ ರಾವ್ ಅವರು ಸ್ವಾಗತ ಕೋರಿದರು. ಗೌರವಾಧ್ಯಕ್ಷರಾದ ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಶ್ರೀ ಮೇಯರ್ ಅವರು ಪ್ರತಿಷ್ಠಾನದ ನಿವೇಶನದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

**ಶಂಬಾ ಸಂಸ್ಮರಣೆ :**

ಶಂಬಾ ಸಂಸ್ಮರಣೆ ಸಮಿತಿ ಹಾಗೂ ಬಿ. ಎಂ. ಶ್ರೀ. ಪ್ರತಿಷ್ಠಾನದ ಸಹೃದಯ ಗೋಷ್ಠಿಗಳು ವಿವಿಧ ಸಂಘ ಸಂಸ್ಥೆಗಳ ನೆರವಿನಿಂದ ಪ್ರತಿ ತಿಂಗಳೂ ಸಂಸ್ಮರಣ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ದಿನಾಂಕ 28-10-91 ರಂದು ಬಿ. ಎಂ. ಶ್ರೀ. ಪ್ರತಿಷ್ಠಾನದಲ್ಲಿ ಡಾ|| ಬಸವರಾಜ ಕಲ್ಗುಡಿ ಅವರು ಡಾ|| ಶಂಬಾ ಜೋಷಿಯವರ ಕಣ್ಮರೆಯಾದ ಕನ್ನಡ, ಕನ್ನಡ ನೆಲೆ ಮತ್ತು ಎಡೆಗಳು ಹೇಳಿದ ಕಂನಾಡ ಗ್ರಂಥಗಳನ್ನು ಕುರಿತು ಮಾತನಾಡಿದರು.

ದಿನಾಂಕ 28-11-91 ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರೊ|| ಆರ್.ಜಿ. ಕುಲಕರ್ಣಿಯವರು "ಋಗ್ವೇದದ ಸಾರ-ನಾಗ ಪ್ರತಿಮಾ ವಿಚಾರ" ಪುಸ್ತಕಗಳನ್ನು ಕುರಿತು ಉಪನ್ಯಾಸ ಮಾಡಿದರು.

ದಿನಾಂಕ 28-12-91 ರಂದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ "ಹಾಲು ಮತ ದರ್ಶನ" ಪುಸ್ತಕ ಕುರಿತು ಡಾ|| ಎಚ್.ಎಸ್. ಗೋಪಾಲ ರಾಯ್ ಅವರು ಮಾತನಾಡಿದರು.

## ಅಭಿನಂದನೆ

### ಡಾ|| ವಿ. ಕೃ. ಗೋಕಾಕರಿಗೆ ಜ್ಞಾನಪೀಠ ಪ್ರಶಸ್ತಿ

ಕನ್ನಡದ ಹಿರಿಯ ಆಧುನಿಕ ಸಾಹಿತಿ, ಪ್ರಾಚಾರ್ಯ, ಖ್ಯಾತ ಕವಿ ಡಾ|| ಗೋಕಾಕರಿಗೆ ೧೯೯೦ ನೆಯ ವರ್ಷದ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ

ಬಂದಿರುವುದು ಕನ್ನಡಿಗರಿಗೆಲ್ಲ ಅಭಿಮಾನಕರ. ೧೯೬೦-೭೦ರ ಅವಧಿಯ ಅವರ ಸಾಹಿತ್ಯದ ಅಮೂಲ್ಯ ಸೇವೆಯನ್ನು ಅನುಲಕ್ಷಿಸಿ ಈ ಪ್ರಶಸ್ತಿ ಅವರಿಗೆ ಬಂದಿದೆ. ೮೨ ವರ್ಷ ವಯಸ್ಸಿನ ಗೋಕಾಕರು ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡಿಗರಲ್ಲಿ ಐದನೆಯವರು.

## ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು

ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ೧೯೯೦ ರ ಅನುವಾದ ಪ್ರಶಸ್ತಿ ದೊರಕಿದೆ. ಕಳೆದ ನಲ್ವತ್ತು ವರ್ಷಗಳಲ್ಲಿ ಹೊರಬಂದ ಅತ್ಯುತ್ತಮ ಅನುವಾದ ಕೃತಿಯೆಂದು ಪ್ರೊ|| ಪರಮೇಶ್ವರ ಭಟ್ಟರ 'ಕಾಳಿದಾಸ ಮಹಾಸಂಪುಟ ವನ್ನು ಪರಿಗಣಿಸಿ, ಈ ಪ್ರಶಸ್ತಿಯನ್ನು ಕೊಡಲಾಗಿದೆ

೨) ಡಾ|| ಚಂದ್ರಶೇಖರ ಕಂಬಾರರ 'ಸಿರಿ ಸಂಪಿಗೆ' ಎಂಬ ನಾಟಕ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯು ಶ್ರೇಷ್ಠ ಕೃತಿ ಪರಿಗಣಿಸಿ ಪ್ರಶಸ್ತಿಯನ್ನು ನೀಡಿದೆ.

೩) ಡಾ|| ಎಚ್. ಎಸ್. ವೆಂಕಟೇಶ ಮೂರ್ತಿಯವರ ಭಾಷಾಂತರ ಕೃತಿ 'ಋತು ವಿಲಾಸ' ವು ಕೇಂದ್ರ ಸಾಹಿತ್ಯ ಅಕಾಡೆಮಿಯ ೧೯೯೧ ನೆಯ ವರ್ಷದ ಭಾಷಾಂತರ ಪ್ರಶಸ್ತಿಯನ್ನು ಗಳಿಸಿದೆ. ಈ ಕೃತಿ ಕಾಳಿದಾಸ ಕವಿಯ 'ಋತು ಸಂಹಾರ' ಎಂಬ ಕೃತಿಯ ಕನ್ನಡದ ಪದ್ಯಾತ್ಮಕ ಭಾಷಾಂತರ.

**ಚದುರಂಗರಿಗೆ ಗುಲ್ವಾಡಿ ಪ್ರಶಸ್ತಿ :**

ಕನ್ನಡದ ಹಿರಿಯ ಸಾಹಿತಿ ಚದುರಂಗರಿಗೆ ೧೯೯೧ ಡಿಸೆಂಬರಿನಲ್ಲಿ ಗುಲ್ವಾಡಿ ವೆಂಕಟರಾವ್ ಸ್ಮಾರಕ ಸಾಹಿತ್ಯ ಪ್ರಶಸ್ತಿ ದೊರಕಿದೆ.

**ಗಣ್ಯರಿಗೆ ರಾಜ್ಯ ಪ್ರಶಸ್ತಿ :**

ರಾಜ್ಯ ಸರ್ಕಾರ ಪ್ರತಿವರ್ಷ 'ರಾಜ್ಯ ಪ್ರಶಸ್ತಿ' ಯ ಹೆಸರಿನಲ್ಲಿ ಅನೇಕ ಗಣ್ಯರನ್ನು ಸತ್ಕರಿಸಿ ತನ್ನ ಗೌರವವನ್ನು ತೋರಿಸುವುದರ ಮೂಲಕ ಅವರುಗಳ ಸೇವೆಯನ್ನೂ, ಸಾಧನೆಯನ್ನೂ ಗುರುತಿಸುತ್ತದೆ ಈ ಬಾರಿ ಒಂದು ನೂರು ಮಂದಿಗೆ ಈ ಪ್ರಶಸ್ತಿಯನ್ನು ಘೋಷಿಸಿದ್ದು ಸಾಹಿತ್ಯ ಭಾಗದಲ್ಲಿ ಪ್ರೊ|| ಎಸ್.ಆರ್. ಮಳಗಿ, ಪ್ರೊ|| ಜಿ. ವೆಂಕಟಸುಬ್ಬಯ್ಯ, ಪಿ ಕೆ. ನಾಗರಾಜರಾವ್, ಪ್ರೊ||

ಕೀರ್ತಿನಾಥ ಕುರ್ತಕೋಟಿ, ಡಾ|| ಚನ್ನಣ್ಣ ವಾಲಿಕಾರ, ಸಂಶೋಧನ ವಿಭಾಗದಲ್ಲಿ ಡಾ|| ಎಂ. ಎಂ. ಕಲಬುರ್ಗಿ ಮುಂತಾದವರಿಗೆ ನೀಡಿದೆ.

ಪ್ರತಿಷ್ಠಾನದ ಸದಸ್ಯರೂ ಹಿತೈಷಿಗಳೂ ಆಗಿರುವ ಈ ಎಲ್ಲ ಮಹನೀಯರಿಗೆ ಪ್ರತಿಷ್ಠಾನದ ಅಭಿನಂದನೆಗಳು ಸಲ್ಲುತ್ತವೆ.

# ಶ್ರದ್ಧಾಂಜಲಿ

## ಪ್ರೊ|| ಕೆ.ವೆಂಕಟರಾಮಪ್ಪ :

ಕನ್ನಡ, ತೆಲುಗು ಭಾಷೆಗಳಲ್ಲಿ ಉದ್ದಾಮ ಪಂಡಿತರೂ, ಉತ್ತಮ ವಾಗ್ಮಿಗಳೂ ಆಗಿದ್ದ ವೆಂಕಟರಾಮಪ್ಪನವರು ತಮ್ಮ 86 ನೇ ವಯಸ್ಸಿನಲ್ಲಿ ಮೈಸೂರಿನಲ್ಲಿ 2-9-91 ರಂದು ತೀರಿಕೊಂಡರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಜನಪ್ರಿಯ ಅಧ್ಯಾಪಕರಾಗಿ, ವಿನೋದಶೀಲ ಚತುರರೆನಿಸಿದ್ದ ದಿವಂಗತರ ಕನ್ನಡ ಸಾಹಿತ್ಯದ ಪಾಂಡಿತ್ಯವೂ ಮರೆಯುವಂತಹದಲ್ಲ. ಅವರು ಸಂಪಾದಿಸಿರುವ ಕನ್ನಡ 'ಭಾಗವತ' ಅತ್ಯುತ್ತಮ ಕೃತಿ ರತ್ನವಾಗಿದೆ. ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕೃತರಾಗಿದ್ದ ದಿವಂಗತರು ಪ್ರತಿಷ್ಠಾನದ ಗೌರವ ಸದಸ್ಯರೂ ಆಗಿದ್ದರು.

## ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ :

ಹಿರಿಯ ಹಾಸ್ಯ ಸಾಹಿತಿಗಳೂ, ಸ್ವಾತಂತ್ರ್ಯ ಹೋರಾಟಗಾರರೂ ಗಾಂಧಿವಾದಿಗಳೂ ಆಗಿದ್ದ ಡಾ|| ಗೊರೂರು ಅವರು ತಮ್ಮ 88 ನೇ ವರ್ಷದಲ್ಲಿ ದಿನಾಂಕ 28-9-91 ರಂದು ನಿಧನ ಹೊಂದಿದರು. ಕನ್ನಡದಲ್ಲಿ ಹಾಸ್ಯ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ಸಲ್ಲಿಸಿರುವ ಇವರ ಸಾಹಿತ್ಯ ಕೃತಿ ಅಮೂಲ್ಯವಾದದ್ದು. ತಮ್ಮ ಜೀವನದಲ್ಲೇ ಹಾಸ್ಯವನ್ನು ತುಂಬಿಕೊಂಡಿದ್ದ ಗೊರೂರರು ಮೌಲಿಕವಾದ ಬದುಕನ್ನು ಬಾಳಿದವರು. ಅವರ 'ಅಮೆರಿಕದಲ್ಲಿ ಗೊರೂರು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ. ೧೯೬೯ ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವಿಸಿದೆ ೧೯೭೪ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌ|| ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿದೆ. ಶಿರಸಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ದಿವಂಗತರು ಪ್ರತಿಷ್ಠಾನದ ಗೌರವ ಸದಸ್ಯರಾಗಿದ್ದರು.

**ಡಾ|| ಶಂಬಾ ಜೋಶಿ :**

ಡಾ|| ಶಂಬಾ ಜೋಶಿಯವರು ಸುಪ್ರಸಿದ್ಧ ಸಾಹಿತಿ ಹಾಗೂ ಅದ್ವಿತೀಯ ಸಂಶೋಧಕರು. ಬೆಳಗಾವಿ ಜಿಲ್ಲೆಯ ಗುರ್ಲ ಹೊಸೂರಿನಲ್ಲಿ ೧೮೯೬ ರಲ್ಲಿ ಜನಿಸಿದ ಶಂಬಾ ೯೬ ವರ್ಷ ತುಂಬು ಜೀವನ ನಡೆಸಿ ೨೮-೯-೧೯೯೧ ರಂದು (ಡಾ|| ಗೊರೂರು ಅವರು ಅಗಲಿದಂದೇ) ದೈವಾಧೀನರಾದರು.

ಸಂಸ್ಕೃತ-ಕನ್ನಡ-ಮರಾಠಿ ಭಾಷೆಗಳಲ್ಲಿ ಅತಿಶಯ ಪ್ರಾವೀಣ್ಯ ಪಡೆದಿದ್ದರು. ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ, ನಾಗ ಪ್ರತಿಮೆ, ಹಿಂದು ಎಂಬ ಧರ್ಮ, ಪ್ರವಾಹ ಪತಿತರ ಕರ್ಮ, ಕನ್ನಡಿಯ ಹುಟ್ಟು, ಮುಂತಾದವು ಇವರ ಪಾಂಡಿತ್ಯ ಪೂರ್ಣ ಸಂಶೋಧಾತ್ಮಕ ಕೃತಿಗಳು.

೧೯೮೧ ರಲ್ಲಿ ಮಡಿಕೇರಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅವರು ಬರೆದ "ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ" ಎಂಬ ಕೃತಿಗೆ ಕೇಂದ್ರದ ಹಾಗೂ ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಪ್ರಾಪ್ತವಾಗಿವೆ.

ಬಿ. ಎಂ. ಶ್ರೀ ಪ್ರತಿಷ್ಠಾನದ ಅಭಿಮಾನಿಗಳಾಗಿದ್ದ ಡಾ|| ಶಂಬಾ ಇದರ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಶಂಬಾ ಅಭಿನಂದನ ಸಮಿತಿ ಪ್ರತಿಷ್ಠಾನದಲ್ಲಿಟ್ಟ ಶಂಬಾ ಹೆಸರಿನ ದತ್ತಿನಿಧಿಗೆ ಡಾ|| ಶಂಬಾ ಅವರೇ ಇನ್ನಷ್ಟು ಹಣವನ್ನು ಕೂಡಿಸಿಕೊಟ್ಟಿದ್ದರು. ಪ್ರತಿಷ್ಠಾನದ ಗೌರವ ಸದಸ್ಯರೂ ಆಗಿದ್ದ ಡಾ|| ಶಂಬಾ ಜೋಶಿ ಅವರು ವಿಚಾರ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

**ನವರತ್ನರಾಂ :**

ಹೆಸರಾಂತ ಕಾದಂಬರಿಕಾರರಾದ ನವರತ್ನರಾಂ ಅವರು 17-10-91 ರಂದು ನಿಧನ ಹೊಂದಿದರು. ಹಲವಾರು ಕಾದಂಬರಿಗಳ ಮೂಲಕ ಜನಮನದಲ್ಲಿ ಮನೆ ಮಾಡಿರುವ ನವರತ್ನರಾಂ ಅನೇಕ ಏಕಾಂಕಗಳನ್ನು ಬರೆದಿದ್ದಾರಲ್ಲದೆ ಕೆಲವು ಚಲನ ಚಿತ್ರಗಳಿಗೆ ಸಂಭಾಷಣಕಾರರಾಗಿಯೂ ದುಡಿದಿದ್ದಾರೆ. ಗೆಜ್ಜೆ ಪೂಜೆಯ ಸಂಭಾಷಣೆಗೆ ಪ್ರಶಸ್ತಿ ಬಂದಿದ್ದನ್ನೂ ಇಲ್ಲಿ ಸ್ಮರಿಸಬಹುದು. ಕನ್ನಡ ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದ ನವರತ್ನರಾಂ ಅವರ 'ಪ್ಯಾರಿಸ್ಸಿನಿಂದ ಪ್ರೇಯಸಿಗೆ' ಕೃತಿ ಉತ್ತಮ ಪ್ರವಾಸ ಸಾಹಿತ್ಯವೆನಿಸಿದೆ.

.... o ....

# ಲೇಖಕರ ವಿಳಾಸಗಳು

1 ಡಾ|| ಕೃಷ್ಣ ಪರಮೇಶ್ವರ ಭಟ್ಟ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನ ಭಾರತಿ, ಬೆಂಗಳೂರು-56

2 ಎಸ್. ಶಿವಣ್ಣ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನ ಭಾರತಿ, ಬೆಂಗಳೂರ.56

3 ಸಿ. ಓಂಕಾರಪ್ಪ
ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು-1

4 ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರೀ
ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.6

5 ಡಾ|| ಶಂಕರ ಮೊಕಾಶಿ ಪುಣೇಕರ
ಪುಣೇಕರ ಬಂಗ್ಲೆ, ಮಾಳಮಡ್ಡಿ ರೋಡ್, ಧಾರವಾಡ.580007

6 ಶ್ರೀಧರ ಎಚ್. ಜಿ.
ಕನ್ನಡ ಉಪನ್ಯಾಸಕ, ವಿವೇಕಾನಂದ ಕಾಲೇಜು,
ಪುತ್ತೂರು, ದ ಕ. 574203

7 ಯು. ಕೃಷ್ಣಶರ್ಮ
ಶ್ರೀ ಸುಬ್ರಹ್ಮಣ್ಯ ದೇವಾಲಯ, ವಿಶ್ವೇಶ್ವರಪುರ, ಬೆಂಗಳೂರು.4

(ರಕ್ಷಾಪುಟದಿಂದ ಮುಂದುವರಿದಿದ)

ವಿನಿಮಯ ಪತ್ರಿಕೆಗಳು

1. ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ (ಮೈಸೂರು), 2. ಸಾಧನೆ (ಬೆಂಗಳೂರು), 3. ಗ್ರಂಥಲೋಕ (ಮೈಸೂರು), 4. ತರಳಬಾಳು (ಸಿರಿಗೆರೆ), 5. ಅಂಕಣ (ಬೆಂಗಳೂರು), 6. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ನುಡಿ (ಬೆಂಗಳೂರು), 7. ಶಂಕರ ಭಾಸ್ಕರ (ಬೆಂಗಳೂರು), 8. ಸುಗುಣಮಾಲಾ (ಉಡುಪಿ).

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಲೇಖಕರು ಕಳಿಸಬೇಕು.

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ; ಆದರೆ ಕಳಿಸಿದರೆ, 'ಸ್ವೀಕಾರ' ಭಾಗದಲ್ಲಿ ಗಮನಿಸಲಾಗುವುದು. ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

## ತಿಮ್ಮಪ್ಪದಾಸ ಪ್ರಕಾಶನ ಮಾಲೆ

| | | |
|---|---|---|
| 24 | ಕೀರ್ತನ ಕುಸುಮಾಂಜಲಿ | 10-00 |
| 25 | ಧ್ರುವ ಚರಿತ್ರೆ* | 15-00 |
| 26 | ಶ್ರೀಕೃಷ್ಣ ಬಾಲಲೀಲೆ ಭಾಗ-೧ * | 75-00 |
| 27 | „ ಭಾಗ-೨ * (ಅಚ್ಚಿನಲ್ಲಿ) | 75-00 |

## ಜನ್ಮಶತಾಬ್ದಿ ಸ್ಮೃತಿಮಾಲೆ

| | | |
|---|---|---|
| 28 | ಶ್ರೀವಾಣಿ (ಸೂಕ್ತಿ ಸಂಗ್ರಹ) | 1-00 |
| 29 | ಆಚಾರ್ಯ ಬಿ.ಎಂ.ಶ್ರೀ. (ಜೀವನ ಚಿತ್ರ) | 2-00 |
| 30 | ಕನ್ನಡ ಕಣ್ವ ಬಿ.ಎಂ.ಶ್ರೀ. (ಮಕ್ಕಳಿಗೆ) | 1-50 |
| 31 | ಶ್ರೀಯವರ ಆಯ್ದ ಕವನಗಳು | 2-00 |
| 32 | ಶ್ರೀನಿಧಿ (ಸಂಸ್ಮರಣ ಸಂಪುಟ) | 60-00 |
| 33 | B.M.S : The Man and His Mission | 25-00 |
| 34 | ಶ್ರೀಗಂಧ (ಸಂಸ್ಮರಣ ಸಂಚಿಕೆ) | 10-00 |
| 35 | ಇಂಗ್ಲೀಷ್ ಗೀತೆಗಳು (ಆಂಗ್ಲ ಮೂಲ ಕವನಗಳೊಂದಿಗೆ 20.00) | 12-00 |
| 36 | The Improvement of Kannada–B.M. Sri. | 6-00 |
| 37 | ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯ | 4-00 |
| 38 | ಭಾರತದ ಶ್ರೀಕೃಷ್ಣ | 6-00 |
| 39 | ಅಶ್ವತ್ಥಾಮ ('ಶ್ರೀ' ನಾಟಕದ ಸರಳಾನುವಾದ) | 6-00 |

## ದಶಮಾನೋತ್ಸವ ಸ್ಮೃತಿ ಮಾಲೆ

| | | |
|---|---|---|
| 40 | ಭಾಷಾಂತರ ಕಲೆ | 15-00 |
| 41 | ಸೃಜನಶೀಲತೆ ಮತ್ತು ಪಾಂಡಿತ್ಯ | 10-00 |
| 42 | ಹೊಸಗನ್ನಡದ ವ್ಯಾಕರಣ | 15-00 |
| 43 | ಸಾಹಿತ್ಯ-ಮನಶ್ಶಾಸ್ತ್ರ (ಸಿದ್ಧತೆಯಲ್ಲಿ) | |
| 44 | ತೌಲನಿಕ ಸಾಹಿತ್ಯ | |
| 45 | ವೈಚಾರಿಕ ಜಾಗೃತಿ | |
| 46 | ಕರ್ನಾಟಕ ಸಂಸ್ಕೃತಿ ಭಾರತೀಯತೆ „ | |
| 47 | ಹಸ್ತಪ್ರತಿ ಶಾಸ್ತ್ರ „ | |
| 48 | ಶಾಸನ ಪಠ್ಯ | |
| 49 | ಅಂತರರಾಷ್ಟ್ರೀಯ ಕಾನೂನು | |

# ಪ್ರತಿಷ್ಠಾನದ ಪ್ರಕಟನೆಗಳು

| | | |
|---|---|---|
| 1 | ಮಣಿಹ (ಫ ಗು. ಹಳಕಟಿ ಸಂಸ್ಕರಣ ಸಂಪುಟ) | 50-00 |
| 2 | ಬೇಂದ್ರೆ ಸ್ಮೃತಿ ** | 5-00 |
| 3 | ಸರ್ವಜ್ಞ ವಚನಗಳು ** | 15-00 |
| 4 | ಸೂತ ಭಾರತ* | 15-00 |
| 5 | ಶ್ರೀಕೃಷ್ಣದೇವರಾಯ ದಿನಚರಿ* | 10-00 |
| 6 | ಹಸ್ತಪ್ರತಿ ಶಾಸ್ತ್ರ* | 15-00 |
| 7 | ಮಾಸ್ತಿ ಸ್ಮರಣೆ | 15-00 |
| 8 | ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ-: ಭಾಗ-೧ * | 20-00 |
| 9 | Early vijayanagara in itsHistory & Culture* | 60-00 |
| 10 | ಸಂಗಮರ ಕಾಲದ ವಿಜಯನಗರ* | 75-00 |
| 11 | Soverier of Vijayanagara Seminer ** | 10-00 |
| 12 | ಮರುನ್ನಂದನ ಶತಕಂ * | 5-00 |
| 13 | ಚಂದ್ರ ಚೂಡಾಮಣಿ ಶತಕ* | 10-00 |
| 14 | ಶ್ರೀನಿವಾಸ ಕಲ್ಯಾಣ | 10-00 |
| 15 | ಕನ್ನಡ ಸಾಹಿತ್ಯದಲ್ಲಿ ಅದ್ವೈತ* | 10-00 |
| 16 | ಕುಮಾರವ್ಯಾಸ ಭಾರತದ ಸಂಗ್ರಹ (ಉತ್ತಮ ಪ್ರತಿ : 75-00*) | 40-00 |
| 17 | ಕದಂಬ (ಎಂ.ವಿ.ಸೀ. ಸಂಸ್ಮರಣ ಸಂಪುಟ ಸಿದ್ಧತೆಯಲ್ಲಿ) | |
| 18 | ಎಂ. ವಿ. ಸೀ. ಸಂಸ್ಮರಣೆ (ಸಿದ್ಧತೆಯಲ್ಲಿ) | |

## ದತ್ತಿ ಉಪನ್ಯಾಸ ಮಾಲೆ

| | | |
|---|---|---|
| 19 | ಮೂರು ದತ್ತಿ ಉಪನ್ಯಾಸಗಳು | 10-00 |
| 20 | ವೈವಸ್ವತ ಮನು | 5-00 |
| 21 | ಸ್ವಾಯಂಭುವ ಮನು : ವೈವಸ್ವತಮನು-ತೌಲನಿಕ ಅಧ್ಯಯನ | 5-00 |
| 22 | ಮೂರು ದತ್ತಿ ಉಪನ್ಯಾಸಗಳು —೧೯೮೪ | 10-00 |
| 23 | ದತ್ತಿ ಉಪನ್ಯಾಸಗಳು—೧೯೮೬ | 10-00 |
| 24 | ದತ್ತಿ ಉಪನ್ಯಾಸಗಳು—೧೯೮೮ | 10-00 |